
# ಶಿವಾನಂದ ಲಹರಿ



ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ - 573211

2004

# ಭಕ್ತರ ಪ್ರೇಮವನ್ನು ಉಕ್ಕೇರಿಸುವ
# ಕೆಲವು ಸ್ತೋತ್ರ, ಪದ, ಪದ್ಯ - ಗ್ರಂಥಗಳು

1. **ಶಿವಾನಂದಲಹರೀ:** ಹೆಸರಿಗೆ ತಕ್ಕಂತೆ ಭಕ್ತರ ಹೃದಯದಲ್ಲಿ ಆನಂದದ ಹೆದ್ದೆರೆಗಳನ್ನು ಎಬ್ಬಿಸುವ ಭಕ್ತಪರವಾದ ಸ್ತೋತ್ರವಿದು. ಪರಮೇಶ್ವರನ ಮೂರ್ತಿದರ್ಶನ, ಪೂಜೆ, ಮಂತ್ರ, ಜಪ, ಸ್ತುತಿ, ಕೀರ್ತನೆ, ಸೇವೆ, ಧ್ಯಾನ- ಮುಂತಾದ ವಿಧಾನಗಳಿಂದ ಭಕ್ತನು ಹೇಗೆ ಆ ಪರವಸ್ತುವನ್ನು ತನ್ನ ಹೃದಯದಲ್ಲಿಟ್ಟುಕೊಂಡು ಸಂತತವಾಗಿ ಆನಂದಪಡಿಸಬಹುದು ಎಂಬುದನ್ನು ತಿಳಿಸಿಕೊಡುತ್ತದೆ. ಈಗ ಇದು ನಿಮ್ಮ ಕೈಯಲ್ಲಿದೆ. **(ಮೂರನೆಯ ಮುದ್ರಣ ಪುಟಗಳು ಡೆಮ್ಮಿ 4+78)**

2. **ಶಿವನಾಮ ಅಷ್ಟೋತ್ತರ ಶತಕ:** ಶಿವರಹಸ್ಯದಲ್ಲಿರುವ ಗೌರೀ-ನಾರಾಯಣ ಸಂವಾ ರೂಪವಾದ ಸ್ತೋತ್ರವಿದು. ಅರ್ಥ ವಿವರಣೆ ಸಹಿತವಾಗಿದೆ. ಅಷ್ಟೋತ್ತರ ಶತನಾಮಾವಳಿಯನ ಕೊಟ್ಟಿದೆ. **(ಮೂರನೆಯ ಮುದ್ರಣ : 1992. ಪು. ಕ್ರೌನ್ 4+42**

3. **ಶಿವಮಹಿಮ್ನ ಸ್ತೋತ್ರ:** ಶಿವಭಕ್ತರಿಗೆಲ್ಲ ಪ್ರಿಯವಾಗಿರುವ ಪುಷ್ಪದಂತ ವಿರಚಿತವಾದ ಈ ಸ್ತೋತ್ರದ ಮೂಲ ಪ್ರತಿಪದಾರ್ಥ, ತಾತ್ಪರ್ಯ, ವಿವರಣೆಗಳೊಡನೆ ಕೂಡಿದೆ.

**(ಎರಡನೆಯ ಮುದ್ರಣ: 1974 ಪು. ಕ್ರೌನ್ 6+72**

4. **ಶಿವಕವಚ:** ಭದ್ರಾಯುವೆಂಬ ರಾಜಕುಮಾರನಿಗೆ ಋಷಭಯೋಗೀಶ್ವರರೆಂಬ ಮಹಾತ್ಮ ಉಪದೇಶಿಸಿದ ಸ್ತೋತ್ರವಿದು. ಸ್ಕಾಂದಪುರಾಣದ ಬ್ರಹ್ಮೋತ್ತರ ಖಂಡದಿಂದ ಆರಿಸಿದ ಈ ಸುಪ್ರಸಿ ಸ್ತೋತ್ರವನ್ನು ಮೂಲ ಅರ್ಥ, ವಿವರಣೆಗಳ ಸಮೇತವಾಗಿ ಪ್ರಕಟಿಸಿದೆ.

**(ಐದನೆಯ ಮುದ್ರಣ 1999 ಪು. ಕ್ರೌನ್ 4+56**

5. **ಮುಕುಂದಮಾಲಾ:** ಕುಲಶೇಖರಾಚಾರ್ಯರಿಂದ ವಿರಚಿತವಾದ ಈ ಭಕ್ತಿಪ್ರಧಾ ಸ್ತೋತ್ರವು ವಿಷ್ಣುಭಕ್ತರಿಗೆಲ್ಲ ಪ್ರಿಯವಾಗಿರುತ್ತದೆ. ಭಗವದ್ಭಕ್ತಿಯ ಮರ್ಮವನ್ನು ವಿವರಿಸುವ ಈ ಪದ್ಯಗಳು ಹಾಡಿ ನಲಿಯಲು ಯೋಗ್ಯವಾಗಿವೆ. ಮೂಲ, ಅರ್ಥ, ಪಾಠಾಂತರಗಳನ್ನು ಕೊಟ್ಟಿದೆ.

**(ಐದನೆಯ ಮುದ್ರಣ: 1991 ಪು. ಕ್ರೌನ್ 4+20**

6. **ಭೀಷ್ಮಸ್ತವರಾಜ: (ಸ್ತೋತ್ರಮಾಲಾಭಾಗ 1)** ಮಹಾಭಾರತದಿಂದ ಆರಿಸಿದ ಸ್ತೋತ್ರ ಸುಪ್ರಸಿದ್ಧ ಜ್ಞಾನಿಗಳೂ ಭಕ್ತರೂ ಉಪಾಸಕರೂ ಆದ ಭೀಷ್ಮಾಚಾರ್ಯರು ದೇಹವನ್ನು ಬಿಡು ಕಾಲದಲ್ಲಿ ಶ್ರೀ ಕೃಷ್ಣನು ಎದುರಿಗೆ ಇದ್ದಾಗ ಮಾಡಿದ ಉತ್ತಮ ಸ್ತೋತ್ರವಿದು. ಪಾಠಾಂತರ ಸಮೇ ಮೂಲ ಭಾವಾರ್ಥಗಳನ್ನೊಳಗೊಂಡಿದೆ. **(ಎರಡನೆಯ ಮುದ್ರಣ: 1999 ಪು. ಡೆಮ್ಮಿ 8+95**

7. **ಮೂಲರಾಮಾಯಣ :** ಶ್ರೀಮದ್ವಾಲ್ಮೀಕಿರಾಮಾಯಣದ ಬಾಲಕಾಂಡದ ಮೊದಲನೆ ಸರ್ಗವನ್ನು ಮೂಲ, ಕನ್ನಡ ಅನುವಾದ ಸಮೇತ ಕೊಡಲಾಗಿದೆ. ರಾಮಾಯಣದ ಪೂರ್ಣ ಕಥೆಯ ಸಂಕ್ಷೇಪವಾಗಿದೆ. **(ನಾಲ್ಕನೆಯ ಮುದ್ರಣ: 1999 ಪು. ಕ್ರೌನ್ 4+22)**

---

ರಕ್ಷಾಪುಟದ ಮರುಹಾಳೆಯಲ್ಲಿ ಮುಂದುವರೆದಿದೆ.

ಅಧ್ಯಾತ್ಮಗ್ರಂಥಾವಳಿ

# ಶಿವಾನಂದಲಹರೀ

(ಅರ್ಥ, ವಿವರಣೆ - ಇವುಗಳೊಡನೆ)

ಬರೆದವರು :

ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರು

ಕ್ರಮಾಂಕ. ೧೧೯

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ-573211

ದೂರವಾಣಿ: 08175-273820

2004

ಮೊದಲನೆಯ ಮುದ್ರಣ : 1962 - 1,000 ಪ್ರತಿಗಳು
ಎರಡನೆಯ ಮುದ್ರಣ : 1993 - 1,000 ಪ್ರತಿಗಳು
ಮೂರನೆಯ ಮುದ್ರಣ : 2004 - 2,000 ಪ್ರತಿಗಳು

ಪುಟಗಳು : 4+78

ಬೆಲೆ: 20 ರೂ/

ಇದರ ಹಕ್ಕುಗಳೆಲ್ಲವೂ
ಅಧ್ಯಾತ್ಮಪ್ರಕಾಶಕಾರ್ಯಾಲಯದವು
All Rights Reserved

ಅಕ್ಷರ ಜೋಡಣೆ:
**ಶ್ರೀಮಾರುತಿ ಗ್ರಾಫಿಕ್ಸ್**
ನಂ. 44, 6ನೇ ಮುಖ್ಯರಸ್ತೆ
3ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ : 2676 6433

ಮುದ್ರಣ :
**ಶ್ರೀ ಗಣೇಶ ಮಾರುತಿ ಪ್ರಿಂಟರ್ಸ್**
ನಂ. 76, 6ನೇ. ಮುಖ್ಯರಸ್ತೆ
3ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ : 2676 6342

## ಬಿನ್ನಹ

ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀಮಹಾಸ್ವಾಮಿಗಳು ಬರೆದು ಅನುಗ್ರಹಿಸಿರುವ ಗ್ರಂಥಗಳಲ್ಲಿ ಸಿದ್ಧಾಂತಪ್ರಧಾನವಾದ ಪ್ರಸ್ಥಾನತ್ರಯ ಭಾಷ್ಯಗಳಲ್ಲದೆ ಸ್ತೋತ್ರಗ್ರಂಥಗಳೂ ಕೆಲವು ಸೇರಿರುತ್ತವೆ. ಇವುಗಳ ವಿವರಣೆಗಳಲ್ಲಿ ಲೇಖಕರು ಅಧ್ಯಾತ್ಮಸಾಧನಗಳು, ವರ್ಣಾಶ್ರಮಧರ್ಮಕರ್ಮಗಳು, ಶಿಷ್ಟಾಚಾರ, ನೀತಿನಿಯಮಗಳಿಗೆ ಒತ್ತುಕೊಟ್ಟು ವಿಷಯಗಳನ್ನು ಪ್ರತಿಪಾದಿಸಿದ್ದಾರೆ. ಅವರ ಉಪನ್ಯಾಸಗ್ರಂಥಗಳಲ್ಲಿಯೂ ಇಂಥ ವಿಷಯಗಳ ಪ್ರಸ್ತಾಪವು ಇದ್ದೇ ಇರುತ್ತದೆ. ಆದ್ದರಿಂದ ಓದುಗರು ಅಧ್ಯಾತ್ಮವಿದ್ಯೆಯ ಸಿದ್ಧಾಂತಸಾಧನಗಳ ಪೂರ್ಣಪರಿಚಯಮಾಡಿಕೊಳ್ಳಬೇಕಾದಲ್ಲಿ ಶ್ರೀ ಶ್ರೀಗಳವರ ಇಡಿಯ ಗ್ರಂಥ ಮಾಲೆಯನ್ನೇ ಅಧ್ಯಯನಮಾಡುವದು ಅವಶ್ಯವಾಗಿದೆ. ಆದ್ದರಿಂದಲೇ ನಾವು ಲೇಖಕರ ಎಲ್ಲಾ ಗ್ರಂಥಗಳನ್ನು, ಪ್ರತಿಗಳು ಮಾರಾಟವಾದಂತೆಲ್ಲ ಮತ್ತೆ ಪುನರ್ಮುದ್ರಿಸಿ ಪ್ರಚಾರಮಾಡುತ್ತಿದ್ದೇವೆ. **ಎರಡನೆಯ ಬಾರಿಗೆ** ಈ ಗ್ರಂಥವು 1993ರಲ್ಲಿ ಮುದ್ರಿತವಾಗಿತ್ತು. ಈಗ ಆ ಪ್ರತಿಗಳೆಲ್ಲಾ ಮಾರಾಟವಾಗಿರುವುದರಿಂದ ತಪ್ಪುಗಳನ್ನೆಲ್ಲಾ ತಿದ್ದಿ ಪುನಃ ಪರಿಷ್ಕರಿಸಿ **ಮೂರನೆಯ ಬಾರಿಗೆ** ಮುದ್ರಿತವಾಗಿ ಹೊರ ತರಲಾಗಿದೆ.

**''ಶಿವಾನಂದಲಹರೀ''** ಸ್ತೋತ್ರದ ವಿಚಾರವಾಗಿ ತಿಳಿಸಬೇಕಾದ ಮುಖ್ಯ ವಿಷಯಗಳನ್ನು ಲೇಖಕರು ಪೀಠಿಕೆಯಲ್ಲಿಯೇ ಪ್ರಸ್ತಾಪಿಸಿರುತ್ತಾರೆ. ಆದ್ದರಿಂದ ವಾಚಕರು ಈ ಕೃತಿಯನ್ನು ಓದಿ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಪ್ರಾರ್ಥಿಸಿದೆ.

ವಾಚಕರು ಎಂದಿನಂತೆ ಈ ಗ್ರಂಥವನ್ನು ಆದರದಿಂದ ಬರಮಾಡಿಕೊಳ್ಳುವರೆಂದು ಆಶಿಸಲಾಗಿದೆ.

13-10-2004
ತಾರಣ ಸಂವತ್ಸರ
ಕಾರ್ತಿಕ ಶುದ್ಧ ಪಾಡ್ಯ, ಶನಿವಾರ

ಪ್ರಕಾಶಕರು

# ಪೀಠಿಕೆ

"ಶಿವಾನಂದಲಹರೀ" ಎಂಬ ಹೆಸರಿನಿಂದ ಸುಪ್ರಸಿದ್ಧವಾಗಿರುವ ಈ ಸ್ತೋತ್ರವು ಅನ್ವರ್ಥವಾಗಿಯೂ ಶಿವಭಕ್ತರ ಮನಸ್ಸಿನಲ್ಲಿ ಆನಂದದ ಹೆದ್ದೆರೆಗಳನ್ನು ಎಬ್ಬಿಸುವದಾಗಿರುತ್ತದೆ. ಪರಮೇಶ್ವರನ ಮೂರ್ತಿದರ್ಶನ, ಪೂಜೆ, ಮಂತ್ರಜಪ, ಸ್ತುತಿ, ಕೀರ್ತನೆ, ಧ್ಯಾನ - ಮುಂತಾದ ಬಗೆಬಗೆಯ ವಿಧಾನಗಳಿಂದ ಭಕ್ತನು ಹೇಗೆ ಆ ಪರವಸ್ತುವನ್ನು ತನ್ನ ಹೃದಯದಲ್ಲಿಟ್ಟುಕೊಂಡು ಸಂತತವಾಗಿ ಆನಂದ ಪಡಬಹುದು, ಅದರಿಂದ ಅವನು ವಾಸಿಸುವ ಸ್ಥಳವನ್ನೇ ಹೇಗೆ ಕೈಲಾಸವನ್ನಾಗಿ ಮಾಡಿಕೊಳ್ಳಬಹುದು, ಸಂಸಾರದ ತಾಪತ್ರಯವನ್ನೆಲ್ಲ ಹೇಗೆ ನಾಶಗೊಳಿಸಿ ಕೊಂಡು ಇಹಪರಸುಖಗಳನ್ನೂ ಪರಂಪರೆಯಿಂದ ಪರಮಪುರುಷಾರ್ಥವಾದ ಮೋಕ್ಷವನ್ನೂ ಪಡೆದುಕೊಳ್ಳಬಹುದು- ಎಂಬುದನ್ನು ಈ ಸ್ತೋತ್ರವು ತೋರಿಸಿ ಕೊಡುತ್ತದೆ.

ಈ ಗ್ರಂಥವು ಶ್ರೀಶಂಕರಭಗವತ್ಪಾದಕೃತವೆಂದೇ ಅನೇಕರು ಈಗಲೂ ನಂಬಿರುತ್ತಾರೆ. ಇದು ಸಂಶಯಾಸ್ಪದವೆನ್ನುವದಕ್ಕೆ ಸ್ತೋತ್ರದಲ್ಲಿ ಬರುವ ಅನೇಕ ಐತಿಹಾಸಿಕಘಟನೆಗಳು ಪುಷ್ಟಿಯನ್ನು ಕೊಡುತ್ತಿವೆ. ಮಹಾಶಿವಭಕ್ತರಾದ ಶ್ರೀ ಅಪ್ಪಯ್ಯದೀಕ್ಷಿತರು ಇದನ್ನು ಬರೆದಿರಬಹುದೆ ?- ಎಂದು ಕೆಲವರು ವಿತರ್ಕಮಾಡುತ್ತಾರೆ. ಇನ್ನು "ಯಥಾ ಚೋಕ್ತಮ್ ಅಸ್ಮದ್ದೀಕ್ಷಿತ ಚರಣೈಃ **ಶಿವಾನಂದಲಹರ್ಯಾಮ್**-"

'ಶಿವೋಽಬ್ಜ್ಞಾನಕ್ರಿಯೇಚ್ಛಾಬಲಕರಣಮನಃಶಾನ್ತಿತೇಜಃಶರೀರ....।'

ಎಂದು ಮುಂತಾಗಿ 'ಶಿವಾಷ್ಟೋತ್ತರವ್ಯಾಖ್ಯಾನ'ದಲ್ಲಿ ನೀಲಕಂಠದೀಕ್ಷಿತರು ಪರಾಮರ್ಶಿಸಿರುವ ಶಿವಾನಂದಲಹರೀಯ ಶ್ಲೋಕವು ಇಲ್ಲಿಲ್ಲ. 'ಶಿವಾನಂದಲಹರೀ' ಎಂಬ ಹೆಸರಿನ ಅನೇಕ ಗ್ರಂಥಗಳು ಶೈವರಲ್ಲಿದ್ದವೆಂದು ಊಹಿಸಬಹುದಾಗುತ್ತದೆ.

ಇದೂ ಹೇಗಾದರೂ ಇರಲಿ, 'ಶ್ರೀಮದಾಚಾರ್ಯಕೃತಿ' ಎಂಬ ಹೆಸರನ್ನು ಪಡೆದಿರುವ ಈ ಗ್ರಂಥದ ಅನುವಾದದಿಂದ ಭಕ್ತರಿಗೆ ಒಂದಿಷ್ಟಾದರೂ ಪ್ರಯೋಜನವಾದರೆ ನಾನು ಧನ್ಯನು.

**ಅನುವಾದಕ.**

## ಒದುಗರಿಗೆ

**ಶಿವಕವಚ, ಶಿವನಾಮಾಷ್ಟೋತ್ತರಶತಕ, ಶಿವಮಹಿಮ್ನಃಸ್ತೋತ್ರ, ಶಿವಾನಂದಲಹರೀ - ಈ ಸ್ತೋತ್ರಗಳನ್ನು ಒಂದೊಂದಾಗಿ ಕಂಠಪಾಠ ಮಾಡಿಕೊಂಡು ಪ್ರತಿದಿನವೂ ಸಾಯಂಕಾಲದಲ್ಲಿ ಪಠನಮಾಡುವದರಿಂದ ಶಿವಭಕ್ತಿಯನ್ನು ಬೆಳೆಯಿಸಿಕೊಳ್ಳಲು ಸಹಾಯವಾಗುವದು. ಅಧ್ಯಾತ್ಮ ಪ್ರಕಾಶ ಕಾರ್ಯಾಲಯದಲ್ಲಿ ಮೇಲ್ಕಂಡ ನಾಲ್ಕು ಗ್ರಂಥಗಳೂ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರಿಂದ ಅನುವಾದಿಸಲ್ಪಟ್ಟು ಪ್ರಕಟಿತವಾಗಿವೆ. ಶಿವಭಕ್ತರು ಇವುಗಳ ಲಾಭವನ್ನು ಪಡೆದುಕೊಳ್ಳಬಹುದಾಗಿದೆ.**

|| ಓಂ ||

# ಶಿವಾನಂದಲಹರೀ

## ಮಂಗಲ

ಕಲಾಭ್ಯಾಂ ಚೂಡಾಲಂಕೃತಶಶಿಕಲಾಭ್ಯಾಂ ನಿಜತಪಃ -
ಫಲಾಭ್ಯಾಂ ಭಕ್ತೇಷು ಪ್ರಕಟಿತಫಲಾಭ್ಯಾಂ ಭವತು ಮೇ ।
ಶಿವಾಭ್ಯಾಮಸ್ತೋಕತ್ರಿಭುವನಶಿವಾಭ್ಯಾಂ ಹೃದಿ ಪುನ -
ರ್ಭವಾಭ್ಯಾಮಾನನ್ದಸ್ಫುರದನುಭವಾಭ್ಯಾಂ ನತಿರಿಯಮ್ ॥೧॥

೧. ಜಗತ್ಕಾರಣರೂಪರೂ, ತಲೆಯಲ್ಲಿ ಚಂದ್ರಕಲೆಯನ್ನು ಧರಿಸಿರುವವರೂ, ತಮ್ಮ ತಪಸ್ಸಿನ ಫಲವಾಗಿರುವವರೂ, ಭಕ್ತರಲ್ಲಿ ಪ್ರಕಟಿಸಲ್ಪಟ್ಟ ಫಲವುಳ್ಳವರೂ, ವಿಶಾಲವಾದ ಮೂರುಲೋಕಕ್ಕೂ ಕಲ್ಯಾಣವನ್ನುಂಟು ಮಾಡುವವರೂ, ಹೃದಯದಲ್ಲಿ ಮತ್ತೆ ಉಂಟಾಗುವವರೂ, ಆನಂದದಿಂದ ತೋರಿಕೊಳ್ಳುವ ಅನುಭವಸ್ವರೂಪರೂ ಆಗಿರುವ ಶಿವರಿಗೆ ಈ ನನ್ನ ನಮಸ್ಕಾರವು !

## ವಿವರಣೆ

ಶಿವಾಭ್ಯಾಮ್ (ನತಿರಿಯಮ್) - ಶಿವನಿಗೂ ಶಿವೆಗೂ ಈ ನಮಸ್ಕಾರ ! ಪಾರ್ವತೀಪರಮೇಶ್ವರರು ಅರ್ಧನಾರೀಶ್ವರನ ರೂಪದಿಂದ ಕೂಡಿರುವ ಸಾಂಬಶಿವ ಮೂರ್ತಿಯನ್ನೇ ಇಲ್ಲಿ ಸ್ಮರಿಸಿರುವದರಲ್ಲಿ ಒಂದು ಔಚಿತ್ಯವುಂಟು. ಹೇಗೆಂದರೆ, 'ಶಿವ' ಎಂಬುದು ನಿಷ್ಕಲವಾದ ಪರತತ್ತ್ವದ ಹೆಸರೆಂದೂ 'ಪರಮೇಶ್ವರ'ನೆಂಬುದು ಸಕಲವಾದ ಕಾರ್ಯರೂಪದ ಹೆಸರೆಂದೂ 'ಸದಾಶಿವ' ಎಂಬುದು ಸಕಲನಿಷ್ಕಲ ರೂಪವಾದದ್ದೆಂದೂ ಶೈವಶಾಸ್ತ್ರಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಇಷ್ಟಪ್ರಾಪ್ತಿಯನ್ನು ಬಯಸುವವರು ಪ್ರಾರ್ಥಿಸುವದಕ್ಕೆಂದು ಸಕಲನಿಷ್ಕಲ ರೂಪವಾದ ಅರ್ಧನಾರೀಶ್ವರ ಮೂರ್ತಿಯನ್ನೇ ಇಲ್ಲಿ ಪ್ರಾರ್ಥಿಸಿರುತ್ತದೆ. ಸ್ತೋತ್ರಕ್ಕಾಗಿ ಶರೀರೇಂದ್ರಿಯಗಳ ಧರ್ಮಗಳನ್ನು ಇಲ್ಲಿ ಉಪಯೋಗಿಸಿದೆ.

''ವಿದ್ಯಾಸು ಶ್ರುತಿರುತ್ಕೃಷ್ಟಾ ರುದ್ರೈಕಾದಶಿನೀ ಶ್ರುತೌ । ತತ್ರ ಪಞ್ಚಾಕ್ಷರೀ ತಸ್ಯಾಂ

ಶಿವ ಇತ್ಯಕ್ಷರದ್ವಯಮ್ ॥'' ಎಂಬುದೊಂದು ಪುರಾಣವಚನ. ವಿದ್ಯೆಗಳಲ್ಲಿ ಶ್ರುತಿಯೇ ಹೆಚ್ಚಿನದು; ಶ್ರುತಿಯಲ್ಲಿ ಏಕಾದಶಾನುವಾಕಗಳಿರುವ ರುದ್ರವು ಹೆಚ್ಚಿನದು ; ಅದರಲ್ಲಿಯೂ ಪಂಚಾಕ್ಷರಿಯು ಹೆಚ್ಚಿನದು ; ಅದರಲ್ಲಿಯೂ 'ಶಿವ' ಎಂಬ ಎರಡಕ್ಷರವು ಎಲ್ಲಕ್ಕೂ ಹೆಚ್ಚಿನದು ಎಂದು ಶ್ಲೋಕದ ಅರ್ಥ. ಆದ್ದರಿಂದ ಸರ್ವವಿದ್ಯಾಸಾಧ್ಯನಾದ ಶಿವನನ್ನು ಹೇಳುವ ಶಿವಶಬ್ದವು 'ಜೀವರತ್ನ' ಎಂದು ಶಿವಭಕ್ತರು ವ್ಯವಹರಿಸುತ್ತಾರೆ. ಪ್ರಕೃತಸ್ತೋತ್ರದಲ್ಲಿರುವ ಶಿವಶಬ್ದಕ್ಕೆ 'ದೇವಾ ಸುರಮನುಷ್ಯಾಣಾಂ ಶಿವಂ ವಷ್ಟೀತಿ ಶಿವಃ' (ದೇವಾಸುರಮನುಷ್ಯರಿಗೆ ಶಿವವನ್ನು ಕಲ್ಯಾಣವನ್ನು ಬಯಸುತ್ತಾನಾದ್ದರಿಂದ ಶಿವನು) ; 'ಶಿವಂ ಕರೋತೀತಿ ಶಿವಃ' (ಎಲ್ಲರಿಗೂ ಕಲ್ಯಾಣವನ್ನೇ ಮಾಡುತ್ತಾನಾದ್ದರಿಂದ ಶಿವನು) - ಎಂದು ಎರಡು ಬಗೆಯಿಂದ ವ್ಯುತ್ಪತ್ತಿಯನ್ನು ದೊಡ್ಡವರು ಹೇಳಿರುತ್ತಾರೆ. 'ಹಿಸಿಧಾತೋಃ ಸಿಂಹ ಶಬ್ದೋ ವಶಕಾನ್ತೌ ಶಿವಃ ಸ್ಮೃತಃ । ವರ್ಣವ್ಯತ್ಯಯತಃ ಸಿದ್ಧೌ ಪಶ್ಯಕಃ ಕಶ್ಯಪೋ ಯಥಾ॥' (ಪಶ್ಯಕ-ಕಾಣುವಾತನು ಎಂಬುದು ಕಶ್ಯಪ ಎಂದಾಗಿರುವಂತೆ, ಹಿಸಿ-ಕೊಲ್ಲು ಎಂಬ ಧಾತುವಿನಿಂದ ಸಿಂಹಶಬ್ದವೂ ವಶ-ಇಚ್ಛಿಸು ಎಂಬ ಧಾತುವಿನಿಂದ ಶಿವಶಬ್ದವೂ ವರ್ಣವ್ಯತ್ಯಾಸದಿಂದ ಉಂಟಾಗಿರುತ್ತವೆ) ಎಂಬ ಉಕ್ತಿಯಂತೆ ಇಚ್ಛಿಸುವಾತನು ಎಂಬರ್ಥದಲ್ಲಿ ಶಿವಶಬ್ದವಾಗಿದೆ. ಜಗತ್ತಿನ ಸೃಷ್ಟಿ ಸ್ಥಿತಿ, ಪ್ರಲಯ, ತಿರೋಧಾನ, ಅನುಗ್ರಹ- ಎಂಬ ಐದಕ್ಕೂ ಕಾರಣನಾಗಿರುವ ಪರಮಾತ್ಮನಿಗೂ ಆತನ ಚಿಚ್ಛಕ್ತಿಯಾದ ಜಗದಂಬೆಗೂ ಶಿವ, ಶಿವೆ - ಎಂಬ ಹೆಸರುಗಳು ಅನ್ವರ್ಥವಾಗಿವೆ ಎಂಬುದನ್ನು ಹೇಳಬೇಕಾದದ್ದೇ ಇಲ್ಲ.

ಈ ಅಭಿಪ್ರಾಯವನ್ನೇ ಶ್ಲೋಕದಲ್ಲಿ ಕೊಟ್ಟಿರುವ ವಿಶೇಷಣಗಳಿಂದ ಸ್ಫುಟ ಗೊಳಿಸಿರುತ್ತದೆ. ಹೇಗೆಂದರೆ,

**ಕಲಾಭ್ಯಾಮ್**:- (ಕಲಯತಃ ಸರ್ವಮಿತಿ ಕಲೌ; ತಾಭ್ಯಾಮ್) ಚೇತನಾಚೇತನಸಮ್ಮಿಲನಸಮರಸವಾಗಿರುವ ಜಗತ್ತಿನ ಸೃಷ್ಟಿಸ್ಥಿತಿಲಯತಿರೋ ಧಾನಾನುಗ್ರಹಗಳಿಗೆ ಕಾರಣವಾಗಿರುವವನು ಎಂಬುದನ್ನು ಈ ವಿಶೇಷಣವು ತಿಳಿಸುತ್ತದೆ.

**ಚೂಡಾಲಂಕೃತಶಶಿಕಲಾಭ್ಯಾಮ್**:- ಚಂದ್ರನು ಜ್ಞಾನದ ಚಿಹ್ನೆ, ಜ್ಞಾನವನ್ನು ತಲೆಯಮೇಲಿಟ್ಟುಕೊಂಡಿರುವದರಿಂದ ಅರ್ಧನಾರೀಶ್ವರನು ಜ್ಞಾನಪ್ರಿಯನೆಂದೂ ಸರ್ವಜ್ಞನೆಂದೂ ಈ ವಿಶೇಷಣವು ತಿಳಿಸುತ್ತದೆ.

**ನಿಜತಪಃಫಲಾಭ್ಯಾಮ್**:- ಪಾರ್ವತಿಯು ಪರಮೇಶ್ವರನನನ್ನೂ ಪರಮೇಶ್ವರನು ಪಾರ್ವತಿಯನ್ನೂ ತಪಸ್ಸಿನಿಂದ ಒಲಿಸಿ ಪಡೆದುಕೊಂಡಿರುತ್ತಾರೆಂದು ಪುರಾಣ. ಜಗತ್ತೆಲ್ಲವೂ ಶಿವಶಕ್ತಿಯರ ವಿಭೂತಿಯೆಂದೂ ಶಿವಶಕ್ತಿಯರಿಗಿಂತ ಬೇರೆಯಾದದ್ದು

ಯಾವದೊಂದೂ ಇಲ್ಲವೆಂದೂ ಈ ವಿಶೇಷಣವು ತಿಳಿಸುತ್ತದೆ. ಕಾರಣವೂ ಕಾರ್ಯವೂ ಶಿವನೇ ಎಂಬುದು ಅಭಿಪ್ರಾಯ.

ಭಕ್ತೇಷು ಪ್ರಕಟಿತಫಲಾಭ್ಯಾಮ್:- ಪರಮೇಶ್ವರನು ಜ್ಞಾನವೆಂಬುವ ತಪಸ್ಸಿನಿಂದಲೇ ಕಾರ್ಯರೂಪವನ್ನು ಹೊಂದಿರುತ್ತಾನೆ. ಅದ್ದರಿಂದ ಸರ್ವಜ್ಞನಾದ ಆತನು ಎಲ್ಲರ ಅಭೀಷ್ಟವನ್ನೂ ಅವರವರ ಕರ್ಮವ್ಯಕ್ತಾನುಗುಣವಾಗಿ ಕೊಡಬಲ್ಲನು ಎಂಬುವುದು. ಆದರೆ ಯಾರು ಪರಭಕ್ತಿಯಿಂದ ಆತನನ್ನೇ ಭಜಿಸುವರೋ ಅವರಲ್ಲಿ ಆತನು ಕೊಡಬಹುದಾದ ಉತ್ತಮಫಲವು ಪ್ರಕಟವಾಗುತ್ತದೆ- ಎಂಬುದನು ಈ ವಿಶೇಷಣವು ತಿಳಿಸುತ್ತದೆ.

ಅಸ್ತೋಕತ್ರಿಭುವನಶಿವಾಭ್ಯಾಮ್:- ಭಕ್ತರಿಗೆ ಫಲವನ್ನು ಕೊಡುವನೆಂದಿರುವ ದರಿಂದ ಆತನಲ್ಲಿ ಪಕ್ಷಪಾತವನ್ನು ಕಲ್ಪಿಸಬಾರದು; ಏಕೆಂದರೆ ಆತನು ಸ್ವಭಾವದಿಂದಲೇ ಮೂರು ಲೋಕದಲ್ಲಿರುವ ಎಲ್ಲಾ ಪ್ರಾಣಿಗಳಿಗೂ ಮಂಗಲವನ್ನು ಬಯಸುತ್ತಾನೆ. ಆದರೆ ಭಕ್ತರಲ್ಲಿ ಆತನ ದಯೆಯು ಎಲ್ಲಕ್ಕೂ ಹೆಚ್ಚಾಗಿ ಪ್ರಕಟವಾಗುತ್ತದೆ. ಬೆಂಕಿಯ ಹತ್ತಿರಕ್ಕೆ ಬರುವವರಿಗೇ ಅದರ ಬಿಸಿಯು ಹೆಚ್ಚಾಗಿ ಕಾಣಿಸುವದೂ, ಕನ್ನಡಿಯಂತೆ ಸ್ವಚ್ಛವಾಗಿರುವ ಪದಾರ್ಥಗಳಲ್ಲಿ ವಸ್ತುಗಳ ಪ್ರತಿಬಿಂಬವು ಸುಸ್ಪಷ್ಟವಾಗಿ ಕಾಣಿಸಿಕೊಳ್ಳುವದೂ ಹೇಗೆ ಬೆಂಕಿಯ, ಅಥವಾ ಬಿಂಬವಸ್ತುವಿನ ಪಕ್ಷಪಾತದಿಂದಲ್ಲವೋ, ಹಾಗೆಯೇ ಇಲ್ಲಿಯೂ ಆ ಪರಮೇಶ್ವರನ ಅನುಗ್ರಹವು ಭಕ್ತರಲ್ಲಿ ಹೆಚ್ಚಾಗಿ ಪ್ರಕಟವಾಗುವದು ಆತನ ಪಕ್ಷಪಾತದಿಂದಲೇನೂ ಅಲ್ಲ.

ಹೃದಿ ಪುನರ್ಭವಾಭ್ಯಾಮ್:- ಯಾರು ತನ್ನನ್ನು ಭಾವಭಕ್ತಿಯಿಂದ ಭಜಿಸುವರೋ ಅವರ ಹೃದಯದಲ್ಲಿ ಪರಮೇಶ್ವರನು ಉಮಾಸಮೇತನಾಗಿ ಪ್ರಕಟವಾಗುತ್ತಾನೆ. ನಿಜವಾಗಿ ನೋಡಿದರೆ, ಎಲ್ಲರ ಹೃದಯದಲ್ಲಿಯೂ ಆತನೇ ಇರುವವನು. ಆದರೂ ಭಕ್ತರು ತಮ್ಮ ಹೃದಯದಲ್ಲಿರುವನೆಂದು ಆತನನ್ನು ಉಪಾಸನೆಮಾಡುತ್ತಾರೆ. ಶಿವನನ್ನು ಹೃದಯದಲ್ಲಿ ಹೇಗೆ ಧ್ಯಾನಮಾಡಬೇಕೆಂಬುದನ್ನು ಉಪನಿಷತ್ತುಗಳಲ್ಲಿ 'ದಹರವಿದ್ಯೆ' ಎಂಬ ಉಪಾಸನಾವಿಶೇಷದಲ್ಲಿ ತಿಳಿಸಿರುತ್ತದೆ. ತೈತ್ತಿರೀಯದ ನಾರಾಯಣವನ್ನ, ಪ್ರಶ್ನ, ಛಾಂದೋಗ್ಯ, ಬೃಹದಾರಣ್ಯಕ- ಮುಂತಾದ ಉಪನಿಷತ್ತುಗಳಲ್ಲಿ ಈ ಉಪಾಸನಾಕ್ರಮವನ್ನು ವಿವರಿಸಿರುತ್ತದೆ- ಎಂದು ಶೈವರ ಮತ. ಪರಮೇಶ್ವರನು ಜಗತ್ತಿಗೆ ಕಾರಣನಾಗಿರುತ್ತಾನೆ, ಜಗದ್ರೂಪನಾಗಿಯೂ ಇರುತ್ತಾನೆ. ಇದಲ್ಲದೆ ಉಪಾಸಕರಾದ ಭಕ್ತರ ಹೃದಯದಲ್ಲಿಯೂ ಪ್ರಕಟನಾಗುತ್ತಾನೆ - ಎಂಬುದನ್ನು 'ಪುನಃ' ಎಂಬ ಶಬ್ದವು ಸೂಚಿಸುತ್ತದೆ.

ಭವಾಭ್ಯಾಮ್:- ಭವ ಎಂದರೆ ಜಗತ್ತಿಗೆ ಉಪಾದಾನಕಾರಣನಾಗಿರುವವನು ಎಂದರ್ಥ.

ಆನಂದಸ್ಫುರದನುಭವಾಭ್ಯಾಮ್:- ಮುಕ್ತರಿಗೆ ತೋರುವ ಆನಂದಾನುಭವವೂ ಚಿದಾನಂದಸ್ವರೂಪನಾದ ಆ ಪರಮೇಶ್ವರನ ಸ್ವರೂಪವೇ ಎಂಬುದನ್ನು ಈ ವಿಶೇಷಣವು ತೋರಿಸುತ್ತದೆ.

ಪ್ರಕೃತಶ್ಲೋಕದಲ್ಲಿ ದ್ವಿವಚನವನ್ನೇ ಪ್ರಯೋಗಿಸಿದೆಯಾದರೂ ಶಕ್ತಿ ವಿಶಿಷ್ಟ ಶಿವನನ್ನೇ ಸ್ತೋತ್ರ ಮಾಡಿದೆಯೆಂಬ ಕಾರಣದಿಂದ ವಿವರಣೆಯಲ್ಲಿ ಏಕವಚನವನ್ನೇ ಉಪಯೋಗಿಸಿರುತ್ತೇವೆ.

**ಗಲನ್ತೀ ಶಮ್ಭೋ, ತ್ವಚ್ಚರಿತಸರಿತಃ ಕಿಲ್ಬಿಷರಜೋ**
**ದಲನ್ತೀ ಧೀಕುಲ್ಯಾಸರಣಿಷು ಪತನ್ತೀ ವಿಜಯತಾಮ್ ।**
**ವಿಶನ್ತೀ ಸಂಸಾರಭ್ರಮಣಪರಿತಾಪೋಪಶಮನಂ**
**ವಸನ್ತೀ ಮಚ್ಚೇತೋಹ್ರದಭುವಿ ಶಿವಾನನ್ದಲಹರೀ ॥೨॥**

**೨. ಶಂಭುವೆ, ನಿನ್ನ ಚರಿತ್ರೆ ಎಂಬ ನದಿಯಿಂದ ಜಗುಳಿ ಹರಿಯುತ್ತಿರುವ, ಪಾಪದ ಧೂಳನ್ನು ತೊಳೆಯುತ್ತಿರುವ, ಬುದ್ಧಿವೃತ್ತಿಗಳೆಂಬ ಕಾಲುವೆಗಳ ಮಾರ್ಗಗಳಲ್ಲಿ ಬೀಳುತ್ತಿರುವ, ಸಂಸಾರದಲ್ಲಿ ತೊಳಲುವದರಿಂದಾದ ಸಂತಾಪದ ಶಾಂತಿಯನ್ನು ಕೊಡುತ್ತಿರುವ, ನನ್ನ ಚಿತ್ತದ ಮಡುವಿನೆಡೆಯಲ್ಲಿ ವಾಸ ಮಾಡುತ್ತಿರುವ, ಶಿವಾನಂದದ ಹೆದ್ದೆರೆಯು ಸರ್ವೋತ್ಕೃಷ್ಟವಾಗಿರಲಿ !**

## ವಿವರಣೆ

ಈ ಗ್ರಂಥಕ್ಕೆ 'ಶಿವಾನಂದಲಹರೀ' ಎಂದು ಹೆಸರಿಟ್ಟಿರುವದಕ್ಕೆ ಶಿವಧ್ಯಾನ ದಿಂದುಂಟಾದ ಆನಂದವು ಹೆದ್ದೆರೆಯಂತೆ ಏರಿಬರುವದನ್ನು ವರ್ಣಿಸುವದಿದೆಂದು ತಿಳಿಯಿಸುವದೇ ಉದ್ದೇಶ.

ಪರಮಾತ್ಮನ ಧ್ಯಾನದಿಂದ ಉಂಟಾಗುವ ಆನಂದದ ಹೆದ್ದೆರೆಯು ಹೇಗೆ ಉಂಟಾಗುವದೆಂದರೆ, ಮೊದಲು ಆ ಪರಮೇಶ್ವರನ ಲೀಲೆಗಳನ್ನು ಕೇಳಿ ಮನಸ್ಸಿನಲ್ಲಿ ಹರ್ಷವುಂಟಾಗಬೇಕು. ಮನಸ್ಸಿನಲ್ಲಿ ಅದನ್ನೇ ಹೊರಳಾಡಿಸುವದರಿಂದಾದ ಆನಂದದ ವೃತ್ತಿಗಳು ಎದ್ದುಹರಿಯಬೇಕು. ಆಮೇಲೆ ಸಂಸಾರದಲ್ಲಿ ಎಷ್ಟೋ ಜನ್ಮಗಳಿಂದ ತೊಳಲಿದ್ದ ರಿಂದಾಗಿರುವ ತಾಪತ್ರಯಗಳು ಶಾಂತವಾಗುವವು. ಕೊನೆಗೆ ಈ ಶಿವಾನಂದಲಹರಿಯು

ಹೃದಯದಲ್ಲಿಯೇ ನಿಲ್ಲುವದು ; ಆಗ ಹೃದಯವು ಒಂದು ಆನಂದಾಮೃತದ ಮಡುವಾಗುವದು.

**ತ್ರಯೀವೇದ್ಯಂ ಹೃದ್ಯಂ ತ್ರಿಪುರಹರಮಾದ್ಯಂ ತ್ರಿನಯನಂ**
**ಜಟಾಭಾರೋದಾರಂ ಚಲದುರಗಹಾರಂ ಮೃಗಧರಮ್ ।**
**ಮಹಾದೇವಂ ದೇವಂ ಮಯಿ ಸದಯಭಾವಂ ಪಶುಪತಿಂ**
**ಚಿದಾಲಮ್ಬಂ ಸಾಮ್ಬಂ ಶಿವಮತಿವಿಡಮ್ಬಂ ಹೃದಿ ಭಜೇ ॥೩॥**

೩. ವೇದತ್ರಯದಿಂದಲೂ ತಿಳಿಯಲ್ಪಡತಕ್ಕವನಾದ, ಮನೋಹರನಾಗಿಯೂ, ತ್ರಿಪುರವನ್ನು ನಾಶಪಡಿಸಿದವನಾಗಿಯೂ, ಜಗತ್ತಿಗೆಲ್ಲ ಆದಿಯಾಗಿಯೂ, ಮುಕ್ಕಣ್ಣನಾಗಿಯೂ, ಜಟೆಗಳ ಭಾರದಿಂದ ಉದಾರನಾಗಿಯೂ, ಹರಿದಾಡುತ್ತಿರುವ ಹಾವುಗಳ ಹಾರವುಳ್ಳವನಾಗಿಯೂ, ಜಿಂಕೆಯನ್ನು ಧರಿಸಿದವನಾಗಿಯೂ, ಮಹಾದೇವನಾದ ದೇವನಾಗಿಯೂ, ನನ್ನಲ್ಲಿ ದಯಾಯುಕ್ತವಾದ ಭಾವವುಳ್ಳವನಾಗಿಯೂ, ಪಶುಪತಿಯಾಗಿಯೂ, ಚಿನ್ಮಾತ್ರವಾದ ಸ್ವರೂಪವನ್ನೇ ಆಶ್ರಯಿಸಿರುವನಾಗಿಯೂ, ಉಮಾಸಹಿತನಾಗಿಯೂ ಇರುವ ಅತ್ಯಂತವಾಗಿ ಲೋಕವಿಡಂಬನೆಯುಳ್ಳ ವನಾಗಿಯೂ ಇರುವ ಶಿವನನ್ನು ಹೃದಯದಲ್ಲಿ ಭಜಿಸುವೆನು.

## ವಿವರಣೆ

ಶಿವಾನಂದಲಹರಿಯು ಉಕ್ಕೇರುವದಕ್ಕೆ ಕಾರಣವಾದದ್ದು ಆ ಶಿವನ ಆಕಾರದ ಮತ್ತು ಗುಣಗಳ ಧ್ಯಾನವು. ಅದನ್ನು ಇಲ್ಲಿ ಸ್ವಲ್ಪಮಟ್ಟಿಗೆ ತಿಳಿಸಿದೆ.

**ತ್ರಯೀವೇದ್ಯಮ್:-** ಋಕ್ಕು, ಯಜಸ್ಸು, ಸಾಮ- ಈ ಮೂರು ವೇದಗಳೂ ತಾತ್ಪರ್ಯದಿಂದ ಈ ಶಿವನನ್ನೇ ತಿಳಿಯಿಸುವುದಕ್ಕೆ ಹೊರಟಿವೆ. ಅಪೌರುಷೇಯಗಳಾದ ಈ ವೇದಗಳ ಅಭಿಪ್ರಾಯವನ್ನು ವಿಶದಗೊಳಿಸುವದಕ್ಕೆಂದೇ ಹಲವು ವಿದ್ಯಾಸ್ಥಾನಗಳು ಹೊರಟಿರುತ್ತವೆ. ವೇದಗಳ ಆಧಾರವಿಲ್ಲದ ಲೌಕಿಕಶಾಸ್ತ್ರವೇ ಇಲ್ಲವೆನ್ನಬಹುದು. ಅಂಥ ವೇದಗಳಿಂದ ತಿಳಿಯಬೇಕಾದದ್ದು ಈ ಶಿವನನ್ನೇ ಎಂದದ್ದರಿಂದ ಶಿವನ ಅಗಾಧವಾದ ಮಹಿಮೆಯು ಸೂಚಿತವಾದಂತೆ ಆಯಿತು.

**ಹೃದ್ಯಮ್:-** ಭಕ್ತರ ಮನಸ್ಸಿಗೆ ಮೆಚ್ಚಾಗಿರುವವನು ಶಿವನು. ಹೃದಯದ ಸಂತಾಪವು ಕಳೆದುಹೋಗಬೇಕಾದರೆ ಆ ಶಿವನನ್ನು ಅಲ್ಲಿ ಪ್ರತಿಷ್ಠೆಗೊಳಿಸಿಕೊಳ್ಳಬೇಕು.

ತ್ರಿಪುರಹರಮ್:- ತಾರಕಾಕ್ಷನೇ ಮುಂತಾದ ಮೂರು ಜನ ಅಸುರರು ಮಾಡಿಕೊಂಡಿದ್ದ ಚಿನ್ನ, ಬೆಳ್ಳಿ, ಕಬ್ಬಿಣ- ಈ ಮೂರು ಲೋಹದ ಪುರಗಳನ್ನು ಸುಟ್ಟ ಮಹಾಮಹಿಮನು ಶಿವನು. ತ್ರಿಪುರಗಳನ್ನು ಪರಮೇಶ್ವರನು ಸುಟ್ಟನೆಂಬುದಕ್ಕೆ ವೇದದಲ್ಲಿಯೂ ಪ್ರಮಾಣವುಂಟು. ಮಹಾಭಾರತದಲ್ಲಿಯೂ ಇದರ ವಿವರವಿದೆ. ಸಾವಿರ ವರ್ಷಕ್ಕೊಮ್ಮೆ ಮಾತ್ರ ಸೇರುವ ಆ ಪುರಗಳಲ್ಲಿದ್ದುಕೊಂಡು ಸಂಚರಿಸುತ್ತಾ ಆ ಅಸುರರು ಲೋಕವನ್ನೆಲ್ಲ ಪೀಡಿಸುತ್ತಿದ್ದರು. ಮೂರು ಲೋಕದ ಸಾಮಗ್ರಿಗಳನ್ನೂ ಸೇರಿಸಿದ ರಥ, ವಿಷ್ಣು ಚಂದ್ರಾಗ್ನಿಗಳು ಕೂಡಿದ ಬಾಣ, ಬ್ರಹ್ಮನೇ ಸಾರಥಿ- ಹೀಗೆ ಮಾಡಿಕೊಂಡು ಆ ಮಹಾದೇವನು ತ್ರೈಲೋಕ್ಯದ ಧನುಸ್ಸಿನ ಹೆದೆಯನ್ನು ಎಳೆದು ತ್ರೈಲೋಕ್ಯಸಾರವಾದ ಬಾಣವನ್ನು ಬಿಟ್ಟನು. ಅದರಿಂದ ಸುಟ್ಟ ಪುರಗಳು ಕೆಳಕ್ಕೆ ಬಿದ್ದವು. ಅಸುರಗಣಗಳೆಲ್ಲ ಪಶ್ಚಿಮಸಮುದ್ರದಲ್ಲಿ ಬಿದ್ದರು. ಆ ದೇವನು ತನ್ನ ಕ್ರೋಧವು ಲೋಕಗಳನ್ನೆಲ್ಲ ಸುಡದಂತೆ ಕರುಣೆಯಿಂದ ನಿವಾರಿಸಿದನು. 'ಏವಂ ಸ ಭಗವನ್ ದೇವೋ ಲೋಕಸ್ರಷ್ಟಾ ಮಹೇಶ್ವರಃ । ದೇವಾಸುರಗಣಾಧ್ಯಕ್ಷೋ ಲೋಕಾನಾಂ ವಿದಧೇ ಶಿವಮ್' ॥ (ಮಹಾಭಾರತ ಕರ್ಣ, ೩೪-೧೧೯). ಹೀಗೆ ಎಲ್ಲರಿಗೂ ಶಿವನು ಮಂಗಲವನ್ನುಂಟುಮಾಡಿದನು. ಅಂತೂ ಲೋಕಕ್ಕೆಲ್ಲ ಒದಗಿದ್ದ ಕಷ್ಟವನ್ನು ಪರಿಹರಿಸಿದ ದೇವನಿವನು - ಎಂದು ಧ್ಯಾನಿಸಿಕೊಳ್ಳಬೇಕು.

ತ್ರಿನಯನಮ್:- ಲೋಕದಲ್ಲಿ ಪ್ರಸಿದ್ಧವಾಗಿರುವ ಮೂರು ತೇಜಸ್ಸುಗಳಿಗೂ ಅಧಿಷ್ಠಾತೃಗಳಾದ ಸೂರ್ಯ, ಚಂದ್ರ, ಅಗ್ನಿ- ಎಂಬೀ ದೇವತೆಗಳೇ ಈತನಿಗೆ ಮೂರು ಕಣ್ಣುಗಳು; ಅಜ್ಞಾನಾಂಧಕಾರವನ್ನು ಕಳೆಯುವದಕ್ಕೆ ಇಂಥ ತ್ರಿಣೇತ್ರನದಲ್ಲದೆ ಮತ್ತೆಯಾರ ಪ್ರಸನ್ನತೆಯು ಅವಶ್ಯವಾದೀತು?

ಜಟಾಭಾರೋದಾರಮ್:- ಗಂಗೆಯು ದೇವಲೋಕದಿಂದ ವೇಗದಿಂದ ಇಳಿದುಬೀಳುತ್ತಿರುವಲ್ಲಿ ಜನರಿಗೆ ಪೀಡೆಯಾಗದಿರಲೆಂದು ಆ ನದಿಯನ್ನು ತನ್ನ ಜಟೆಯಲ್ಲಿ ಬಿಗಿದುಕಟ್ಟಿಕೊಂಡು ಲೋಕೋಪಕಾರವನ್ನು ಮಾಡಿದವನೆಂಬುದನ್ನು ಈ ವಿಶೇಷಣವು ಸೂಚಿಸುತ್ತದೆ.

ಚಲದುರಾಗಹಾರಮ್:- ದಾರುಕಾವನದಲ್ಲಿದ್ದ ಮುನಿಗಳು ಮಂತ್ರಿಸಿ ಬಿಟ್ಟ ಹಾವುಗಳನ್ನೂ ಗರುಡನ ಅಂಜಿಕೆಯಿಂದ ಶರಣುಬಂದ ಸರ್ಪಗಳನ್ನೂ ತನಗೆ ಆಭರಣವಾಗಿ ಮಾಡಿಕೊಂಡವನು. ಇದರಿಂದ ಪರಾಪಚಾರವನ್ನು ಸಹಿಸಿಕೊಳ್ಳುವ ಸ್ವಭಾವದವನೆಂದೂ ಎಂಥ ಕಷ್ಟವು ಬಂದೊದಗಿದರೂ ಕಾಪಾಡಬಲ್ಲ ಕರುಣಾನಿಧಿಯೆಂದೂ ಸೂಚಿತವಾಗುತ್ತದೆ.

**ಮೃಗಧರಮ್**:- ದಾರುಕಾವನದಲ್ಲಿದ್ದ ಮುನಿಗಳು ಮಾಟದಿಂದ ಮಾಡಿದ ಜಿಂಕೆಯು ಜನರನ್ನು ಮಂಕುಗೊಳಿಸದಂತೆ ಶಿವನು ಎಡಗೈಯಿಂದ ಹಿಡಿದುಕೊಂಡನೆಂದು ಸ್ಕಾಂದಪುರಾಣದ ಕಥೆ ; ಮತ್ತೊಬ್ಬರ ಮಂತ್ರತಂತ್ರಗಳು ನಾಟದಂತೆ ನೋಡಿಕೊಳ್ಳುವ ಶಕ್ತಿವಂತನೆಂದು ಈ ವಿಶೇಷಣವು ಸೂಚಿಸುತ್ತದೆ. ಮೃಗವೆಂದರೆ ಮಾರ್ಗಣವು ಯಾಚನೆಯು ; ಭಿಕ್ಷಾಟನೆಯ ವ್ಯಾಜದಿಂದ ಮುನಿಜನರನ್ನು ಅನುಗ್ರಹಿಸಿದಾತನೆಂಬುದನ್ನೂ ಸೂಚಿಸುವ ವಿಶೇಷಣವಿದು. ಭಕ್ತಿ ಭಿಕ್ಷೆಯಲ್ಲಿ ಅಭಿರುಚಿಯುಳ್ಳಾತನೆಂದು ಇದರಿಂದ ತಿಳಿಯಬೇಕಾಗಿದೆ. ಮಂತ್ರ ಶಾಸ್ತ್ರದಲ್ಲಿ 'ಮೃಗ' ಎಂದರೆ ವೇದವೆಂಬ ಅರ್ಥವಿದೆ. ಅದನ್ನು ತಿಳಿಸುವ ಶಬ್ದವಿದು. ವೇದವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವಾತನೆಂದರ್ಥ.

**ಮಹಾದೇವಂ ದೇವಮ್**:- ಮಹಾದೇವನಾದ ದೇವನು- ಎಂದರೆ ದೇವತೆಗಳಿಗೆಲ್ಲ ಪರಮದೇವತೆಯಾಗಿರುವವನು ಎಂದರ್ಥ. ಹಿಂದೆ ಹೇಳಿರುವ ತ್ರಿಪುರಸಂಹಾರಕಥೆಯಲ್ಲಿ ದೇವತೆಗಳೆಲ್ಲರನ್ನೂ ಕುರಿತು ಶಿವನು 'ನನ್ನ ತೇಜಸ್ಸಿನಲ್ಲಿ ಅರ್ಧಭಾಗವನ್ನು ಕೊಡುತ್ತೇನೆ ; ಆದರಿಂದ ನೀವು ಆ ಅಸುರರನ್ನು ಕೊಂದು ಸುಖವಾಗಿರಿ' ಎಂದಾಗ 'ಸ್ವಾಮಿ, ನಿನ್ನ ತೇಜಸ್ಸನ್ನು ಅರ್ಧದಷ್ಟು ಧರಿಸಲು ನಾವು ಶಕ್ತರಲ್ಲ, ನಾವು ಪ್ರತಿಯೊಬ್ಬರೂ ನಮ್ಮ ಬಲದಲ್ಲಿ ಅರ್ಧವನ್ನು ನಿನಗೇ ಕೊಡುವೆವು, ಅದನ್ನು ತೆಗೆದುಕೊಂಡು ನೀನೇ ಅವರನ್ನು ಕೊಲ್ಲುವವ ನಾಗು'- ಎಂದು ಕೇಳಿಕೊಂಡರು. ಹೀಗೆ ಎಲ್ಲರ ಬಲವನ್ನೂ ತನ್ನಲ್ಲಿ ಅಳವಡಿಸಿಕೊಂಡದ್ದರಿಂದ ಎಲ್ಲರಿಗಿಂತ ಬಲವತ್ತರನಾದನು; 'ಸ ತು ದೇವೋ ಬಲೇನಾಸೀತ್ ಸರ್ವೇಭ್ಯೋ ಬಲವತ್ತರಃ । ಮಹಾದೇವ ಇತಿ ಖ್ಯಾತಸ್ತತಃ ಪ್ರಭೃತಿ ಶಙ್ಕರಃ ॥ (ಕರ್ಣ. ೩೪-೧೩). ಆದ್ದರಿಂದ ಅಂದಿನಿಂದ ಮಹಾದೇವನೆಂಬ ಹೆಸರಿನಿಂದ ಪ್ರಸಿದ್ಧನಾಗಿರುತ್ತಾನೆ ಎಂಬ ಮಹಾಭಾರತವಚನವಿದೆ.

**ಮಯಿ ಸದಯಭಾವಮ್**:- ಮಹಾಬಲವಂತರಾದವರು ಸ್ವಾಭಾವಿಕವಾಗಿ ದರ್ಪದಿಂದ ಮೆರೆಯುತ್ತಾರೆ. ಆದರೆ ಈ ಮಹಾದೇವನು ತನ್ನನ್ನು ಶರಣು ಹೊಕ್ಕವರನ್ನು ದಯೆಯಿಂದ ಅನುಗ್ರಹಿಸುತ್ತಾನೆ.

**ಪಶುಪತಿ**:- ಜೀವರುಗಳೆಲ್ಲರೂ ಸಂಸಾರಪಾಶದಿಂದ ಬಿಗಿವಡೆದಿರುವರಿಂದ ಪಶುಗಳೆನಿಸುವರು. ಆ ಪಶುಗಳಿಗೆ ಪತಿಯು. ಎಂದರೆ ಪಾಶಗಳನ್ನು ನಾಶಗೊಳಿಸಿ, ಕಾಪಾಡುವವನು ಎಂಬುದನ್ನು ಈ ವಿಶೇಷಣವು ಹೇಳುತ್ತದೆ.

**ಚಿದಾಲಮ್ಬಮ್**:- ಮತ್ತೊಂದರ ಆಶ್ರಯವನ್ನು ಬಯಸದೆ ಎಲ್ಲಕ್ಕೂ

ಆಶ್ರಯವಾಗಿರುವ ಚೈತನ್ಯಸ್ವರೂಪದಿಂದಲೇ ಇರುವಾತನು ಎಂಬರ್ಥದ ವಿಶೇಷಣವಿದು.

ಸಾಂಬಮ್:- ಜಗದಂಬೆಯಾದ ಉಮಾದೇವಿಯೊಡಗೂಡಿದವನು ಎಂದರ್ಥ. ಇದರ ಅಭಿಪ್ರಾಯವನ್ನು ಮೊದಲನೆಯ ಶ್ಲೋಕದ ಆದಿಭಾಗದಲ್ಲಿಯೇ ವಿವರಿಸಿದೆ.

ಶಿವಮತಿವಿಡಮ್ಬಮ್ :- ನೋಡುವದಕ್ಕೆ ಲೋಕದ ಮನುಷ್ಯಾದಿಗಳಂತೆಯೇ ವರ್ತಿಸುತ್ತಿರುವ ಲೀಲಾವಿಗ್ರಹದಿಂದೊಡಗೂಡಿದ್ದರೂ ಇದಕ್ಕಿಂತಲೂ ಹೆಚ್ಚಿನದಾದ ನಿಷ್ಕಲರೂಪದವನೀತನು ಎಂಬುದನ್ನು ಈ ವಿಶೇಷಣವು ತಿಳಿಸುತ್ತದೆ.

ಇಂಥ ವಿಶೇಷಣಗಳ ಅಭಿಪ್ರಾಯವನ್ನು ಅನುಸಂಧಾನಮಾಡುತ್ತಾ ಧ್ಯಾನಿಸುವವರ ಹೃದಯದಲ್ಲಿ ಮಾತ್ರವೇ ಹಿಂದೆ ಹೇಳಿರುವ ಶಿವಾನಂದಲಹರಿಯು ಮನೆಮಾಡಿಕೊಳ್ಳುವದೆಂದು ಭಾವ.

**ಸಹಸ್ರಂ ವರ್ತನ್ತೇ ಜಗತಿ ವಿಬುಧಾಃ ಕ್ಷುದ್ರಫಲದಾ**
**ನ ಮನ್ಯೇ ಸ್ವಪ್ನೇ ವಾ ತದನುಸರಣಂ ತತ್ಕೃತಫಲಮ್ ।**
**ಹರಿಬ್ರಹ್ಮಾದೀನಾಮಪಿ ನಿಕಟಭಾಜಾಮಸುಲಭಂ**
**ಚಿರಂ ಯಾಚೇ ಶಮ್ಭೋ ಶಿವ ತವ ಪದಾಮ್ಭೋಜಭಜನಮ್ ॥೪॥**

೪. ಜಗತ್ತಿನಲ್ಲಿ ಅಲ್ಪಫಲಗಳನ್ನೀಯುವ ದೇವತೆಗಳು ಸಾವಿರಾರು ಮಂದಿ ಇರುವರು. ಅವರನ್ನು ಅನುಸರಿಸುವದನ್ನಾಗಲಿ ಅವರು ಕೊಡುವ ಫಲವನ್ನಾಗಲಿ ಕನಸಿನಲ್ಲಿಯೂ ನಾನು ಎಣಿಸುವದಿಲ್ಲ. ಹತ್ತಿರವಿರುವ ಹರಿಬ್ರಹ್ಮಾದಿಗಳಿಗೂ ಸುಲಭವಾಗಿ ದೊರೆಯದ ನಿನ್ನ ಪದಕಮಲದ ಭಕ್ತಿಯು ಎಂದೆಂದಿಗೂ ಇರಲೆಂದು ಬೇಡಿಕೊಳ್ಳುತ್ತೇನೆ.

## ವಿವರಣೆ

ದೇವತೆಗಳನ್ನು ಆರಾಧಿಸುವದರಿಂದ ಧನ, ಆರೋಗ್ಯ, ಪುತ್ರ, ಪಶು- ಮುಂತಾದ ಐಹಿಕಫಲಗಳು ದೊರೆಯಬಹುದು ; ಆದರೆ ಅವೆಲ್ಲವೂ ನಶ್ವರವಾದ ಅಲ್ಪಫಲಗಳು. ಇದೂ ಅಲ್ಲದೆ ಆ ದೇವತೆಗಳು ಸರ್ವದೇವಮಯನಾದ ಪರಮೇಶ್ವರನ ಅಂಶರೇ. ಅವರು ಕೊಡುವ ಫಲಗಳುಕೂಡ ಪರಮೇಶ್ವರನಿಂದ ಅವರು ಪಡೆದುಕೊಂಡಿರುವ ಅನುಗ್ರಹದಿಂದಲೇ ದೊರೆಯತಕ್ಕವು- ಹೀಗೆಂದು ತಿಳಿದವನು ಅಂಥ ದೇವತೆಗಳನ್ನು ಆರಾಧಿಸಿ ಆ ನಶ್ವರವಾದ ಫಲಗಳನ್ನು ಪಡೆದುಕೊಳ್ಳುವದಕ್ಕೆ ಸ್ವಪ್ನದಲ್ಲಿಕೂಡ ಹೇಗೆತಾನೆ ಇಚ್ಛಿಸಿಯಾನು?

ಪರಮೇಶ್ವರನ ಪಾದಭಕ್ತಿಯಾದರೋ, ಸಾಮಾನ್ಯರ ಮಾತಂತಿರಲಿ-ಆತನ ಬಳಿಯಲ್ಲಿಯೇ ಇದ್ದು ಕಾದುಕೊಂಡಿರುವ ಹರಿಬ್ರಹ್ಮಾದಿಗಳಿಗೆಕೂಡ ಸುಲಭವಾಗಿ ದೊರಕುವದಿಲ್ಲ. ಒಮ್ಮೆ ವಿಷ್ಣುವೂ ಬ್ರಹ್ಮನೂ ತಾನುಮೇಲು ತಾನುಮೇಲೆಂದು ಸ್ಪರ್ಧಿಸುತ್ತಾ ಶಿವನಲ್ಲಿ ತೀರ್ಮಾನವನ್ನು ಕೇಳಲು, 'ನನ್ನ ತಲೆಯನ್ನಾಗಲಿ ಪಾದವನ್ನಾಗಲಿ ಕಂಡು ಮೊದಲು ಬರುವವನೇ ಶ್ರೇಷ್ಠನೆಂಬುದು ನನ್ನ ತೀರ್ಪು' - ಎಂದು ನುಡಿದನಂತೆ. ವಿಷ್ಣುವು ಶಿವನ ಪಾದಮೂಲವನ್ನು ನೋಡುವದಕ್ಕೆಂದು ಹೊರಟು ಎಷ್ಟು ಕೆಳಕ್ಕೆ ಇಳಿದರೂ ಅದು ಗೊತ್ತಾಗದೆ ಶಿವನ ಭಕ್ತಿಯಿಂದಲೇ ಅದು ತಿಳಿಯಬರತಕ್ಕದ್ದೆಂದು ನಿಶ್ಚಯಿಸಿ ಹಿಂತಿರುಗಿ ಬಂದು ಆತನನ್ನು ನಮಸ್ಕರಿಸಿದನು. ಆದರೆ ಬ್ರಹ್ಮನು ಲೋಕಪಿತಾಮಹನೆಂಬ ಅಹಂಕಾರವಿದ್ದದ್ದರಿಂದ ಮೇಲುಮೇಲಕ್ಕೆ ಹೋದರೂ ಶಿವನ ಮೂರ್ಧಪ್ರದೇಶವು ಕಾಣಬರುವಂತಿರಲಿಲ್ಲವಾಗಿ ಸುಳ್ಳುಸಾಕ್ಷ್ಯವನ್ನಿಟ್ಟುಕೊಂಡು ಬಂದು ನಾನು ನಿನ್ನ ತಲೆಯನ್ನು ನೋಡಿದೆನೆಂದು ಹೇಳಿ ಶಾಪಕ್ಕೊಳಗಾದನು- ಎಂದು ಪೌರಾಣಿಕ ಕಥೆ. ಇದರಿಂದ ಪರಮೇಶ್ವರನ ಪಾದಾಬ್ಜದ ಭಜನೆಯು ಇಂಥ ದೇವತೆಗಳಿಗೂ ಸುಲಭವಾಗಿ ದೊರತಕ್ಕದ್ದಲ್ಲವೆಂದು ತಿಳಿಸಿದಂತೆ ಆಯಿತು.

ಆ ಪಾದಭಕ್ತಿಯಿಂದ ದೊರಕಬಹುದಾದ ಫಲವಾದರೂ ಅಲ್ಪವೇನಲ್ಲ ಎಂಬುದನ್ನು ತಿಳಿಸುವುದಕ್ಕೆ 'ಶಂಭೋ', 'ಶಿವ' ಎಂಬ ವಿಶೇಷನಾಮಗಳು ಬಂದಿರುತ್ತವೆ. ಈ ನಾಮಗಳ ಅಭಿಪ್ರಾಯವನ್ನು ಆಗಲೆ ಒಂದನೆಯ ಶ್ಲೋಕ ವಿವರಣೆಯಲ್ಲಿ ತಿಳಿಸಲಾಗಿದೆ. 'ಶಿವ!' ಎಂದರೆ ಲೋಕಕ್ಕೆಲ್ಲ ಶಿವ(ಕಲ್ಯಾಣ)ವನ್ನು ಕೊಡುವವನು ಎಂದರ್ಥ. 'ಶಂಭೋ!' ಎಂದರೆ ಆನಂದರೂಪದಿಂದ ಅನುಭವಕ್ಕೆ ಬರುವವನು ಎಂದರ್ಥ. ಆತನ ಭಕ್ತಿಯಿಂದ ನಿತ್ಯವಾದ ಆತ್ಮಾನಂದವು ದೊರಕುತ್ತದೆ. ಆದ್ದರಿಂದ ಭಕ್ತರಾದವರು ಇತರ ದೇವತೆಗಳನ್ನು ಕ್ಷುದ್ರವಾದ ಒಂದೊಂದು ಫಲಕ್ಕಾಗಿ ಆರಾಧಿಸುವ ಆಯಾಸವನ್ನು ಎಂದಿಗೂ ಕನಸಿನಲ್ಲಿಯೂ ತಂದುಕೊಳ್ಳಲಾರರು. ಭುಕ್ತಿಯನ್ನೂ ಮುಕ್ತಿಯ ಆನಂದವನ್ನೂ ಕೊಡುವ ಪರಮೇಶ್ವರನ ಪಾದಭಕ್ತಿಯನ್ನೇ ಬಯಸುವರು ಎಂದು ಅಭಿಪ್ರಾಯ.

ಹಿಂದಿನ ಶ್ಲೋಕದಲ್ಲಿ ಸಾಕಾರಸಗುಣರೂಪವನ್ನು ವರ್ಣಿಸಿ ಅದನ್ನೇ ಹೃದಯದಲ್ಲಿ ಭಾವಿಸುತ್ತಿರಬೇಕೆಂದು ಬೋಧಿಸಿದೆ. ಈ ಶ್ಲೋಕದಲ್ಲಿ ಬ್ರಹ್ಮ ವಿಷ್ಣ್ವಾದಿಯಾಗಿ ಯಾವ ದೇವತೆಗಳೂ ಕೊಡದ ಅನಂತಫಲವನ್ನು ಕೊಡುವುದಕ್ಕೆ ಶಿವನೊಬ್ಬನೇ ಶಕ್ತನಾಗಿರುವದರಿಂದ ಆತನ ಭಕ್ತಿಯನ್ನೇ ಪಡೆದುಕೊಳ್ಳಬೇಕೆಂದು ಉಪದೇಶಿಸಿರುತ್ತದೆ. ಮತ್ತೊಂದರಲ್ಲಿ ಮನಸ್ಸು ಹಾಕದೆ ಶಿವನೇ ನನಗೆ ಗತಿಯೆಂಬ ಅನನ್ಯಭಕ್ತಿಯೇ ನಿತ್ಯಶ್ರೇಯಸ್ಸಿಗೆ ಕಾರಣವಾಗಿರುವದೆಂದು ತಿಳಿಯಬೇಕು.

**ಸ್ಮೃತೌ ಶಾಸ್ತ್ರೇ ವೈದ್ಯೇ ಶಕುನಕವಿತಾಗಾನಫಣಿತೌ**
**ಪುರಾಣೇ ಮಂತ್ರೇ ವಾ ಸ್ತುತಿನಟನಹಾಸ್ಯೇಷ್ವಚತುರಃ ।**
**ಕಥಂ ರಾಜ್ಞಾಂ ಪ್ರೀತಿರ್ಭವತಿ ಮಯಿ ಕೋऽಹಂ ಪಶುಪತೇ**
**ಪಶುಂ ಮಾಂ ಸರ್ವಜ್ಞ ಪ್ರಥಿತ ಕೃಪಯಾ ಪಾಲಯ ವಿಭೋ ॥೩॥**

೩. ಸ್ಮೃತಿಯಲ್ಲಾಗಲಿ ಶಾಸ್ತ್ರದಲ್ಲಾಗಲಿ ವೈದ್ಯದಲ್ಲಾಗಲಿ ಶಕುನ, ಕವಿತೆ, ಗಾನ, ವಾಕ್ಪ್ರಪಂಚ- ಇವುಗಳಲ್ಲಾಗಲಿ, ಪುರಾಣದಲ್ಲಾಗಲಿ, ಮಂತ್ರದಲ್ಲಾಗಲಿ, ಹೊಗಳುವದು, ಅಭಿನಯಮಾಡುವದು, ಹಾಸ್ಯ- ಇವುಗಳಲ್ಲಾಗಲಿ (ನಾನು) ಜಾಣನಲ್ಲ. ನನ್ನಲ್ಲಿ ರಾಜರುಗಳ ಪ್ರೀತಿ ಹೇಗಾದೀತು? ನಾನು ಯಾರು? ಪಶುಪತಿಯೇ, ಪಶುವಾದ ನನ್ನನ್ನು, ಸರ್ವಜ್ಞನೆಂದು ಪ್ರಸಿದ್ಧನಾದವನೆ, ವಿಭುವೆ, ಕೃಪೆಯಿಂದ ಕಾಪಾಡು!

ವಿವರಣೆ

ಲೋಕದಲ್ಲಿ ಅನೇಕರು ರಾಜಾಶ್ರಯದಿಂದ ತಮ್ಮ ಕಷ್ಟವನ್ನು ನೀಗಿಕೊಳ್ಳುತ್ತಾರೆ; ಇಷ್ಟಾರ್ಥವನ್ನು ಸಂಪಾದಿಸಿಕೊಳ್ಳುತ್ತಾರೆ. ಹೀಗಿರುವಲ್ಲಿ ನೀನೂ ಏಕೆ ಹಾಗೆ ಯಾವಾದರೊಬ್ಬ ರಾಜನನ್ನು ಆಶ್ರಯಿಸಬಾರದು?- ಎಂದರೆ ಅದಕ್ಕೆ ಇಲ್ಲಿ ಭಕ್ತನು ಹೇಳಿಕೊಳ್ಳುತ್ತಾನೆ:

ರಾಜರ ಅನುಗ್ರಹವಾಗುವದಕ್ಕೆ ಮನು, ಯಾಜ್ಞವಲ್ಕ್ಯ, ಪರಾಶರ- ಮುಂತಾದ ಸ್ಮೃತಿಗಳನ್ನು ಓದಿ ಧರ್ಮಶಾಸ್ತ್ರನಿರ್ಣಯವನ್ನು ಹೇಳುವ ವಿದ್ಯೆ ತಿಳಿದಿರಬೇಕು. ಅದಿಲ್ಲದಿದ್ದರೆ ಸಾಂಖ್ಯ, ನ್ಯಾಯ- ಮುಂತಾದ ಶಾಸ್ತ್ರಗಳನ್ನು ಅಭ್ಯಾಸಮಾಡಿ ಸಭೆಯಲ್ಲಿ ವಿದ್ವಾಂಸರೊಡನೆ ವಾಕ್ಯಾರ್ಥಕ್ಕೆ ನಿಂತು ಅವರನ್ನು ಸೋಲಿಸುವ ಯೋಗ್ಯತೆಯನ್ನು ಸಂಪಾದಿಸಿಕೊಂಡಿರಬೇಕು. ಅದೂ ಇಲ್ಲದಿದ್ದರೆ, ವೈದ್ಯಶಾಸ್ತ್ರವನ್ನು ಬಲ್ಲವನಾಗಿದ್ದು ನಾಡೀಪರೀಕ್ಷೆ , ರೋಗನಿದಾನ, ಚಿಕಿತ್ಸೆ- ಮುಂತಾದವುಗಳ ವಿವರಗಳನ್ನು ಬಲ್ಲವನಾಗಿದ್ದು ಯಾವದಾದರೊಂದು ರೋಗವು ಬಂದೊದಗಿದಾಗ ಅದರಿಂದ ಪಾರು ಮಾಡುವ ಶಕ್ತಿಯುಳ್ಳವನಾಗಿರಬೇಕು. ಹಾಗಿಲ್ಲದಿದ್ದರೆ, ಇಂಥಿಂಥ ಶಕುನವು ಒಳ್ಳೆಯದು, ಇಂಥಿಂಥದ್ದು ಕೆಟ್ಟದ್ದು- ಎಂದು ತಿಳಿದು ಮುಂಚಿತವಾಗಿಯೇ ಶುಭಾಶುಭಫಲಗಳನ್ನು ಸೂಚಿಸುವದನ್ನು ತಿಳಿದಿರಬೇಕು. ಅದೂ ಇಲ್ಲದಿದ್ದರೆ, ರಾಜನನ್ನು ಹೊಗಳುವದು, ನಾಟ್ಯವಿದ್ಯೆಯನ್ನು ಕಲಿತು ಅಭಿನಯಕೌಶಲವನ್ನು ತೋರಿಸಿಕೊಳ್ಳುವದರಿಂದಲೋ ಹಾಸ್ಯವನ್ನು ಮಾಡಿ ಪ್ರಭುವಿನ ಚಿತ್ತಕ್ಕೆ ವಿನೋದವನ್ನುಂಟುಮಾಡುವದರಿಂದಲೋ

ರಾಜನನ್ನು ಸಂತೋಷಗೊಳಿಸುವದು- ಇವುಗಳಲ್ಲಿ ಜಾಣನಾಗಿರಬೇಕು. ಇವುಗಳಲ್ಲಿ ಯಾವದೊಂದು ಜಾಣ್ಮೆಯೂ ಇಲ್ಲದವನನ್ನು ಯಾವ ರಾಜನುತಾನೆ ತನ್ನಲ್ಲಿ ಇಟ್ಟುಕೊಂಡಾನು? ಯಾವ ಪ್ರಭುವಿಗೆತಾನೆ ಇಂಥವನಲ್ಲಿ ಪ್ರೇಮವುಂಟಾದೀತು?

ದೇವ, ನೀನು ಪಶುಪತಿಯು; ನಾನು ಏನೂ ಅರಿಯದ ಪಶು. ಇದಲ್ಲದೆ, ನೀನು ಎಲ್ಲರ ಹೃದಯದಲ್ಲಿಯೂ ಇರುವವನು, ಸರ್ವಜ್ಞನೆಂದು ಶಾಸ್ತ್ರಪ್ರಸಿದ್ಧನಾಗಿರುವಾತನು. ಅದ್ದರಿಂದ ಏನೂ ಅರಿಯದ ಪಶುವಾಗಿರುವ ನನ್ನ ಕಷ್ಟಸುಖಗಳನ್ನು ಬಲ್ಲ ನೀನೇ ನನಗೆ ಶರಣು! ನೀನೇ ನನ್ನನ್ನು ಕೃಪಾಪೂರ್ವಕವಾಗಿ ಕಾಪಾಡಬೇಕು!

**ಘಟೋ ವಾ ಮೃತ್ಪಿಣ್ಡೋಽಪ್ಯಣುರಪಿ ಚ ಧೂಮೋಽಗ್ನಿರಚಲಃ**
**ಪಟೋ ವಾ ತನ್ತುರ್ವಾ ಪರಿಹರತಿ ಕಿಂ ಘೋರಶಮನಮ್ ।**
**ವೃಥಾ ಕಣ್ಠಕ್ಷೋಭಂ ವಹಸಿ ತರಸಾ ತರ್ಕವಚಸಾ**
**ಪದಾಮ್ಭೋಜಂ ಶಮ್ಭೋರ್ಭಜ ಪರಮಸೌಖ್ಯಂ ವ್ರಜ ಸುಧೀಃ ॥೬॥**

೬. ಎಲೈ ಬುದ್ಧಿವಂತನೆ, ಗಡಿಗೆಯಾಗಲಿ, ಮಣ್ಣಿನ ಮುದ್ದೆಯಾಗಲಿ, ಅಣುವೇ ಆಗಲಿ, ಬೆಟ್ಟವಾಗಲಿ, ಬಟ್ಟೆಯಾಗಲಿ, ನೂಲಾಗಲಿ, ಭಯಂಕರನಾದ ಯಮನನ್ನು ತಪ್ಪಿಸುತ್ತದೆಯೇನು? ವೇಗವಾದ ತರ್ಕವಾಕ್ಯದಿಂದ ಸುಮ್ಮನೆ ಗಂಟಲಿಗೆ ನೋವನ್ನು ಮಾಡಿಕೊಂಡು ವ್ಯಥೆ ಪಡುತ್ತಿರುವೆಯಲ್ಲ! ಶಂಭುವಿನ ಪಾದಪದ್ಮವನ್ನು ಸೇವಿಸು, ಪರಮಾನಂದವನ್ನು ಹೊಂದು!

## ವಿವರಣೆ

ಲೋಕದಲ್ಲಿ ಜನರಿಗೆ ಬುದ್ದಿಯು ಸೂಕ್ಷ್ಮವಾಗಿದ್ದರೆ, ಅವರು ತರ್ಕದಂಥ ಕಷ್ಟವಾದ ಶಾಸ್ತ್ರವನ್ನು ಓದಿ ತಮ್ಮ ವಾಕ್ಚಾತುರ್ಯದಿಂದ ಜನರನ್ನು ಬೆರಗು ಮಾಡುವದಕ್ಕೆ ಪ್ರಯತ್ನಿಸುತ್ತಿರುವರು. ಅನ್ಯಾಯವಾಗಿ ಆಯಾಸವನ್ನು ತಂದುಕೊಂಡು ಜೀವನವನ್ನು ಹಾಗೆ ಹಾಳುಮಾಡಿಕೊಳ್ಳಬಾರದೆಂದು ಹೇಳುವ ನೆಪದಿಂದ ಪರಮೇಶ್ವರನ ಭಕ್ತಿಯ ಹೆಚ್ಚುಗಾರಿಕೆಯನ್ನು ಇಲ್ಲಿ ತಿಳಿಸುತ್ತಾರೆ.

ಘಟವು ಮಣ್ಣಿನ ಮುದ್ದೆಯಿಂದಾಗಿರುತ್ತದೆ; ಆ ಮುದ್ದೆಯ ಮಣ್ಣಿನಿಂದಾಗಿರುತ್ತದೆ. ಮಣ್ಣಿನಿಂದಾಗಿರುವ ಗಡಿಗೆಯು ಮಣ್ಣಿನಲ್ಲಿ ಮೊದಲಿಲ್ಲದಿದ್ದದ್ದು ಹೊಸದಾಗಿ ಹುಟ್ಟಿ ಆ ಬಳಿಕ ತನ್ನ ಸಮವಾಯಿಕಾರಣವಾದ ಮಣ್ಣಿನಲ್ಲಿ ಸಮವಾಯವೆಂಬ ನಿತ್ಯಸಂಬಂಧದಿಂದ ಸೇರಿಕೊಂಡಿರುತ್ತದೆ. ಸತ್ತೆ (ಇರವು) ಎಂಬ ಮಹಾಸಾಮಾನ್ಯಕ್ಕೂ ಸಂಬಂಧಿಸಿ ಕೊಂಡಿರುತ್ತದೆ- ಎಂದು ತರ್ಕಶಾಸ್ತ್ರದವರು ಹೇಳುತ್ತಾರೆ. ಹೀಗೆಯೇ ಬಟ್ಟೆಯೂ,

ನೂಲುಗಳಲ್ಲಿ ಸಮವಾಯಸಂಬಂಧದಿಂದ ಇರುವದಂತೆ. ಯಾವ ಕಾರ್ಯವೇ ಆಗಲಿ ಸಮವಾಯಿ, ಅಸಮವಾಯಿ, ನಿಮಿತ್ತ- ಎಂಬ ಕಾರಣಗಳಿಂದ ಆಗಿರುತ್ತದೆ. ಕೊನೆಯವರೆಗೂ ಕಾರ್ಯದ ಸಮವಾಯಿಕಾರಣವನ್ನು ಹುಡುಕುತ್ತಾ ಹೋದರೆ ತೀರಕೊನೆಯಲ್ಲಿ ಪರಮಾಣುಗಳು ಉಳಿದುಕೊಳ್ಳುವವು. ಎರಡು ಪರಮಾಣುಗಳಿಂದ ದ್ವ್ಯಣುಕವಾಗುವದು. ದ್ವ್ಯಣುಕಗಳಿಂದ ತ್ರ್ಯಣುಕ- ಹೀಗಿಯೇ ಕಾರ್ಯಗಳು ಆಗುತ್ತಾ ಆಗುತ್ತಾ ಅಂತ್ಯಕಾರ್ಯವು ಏರ್ಪಡುತ್ತದೆ ಎಂದು ಅವರು ಆರಂಭವಾದ (ಪರಮಾಣುಗಳು ಅನೇಕವು ಸೇರಿ ಕಾರ್ಯವಾಗುವದೆಂಬ ವಾದ)ವನ್ನು ಸಾಧಿಸುತ್ತಾರೆ.

ಇದರಂತೆ ಅವರು ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ- ಎಂಬ ನಾಲ್ಕು ಪ್ರಮಾಣಗಳನ್ನು ಒಪ್ಪಿರುತ್ತಾರೆ. ಅನುಮಾನವೆಂದರೆ ಲಿಂಗದ (ಗುರುತಿನ) ಜ್ಞಾನದಿಂದ ಲಿಂಗಿಯ (ಗುರುತುಳ್ಳ ವಸ್ತುವಿನ) ಅನುಮಾನವು (ಊಹೆಯು) ಆಗುವದೆಂದು ಕಲ್ಪಿಸುತ್ತಾರೆ. ಇದಕ್ಕೆ ವ್ಯಾಪ್ತಿಜ್ಞಾನವು ಬೇಕು. ಹೇಗೆಂದರೆ 'ಯತ್ರ ಯತ್ರ ಧೂಮಃ, ತತ್ರ ತತ್ರಾಗ್ನಿಃ'- ಎಲ್ಲೆಲ್ಲಿ ಹೊಗೆಯಿರುವದೋ ಅಲ್ಲಲ್ಲಿ ಬೆಂಕಿಯಿರುವದು ಎಂಬುದು ವ್ಯಾಪ್ತಿ. ಧೂಮವು (ಹೊಗೆ) ವ್ಯಾಪ್ಯ, ವಹ್ನಿ (ಬೆಂಕಿ) ವ್ಯಾಪಕ; ಧೂಮಕ್ಕೂ ವಹ್ನಿಗೂ ಅವ್ಯಭಿಚರಿತಸಾಹಚರ್ಯ (ತಪ್ಪದೆ ಜೊತೆಯಲ್ಲಿರುವದೆಂಬ) ವ್ಯಾಪ್ತಿಯಿರುತ್ತದೆ. ಆದ್ದರಿಂದ 'ಅಯಂ ಪರ್ವತಃ ವಹ್ನಿಮಾನ್' (ಈ ಬೆಟ್ಟವು ಬೆಂಕಿಯುಳ್ಳದ್ದು), 'ಧೂಮವತ್ತ್ವಾತ್' (ಏಕೆಂದರೆ ಇಲ್ಲಿ ಹೊಗೆಯಿದೆ)- ಎಲ್ಲಿ ಹೊಗೆಯಿರುತ್ತದೆಯೋ ಅಲ್ಲಿ ಅವಶ್ಯವಾಗಿ ಬೆಂಕಿಯಿರುತ್ತದೆ. ಇಲ್ಲಿ ಹೊಗೆಯಿದೆ, ಆದ್ದರಿಂದ ಇಲ್ಲಿಯೂ ಬೆಂಕಿಯಿದೆಯೆಂದಾಯಿತು- ಎಂಬುದು ಅನುಮಾನಪ್ರಮಾಣಕ್ಕೆ ನೈಯಾಯಿಕರು ಪ್ರಯೋಗಿಸುವ ಪಂಚಾವಯವನ್ಯಾಯ.

ಪ್ರಾಚೀನನ್ಯಾಯಕ್ಕಿಂತ ಈಚಿನ ಹೊಸ ತರ್ಕದಲ್ಲಿ ವೇಗವಾಗಿರುವ ಉದ್ದುದ್ದನೆಯ ತರ್ಕಪಙ್ಕ್ತಿಗಳನ್ನು ಬಳಸುವ ವಾಡಿಕೆ ಬಂದಿರುತ್ತದೆ.

ಈ ತರ್ಕಶಾಸ್ತ್ರವು ಬುದ್ಧಿಯನ್ನು ಚುರುಕುಮಾಡುತ್ತದೆ ಎಂಬ ಕಾರಣದಿಂದ ವಿವೇಕಿಗಳಾದವರೂ ಇದಕ್ಕೆ ಮರುಳಾಗುವರು. ಆದರೆ ನಿಜವಾಗಿ ಈ ಶಾಸ್ತ್ರವು ಯಾವ ಸುಖವನ್ನು ತಾನೆ ಕೊಟ್ಟೀತು? ಗಡಿಗೆ, ಮಣ್ಣು ಮುದ್ದೆ, ಪರಮಾಣು, ಹೊಗೆ, ಬೆಂಕಿ, ಬೆಟ್ಟ, ಬಟ್ಟೆ, ನೂಲು- ಇವುಗಳಲ್ಲಿ ಯಾವದೊಂದರಿಂದಲಾದರೂ ಆದರಿಂದ ಜೀವನ ಪಾಪಗಳೇನಾದರೂ ಹೋಗುವವೆ? ಅವನಿಗೆ ಮುಪ್ಪುಸಾವುಗಳು ಬಾರದಂತೆ ಅದು ಮಾಡೀತೇನು? ಅಥವಾ ಸತ್ತಬಳಿಕ ಯಮನ ಆಜ್ಞೆಯಂತೆ ಆಗುವ ಭಯಂಕರವಾದ ನರಕಯಾತನೆಯನ್ನು ತಪ್ಪಿಸೀತೇನು? ಎಂದಿಗೂ ಇಲ್ಲ. ಆದ್ದರಿಂದ ತರ್ಕವಾಕ್ಯಗಳಿಂದ ಏತಕ್ಕೆ ಸುಮ್ಮನೆ ಗಂಟಲಿಗೆ ಕಷ್ಟವನ್ನುಂಟುಮಾಡಿಕೊಳ್ಳುವದು?

ವಿವೇಕಿಯಾದವನು ಈ ಶಾಸ್ತ್ರವಾಸನೆಯನ್ನು ಬಿಟ್ಟು ಶಂಭುವಿನ ಪಾದಪದ್ಮಗಳನ್ನು ಸೇವಿಸುವದಕ್ಕೆ ಈಗಿನಿಂದಲೇ ಪ್ರಯತ್ನಿಸಬೇಕು. ಆ ಶಂಕರನು ಇಹಪರಗಳೆರಡರಲ್ಲಿಯೂ ನಿರತಿಶಯವಾದ ಸುಖವನ್ನು ಕೊಡುವಾತನು. ಪರಮಾನಂದರೂಪವಾದ ಮೋಕ್ಷವನ್ನು ಕೊಡುವಾತನು.

**ಮನಸ್ತೇ ಪಾದಾಬ್ಜೇ ನಿವಸತು ವಚಃ ಸ್ತೋತ್ರಫಣಿತೌ**
**ಕರೌ ಚಾಭ್ಯರ್ಚಾಯಾಂ ಶ್ರುತಿರಪಿ ಕಥಾಕರ್ಣನವಿಧೌ ।**
**ತವ ಧ್ಯಾನೇ ಬುದ್ಧಿರ್ನಯನಯುಗಲಂ ಮೂರ್ತಿವಿಭವೇ**
**ಪರಗ್ರನ್ಥಾನ್ ಕೈರ್ವಾ ಪರಮಶಿವ ಜಾನೇ ಪರಮತಃ ॥೭॥**

೭. ಪರಮಶಿವನೆ, ಮನಸ್ಸು ನಿನ್ನ ಪಾದಕಮಲದಲ್ಲಿ ವಾಸವಾಗಿರಲಿ! ವಾಕ್ಕು ಸ್ತೋತ್ರಗಳನ್ನು ಹೇಳುವದರಲ್ಲಿರಲಿ! ಕೈಗಳು ಅಭಿನಿವೇಶದಿಂದ ಅರ್ಚನೆ ಮಾಡುವದರಲ್ಲಿ ತೊಡಗಿರಲಿ! ಕಿವಿಯೂ ನಿನ್ನ ಕಥೆಯನ್ನು ಕೇಳುವ ಕಾರ್ಯದಲ್ಲಿರಲಿ! ಬುದ್ಧಿಯು ನಿನ್ನ ಧ್ಯಾನದಲ್ಲಿರಲಿ! ಎರಡು ಕಣ್ಣುಗಳೂ ನಿನ್ನ ಮೂರ್ತಿಯ ವೈಭವವನ್ನು ನೋಡುವದರಲ್ಲಿ ನಿಂತಿರಲಿ! ಇನ್ನು ಮೇಲೆ ಬೇರೆಯ ಗ್ರಂಥಗಳನ್ನು ಯಾವವುಗಳಿಂದ ತಿಳಿಯಲಿ?

## ವಿವರಣೆ

ತರ್ಕಶಾಸ್ತ್ರವೊಂದೇ ಅಲ್ಲ, ವಿಕ್ಷೇಪಕ್ಕೆ ಕಾರಣವಾದದ್ದು; ಪರಮೇಶ್ವರನ ವಿಷಯವಲ್ಲದ ಮತ್ತೆ ಯಾವ ವಿಷಯವನ್ನು ಕುರಿತ ಶಾಸ್ತ್ರವನ್ನು ವಿಚಾರಿಸುವದೂ ದುಃಖಕರವೇ. ಆ ಪರಮಾತ್ಮನೊಬ್ಬನನ್ನೇ ಅರಿತುಕೊಳ್ಳಿರಿ, ಮಿಕ್ಕ ಮಾತುಗಳನ್ನು ಬಿಡಿರಿ, ಅದು ವಾಕ್ಕಿಗೆ ಗ್ಲಾನಿಯನ್ನುಂಟುಮಾಡುವದು- ಎಂದು ಶ್ರುತಿಯು ಸಾರುತ್ತಿದೆ.

ಆದ್ದರಿಂದ ಲೌಕಿಕವಿಚಾರದ ಯಾವ ಗ್ರಂಥಗಳಲ್ಲಿಯೂ ಮಗ್ನನಾಗಿರಬಾರದು. ಎಲ್ಲಾ ಶಾಸ್ತ್ರವೂ ಪರಮಾತ್ಮನ ಜ್ಞಾನಕ್ಕೆ ಕಾರಣವಾಗಿರುವದರಿಂದಲೇ ಶಾಸ್ತ್ರವೆನಿಸಿರುವದು. ಬ್ರಹ್ಮವಿದ್ಯೆಯು ಸರ್ವವಿದ್ಯಾಪ್ರತಿಷ್ಠೆಯು -ಎಂದು ಶ್ರುತಿ ವಚನವಿದೆ.

ಹೊರಗಿನ ವಿಷಯಗಳ ಚಿಂತನೆಗೆ ಕಾರಣವಾಗಿರುವದು ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹರಿಯಬಿಡುವದೇ ಆಗಿದೆ. ಆದ್ದರಿಂದ ಮೊದಲು ಪರಶಿವನ ಸಗುಣರೂಪದ ಕಡೆಗೇ ಇಂದ್ರಿಯಗಳು ಹರಿಯುತ್ತಿರುವಂತೆ ಮಾಡಿಕೊಳ್ಳಬೇಕು. ಆ ಪರಮೇಶ್ವರನ ಕಥೆಯನ್ನು ಕೇಳುವದು, ಆತನ ಮೂರ್ತಿಯನ್ನು ನೋಡುವದು,

ಆತನನ್ನು ಅರ್ಚಿಸುವದು, ಆತನ ನಿರ್ಮಾಲ್ಯವನ್ನು ಮೂಸುವದು, ಆತನಿಗೆ ಅರ್ಪಿತವಾದ ಫಲಾದಿಗಳನ್ನು ಭಕ್ತರ ಅನುಮತಿಯಿಂದ ಸೇವಿಸುವದು, ಆತನ ಮಂತ್ರವನ್ನು ಜಪಿಸುವದು, ಆತನನ್ನು ಸ್ತುತಿಸುವದು, ಆತನಿಗೆ ಪ್ರದಕ್ಷಿಣ ನಮಸ್ಕಾರಾದಿಗಳನ್ನು ಮಾಡವದು- ಮುಂತಾದ ಸೇವಾಕಾರ್ಯಗಳಲ್ಲಿಯೇ ನಿರತರಾಗಿರಬೇಕು. ಮನೋಬುದ್ಧಿಗಳೂ ಆತನನ್ನು ಧ್ಯಾನಮಾಡುತ್ತಾ ಆತನಲ್ಲಿಯೇ ನೆಲೆನಿಲ್ಲುವಂತೆ ಮಾಡಿಕೊಳ್ಳಬೇಕು.

**ಯಥಾ ಬುದ್ಧಿಃ ಶುಕ್ತೌ ರಜತಮಿತಿ ಕಾಚೇಽಶ್ಮನಿ ಮಣಿ-**
**ರ್ಜಲೇ ಪೈಷ್ಟೇ ಕ್ಷೀರಂ ಭವತಿ ಮೃಗತೃಷ್ಣಾಸು ಸಲಿಲಮ್ ।**
**ತಥಾ ದೇವಭ್ರಾನ್ತ್ಯಾ ಭಜತಿ ಭವದನ್ಯಂ ಜಡಜನೋ**
**ಮಹಾದೇವೇಶ ತ್ವಾಂ ಮನಸಿ ಚ ನ ಮತ್ವಾ ಪಶುಪತೇ ॥೮॥**

೮. ಮಹಾದೇವನೆ, ಈಶನೆ, ಪಶುಪತಿಯೆ, ಹೇಗೆ ಶುಕ್ತಿಯಲ್ಲಿ ಬೆಳ್ಳಿಯೆಂದೂ, ಗಾಜಿನಲ್ಲಿಯೂ ಕಲ್ಲಿನಲ್ಲಿಯೂ ರತ್ನವೆಂದೂ, ಹಿಟ್ಟಿನ ನೀರಿನಲ್ಲಿ ಹಾಲೆಂದೂ, ಬಿಸಿಲುಕುದುರೆಯಲ್ಲಿ ನೀರೆಂದೂ ಬುದ್ಧಿಯುಂಟಾಗುವದೋ, ಹಾಗೆ, 'ಇವನೇ ದೇವನು' ಎಂಬ ಭ್ರಾಂತಿಯಿಂದ ನಿನ್ನನ್ನು ಮನಸ್ಸಿನಲ್ಲಿಕೂಡ ಎಣಿಸದೆ ನಿನಗಿಂತ ಬೇರೆಯಾದದ್ದನ್ನು ಮೂಢ ಬುದ್ಧಿಯ ಜನವು ಭಜಿಸುತ್ತಿರುವದು.

## ವಿವರಣೆ

'ತಮೀಶ್ವರಾಣಾಂ ಪರಮಂ ಮಹೇಶ್ವರಂ ತಂ ದೇವತಾನಾಂ ಪರಮಂ ಚ ದೈವತಮ್। ಪತಿಂ ಪತೀನಾಂ ಪರಮಂ ಪರಸ್ತಾದ್ ವಿದಾಮ ದೇವಂ ಭುವನೇಶ ಮೀಡ್ಯಮ್' ॥ (ಶ್ವೇ. ೬-೭). ಈಶ್ವರರೆಲ್ಲರಿಗೂ ಹೆಚ್ಚಿನ ಆ ಈಶ್ವರನನ್ನು, ಆ ದೇವತೆಗಳಿಗೆಲ್ಲ ಪರಮದೇವತೆಯಾದವನನ್ನು, ಪತಿಗಳಿಗೆ ಪತಿಯಾದವನನ್ನು ಹೆಚ್ಚಿನದಕ್ಕೆಲ್ಲ ಹೆಚ್ಚಿನವನಾದ, ಲೋಕಗಳಿಗೆಲ್ಲ ಒಡೆಯನಾದ, ಸತ್ಯನಾದ, ಆ ದೇವನನ್ನು ನಾವು ಅರಿತುಕೊಳ್ಳುವಂತಾಗಲಿ! -ಎಂದು ಶ್ರುತಿಯು ಪರಮಶಿವನನ್ನು ಕೊಂಡಾಡುತ್ತಿದೆ. ಆದ್ದರಿಂದ ಆ ಮಹೇಶ್ವರನ ಭಜನೆಯನ್ನು ಜನರು ಮಾಡದಿರುವರಲ್ಲ! -ಎಂದು ಗ್ರಂಥಕರ್ತರು ಮರುಕವನ್ನು ತೋರಿಸುತ್ತಿದಾರೆ.

ಎಲೈ ಪಶುಪತಿಯೆ, ಮಹಾದೇವನೆ, ಈಶನೆ- ನಿನ್ನನ್ನು ಮನಸ್ಸಿನಲ್ಲಿಯೂ ತಂದುಕೊಳ್ಳದೆ, ಈ ಮೂಢಜನವು ಮಿಕ್ಕ ಕ್ಷುದ್ರದೇವತೆಗಳನ್ನೇ ದೇವರು, ಈಶ್ವರ-

ಎಂಬ ಭ್ರಾಂತಿಯಿಂದ ಭಜಿಸುತ್ತಿರುವರಲ್ಲ! ನಿನ್ನಿಂದಲೇ ಆ ದೇವತೆಗಳು ದೇವತೆಗಳೆನಿಸಿರುತ್ತಾರೆ, ಈಶ್ವರರೆನಿಸಿರುತ್ತಾರೆ, ಪಾಲಕರೆನಿಸಿರುತ್ತಾರೆ. ಈ ಗುಟ್ಟನ್ನರಿಯದೆ ಕಪ್ಪೆಯಚಿಪ್ಪನ್ನು ಬೆಳ್ಳಿಯೆಂದೂ ಗಾಜನ್ನೋ ಕಲ್ಲನ್ನೋ ಅನರ್ಘವಾದ ರತ್ನವೆಂದೂ ಹಿಟ್ಟುಕದರಿದ ನೀರನ್ನು ಹಾಲೆಂದೂ ಬಿಸಿಲುಕುದುರೆಯನ್ನು ನೀರೆಂದೂ ತಿಳಿದು ಮೋಸಹೋಗುವ ಮರುಳರಂತೆ ಅಲ್ಪದೇವತೆಗಳನ್ನೇ ಭಜಿಸುತ್ತಿರುವರಲ್ಲ! ಅವರ ದಡ್ಡತನಕ್ಕೇನೆನ್ನಬೇಕು! -ಎಂಬುದು ವಾಕ್ಯಾರ್ಥ.

ಮಿಕ್ಕದ್ದೆಲ್ಲವನ್ನೂ ಕೈಬಿಟ್ಟು ಮಹಾದೇವನಾದ ಪರಮೇಶ್ವರನನ್ನೇ ಭಜಿಸಬೇಕು ಎಂಬುದು ಮನಸ್ಸಿನಲ್ಲಿರುವ ಭಾವ.

**ಗಭೀರೇ ಕಾಸಾರೇ ವಿಶತಿ ವಿಜನೇ ಘೋರವಿಪಿನೇ**
**ವಿಶಾಲೇ ಶೈಲೇ ಚ ಭ್ರಮತಿ ಕುಸುಮಾರ್ಥಂ ಜಡಮತಿಃ ।**
**ಸಮರ್ಪ್ಯೈಕಂ ಚೇತಃಸರಸಿಜಮುಮಾನಾಥ ಭವತೇ**
**ಸುಖೇನೈವ ಸ್ಥಾತುಂ ಜನ ಇಹ ನ ಜಾನಾತಿ ಕಿಮಹೋ! ॥೯॥**

೯. ಗೌರೀಪತಿಯೆ, ಬುದ್ಧಿಹೀನವಾದ ಜನವು ಹೂಗಳಿಗಾಗಿ ಆಳವಾದ ಸರೋವರದೊಳಕ್ಕೆ ಪ್ರವೇಶಿಸುತ್ತಿರುವದು; ಜನರಿಲ್ಲದ ಭಯಂಕರವಾದ ಕಾಡಿನಲ್ಲಿಯೂ ಎತ್ತರವಾದ ಬೆಟ್ಟದ ಮೇಲೂ ತಿರುಗುತ್ತಿರುವದು. ಚಿತ್ತವೆಂಬ ಕಮಲವೊಂದನ್ನು ನಿನಗೆ ಸಮರ್ಪಿಸಿ ಸುಖದಿಂದಲೇ ಇಲ್ಲಿ ಇದ್ದುಕೊಂಡಿರುವದನ್ನು ತಿಳಿಯದೆ ಇರುವದಲ್ಲ! ಅದೇಕೋ! ಆಶ್ಚರ್ಯವು.

## ವಿವರಣೆ

ಈ ಶ್ಲೋಕದಲ್ಲಿ ಬಾಹ್ಯಾರ್ಚನೆಗಿಂತಲೂ ಮಾನಸಪೂಜೆಯು ಹೆಚ್ಚಿನದೆಂಬುದನ್ನು ತಿಳಿಸಿಕೊಡಲಾಗಿದೆ.

ಬಾಹ್ಯಪೂಜೆಯನ್ನು ಮಾಡುವದಕ್ಕೆ ಹೂಗಳೇ ಮೊದಲಾದವು ಬೇಕು. ಕಮಲಕ್ಕಾಗಿ ಕೆರೆಯನ್ನು ಇಳಿದುನೋಡಬೇಕು; ಬೆಟ್ಟದಾವರೆಗಾಗಿ ಬೆಟ್ಟವನ್ನೇರಿ ಹುಡುಕಬೇಕು; ವನಸಂಪಿಗೆಯೇ ಮುಂತಾದ ಹೂಗಳಿಗಾಗಿ ಕಗ್ಗಾಡಿನಲ್ಲಿ ತಿರುಗಬೇಕು. ಇಷ್ಟೆಲ್ಲ ಆಯಾಸಪಟ್ಟರೂ ಮನಸ್ಸು ಚಂಚಲವಾಗಿತ್ತೆಂದರೆ ಆ ಪೂಜೆಗೆ ಶ್ರಮವೇ ಫಲವಾದೀತು.

ಹೇಗಾದರೂ ಪೂಜೆಗೆ ಚಿತ್ತವು ಈಶ್ವರನಲ್ಲಿಯೇ ನೆಲೆನಿಲ್ಲುವದು ಆವಶ್ಯವಷ್ಟೆ ? ಆದ್ದರಿಂದ ಮನಸ್ಸಿನ ಚಾಂಚಲ್ಯವನ್ನು ಕಳೆದುಕೊಂಡು ಏಕಾಗ್ರತೆಯಿಂದ ಆ

ಈಶ್ವರನಲ್ಲಿಯೇ ಏತಕ್ಕೆ ಅದನ್ನು ನಿಲ್ಲಿಸಿಬಿಡಬಾರದು? ನಿಜವಾಗಿ ನೋಡಿದರೆ ಆ ಮಹೇಶ್ವರನು ನಮ್ಮ ಮನಸ್ಸಿಗೆ ಹೆಚ್ಚಿನ ಬೆಲೆಯನ್ನು ಕೊಡುವನೇ ಹೊರತು ಬಾಹ್ಯದ ಪೂಜಾಸಾಮಗ್ರಿಯ ಆಡಂಬರವನ್ನೇನೂ ಮೆಚ್ಚನು. 'ಮನಸ್ಸಿನಂತೆ ಮಹಾದೇವ' ಎಂಬ ಗಾದೆಯೂ ಇದೆ. ಆದ್ದರಿಂದ ಆ ಮನಸ್ಸನ್ನೇ ಮಹಾದೇವನಿಗೆ ಅರ್ಪಿಸಿ ಧನ್ಯರಾಗಬೇಕು- ಎಂದು ಭಾವ.

**ನರತ್ವಂ ದೇವತ್ವಂ ನಗವನಮೃಗತ್ವಂ ಮಶಕತಾ**
**ಪಶುತ್ವಂ ಕೀಟತ್ವಂ ಭವತು ವಿಹಗತ್ವಾದಿಜನನಮ್ ।**
**ಸದಾ ತ್ವತ್ಪಾದಾಬ್ಜಸ್ಮರಣಪರಮಾನನ್ದಲಹರೀ**
**ವಿಹಾರಾಸಕ್ತಂ ಚೇದ್ ಹೃದಯಮಿಹ ಕಿಂ ತೇನ ವಪುಷಾ? ॥೧೦॥**

೧೦. ಮನುಷ್ಯತ್ವವಾಗಲಿ, ದೇವತ್ವಾಗಲಿ; ಬೆಟ್ಟದಲ್ಲಿಯ ಅಥವಾ ಕಾಡಿನಲ್ಲಿಯ ಮೃಗತ್ವವೇ ಬರಲಿ; ಪಶುವಾಗಲಿ; ಸೊಳ್ಳೆಯಾಗಲಿ; ಹುಳುವಾಗಲಿ, ಪಕ್ಷಿಗಳೇ ಮುಂತಾದವುಗಳ ಜನ್ಮವೇ ಬರಲಿ, ಯಾವಾಗಲೂ ನಿನ್ನ ಪಾದಕಮಲದ ಸ್ಮರಣದಿಂದುಂಟಾದ ಪರಮಾನಂದದ ಹೆದ್ದೆರೆಯೊಂದಿದ್ದರೆ ಸಾಕು, ಆ ಶರೀರದಿಂದೇನು?

## ವಿವರಣೆ

ಜೀವನು ತಾನು ಮಾಡುವ ಕರ್ಮದಿಂದ ಬ್ರಹ್ಮಾಂತವಾದ ಉತ್ತಮದೇವತೆಗಳ ಜನ್ಮವನ್ನು ಪಡೆಯುವನು; ಪಾಪದಿಂದ ಪಶುಪಕ್ಷಿಮೃಗಕೀಟಾದಿಗಳ ಜನ್ಮವನ್ನೂ ಸ್ಥಾವರಜನ್ಮವನ್ನೂ ಪಡೆಯುವನು; ಪಾಪಪುಣ್ಯಗಳ ಸಮತ್ವದಿಂದ ಮನುಷ್ಯಜನ್ಮವನ್ನು ಪಡೆಯುತ್ತಾನೆ- ಎಂದು ಧರ್ಮಶಾಸ್ತ್ರಗಳಲ್ಲಿ ಹೇಳಿರುತ್ತದೆ. ಆಯಾ ಜನ್ಮದ ಶರೀರದಲ್ಲಿರುವ ಸಾಮಗ್ರಿಗೆ ಅನುಗುಣವಾಗಿ ಮನಸ್ಸಿನ ಭಾವನೆಯೂ ಪ್ರವೃತ್ತಿಯೂ ಸುಖದುಃಖಭೋಗಗಳೂ ಲಭಿಸುತ್ತವೆ- ಎಂದು ಶಾಸ್ತ್ರಗಳಲ್ಲಿ ಹೇಳಿರುತ್ತದೆ.

ಆದರೆ ಪರಮೇಶ್ವರನ ಪಾದಸ್ಮರಣೆಯೊಂದು ದೊರಕುವಹಾಗಿದ್ದರೆ, ಈ ಕರ್ಮನಿಯಮವು ಕುಂಠಿತವಾಗಿಬಿಡುತ್ತದೆ. ಶರೀರವು ಎಂಥದ್ದೇ ಆಗಿರಲಿ, ಪರಮೇಶ್ವರನೇ ಸಂತತವಾಗಿ ಸ್ಮರಣೆಯಲ್ಲಿರುವದರಿಂದ, ಯಾವ ಜನ್ಮದ ಶುಭಾಶುಭಫಲ ಗಳಿಂದಲೂ ಸುಖವಾಗಲಿ ದುಃಖವಾಗಲಿ ತಟ್ಟದೆ, ಸಮತ್ವದ ಶಾಂತಿ ಸುಖಗಳು ಭಕ್ತನಿಗೆ ಕಟ್ಟಿಟ್ಟಬುತ್ತಿಯಾಗುವವು. ಉತ್ತಮವಾದ ದೇವಾದಿಜನ್ಮವು ದೊರೆತಾಗಲೂ, ಅಭಿಮಾನವೂ ಕಾಮಕ್ರೋಧಾದಿಗಳೂ ಕಾಡುವ ಸಂದರ್ಭವು ಬಂದು ಜೀವರನ್ನು

ಹಾಳುಮಾಡಿದ ದೃಷ್ಟಾಂತಗಳೂ ಮೃಗತ್ವವೇ ಮುಂತಾದ ಕೀಳುಜನ್ಮವು ಬಂದಾಗಲೂ ಪರಮೇಶ್ವರನ ಚಿಂತನೆಯಿಂದ ಸದ್ಗತಿಯು ದೊರಕಿದ ದೃಷ್ಟಾಂತಗಳೂ ಪುರಾಣದಲ್ಲಿ ದೊರಕುತ್ತವೆ. ಆದ್ದರಿಂದ ಭಕ್ತಿಯೊಂದನ್ನು ಸಂಪಾದಿಸಿಕೊಂಡರೆ ಸಾಕು, ಕರ್ಮವಶದಿಂದ ಉಂಟಾಗಬಹುದಾದ ಜನ್ಮಗಳಿಗೆ ಅಂಜಬೇಕಾದದ್ದಿರುವದಿಲ್ಲ- ಎಂಬುದು ಶ್ಲೋಕದ ಆಶಯವು.

**ವಟುರ್ವಾ ಗೇಹೀ ವಾ ಯತಿರಪಿ ಜಟೀ ವಾ ತದಿತರೋ**
**ನರೋ ವಾ ಯಃಕಶ್ಚಿದ್ ಭವತು ಭವ, ಕಿಂ ತೇನ ಭವತಿ ?**
**ಯದೀಯಂ ಹೃತ್ಪದ್ಮಂ ಯದಿ ಭವದಧೀನಂ ಪಶುಪತೇ**
**ತದೀಯಸ್ತ್ವಂ ಶಮ್ಭೋ ಭವಸಿ ಭವಭಾರಂ ಚ ವಹಸಿ ॥೧೧॥**

೧೧. ಎಲೈ ಭವನೆ, ಬ್ರಹ್ಮಚಾರಿಯಾಗಿರಲಿ, ಗೃಹಸ್ಥನಾಗಿರಲಿ, ಯತಿಯೇ ಆಗಿರಲಿ, ಜಟೆಯನ್ನು ಧರಿಸಿದವನಾದರೂ ಆಗಿರಲಿ, ಮನುಷ್ಯನು ಮತ್ತೆ ಯಾವನಾದರೊಬ್ಬನೇ ಆಗಿದ್ದರೂ ಅದರಿಂದ ಏನಾಗುತ್ತದೆ? ಯಾವಾತನ ಹೃದಯಕಮಲವು ನಿನ್ನಧೀನವಾಗಿದ್ದರೆ, ಎಲೈ ಪಶುಪತಿಯೆ, ನೀನು ಅವನ ಕಡೆಯವನೇ ಆಗಿರುತ್ತೀಯೆ; ಶಂಭುವೆ ಅವನ ಸಂಸಾರದ ಭಾರವನ್ನೂ ವಹಿಸುವೆ.

## ವಿವರಣೆ

ಯಾವ ಜನ್ಮವೇ ಬರಲಿ, ಶಿವಭಕ್ತಿಯಿದ್ದವನಿಗೆ ಕರ್ಮಬಂಧವಿರುವದಿಲ್ಲ- ಎಂದು ಹಿಂದೆ ಹೇಳಿತ್ತು. ಈಗ ಯಾವ ಆಶ್ರಮದಲ್ಲಿಯೇ ಇರಲಿ, ಅದೇನೂ ಮುಖ್ಯವಲ್ಲ, ಪರಮೇಶ್ವರನಲ್ಲಿ ಮನಸ್ಸಿಡುವದೇ ಮುಖ್ಯವು- ಎನ್ನುತ್ತಿದ್ದಾರೆ.

ಬ್ರಹ್ಮಚಾರಿಯಾಗಿ ವೇದವನ್ನು ಅಧ್ಯಯನಮಾಡುತ್ತಿರಲಿ, ಗೃಹಸ್ಥನಾಗಿ ಅಗ್ನಿಹೋತ್ರಾದಿಕರ್ಮಗಳನ್ನು ಮಾಡುತ್ತಿರಲಿ, ಜಟಾಧರನಾಗಿ ಕಾಡಿನಲ್ಲಿ ವಾನಪ್ರಸ್ಥಾಶ್ರಮದಲ್ಲಿದ್ದುಕೊಂಡು ತಪಸ್ಸುಮಾಡುತ್ತಿರಲಿ, ಎಲ್ಲಾ ಕರ್ಮಗಳನ್ನೂ ತೊರೆದು ಸಂನ್ಯಾಸಿಯೇ ಆಗಿರಲಿ, ಇವುಗಳಲ್ಲಿ ಯಾವದೊಂದೂ ಇಲ್ಲದೆ ವರ್ಣಾಶ್ರಮ ಬಾಹ್ಯನೇ ಆಗಿದ್ದುಕೊಂಡು ಸಾಮಾನ್ಯಮನುಷ್ಯನಾಗಿರಲಿ, ಅವನ ವರ್ಣಾಶ್ರಮದತ್ತ ಪರಮೇಶ್ವರನು ಕಣ್ಣುಹಾಕುವದಿಲ್ಲ. ಅವನು ಮುಖ್ಯವಾಗಿ ಭಕ್ತಿಯಿಂದ ಶಿವಶರಣನಾಗಿದ್ದರೆ ಸಾಕು, ಅವನು ಯಾರೇ ಆಗಿದ್ದರೂ ಅವನನ್ನು ತನ್ನವನನ್ನಾಗಿಯೇ ಮಾಡಿಕೊಂಡು ಅವನಿಗೆ ಸಮೀಪವಾಗಿಬಿಡುತ್ತಾನೆ, ಆ ಕೃಪಾಸಿಂಧು! ಅನನ್ಯಭಕ್ತನಿಗೆ ಇರುವ ಯೋಗ

ಕ್ಷೇಮದ ಭಾರವನ್ನೆಲ್ಲ ಆ ಶಂಭುವೇ ವಹಿಸಿಬಿಡುತ್ತಾನೆ. ಆದ್ದರಿಂದ ನಮ್ಮ ವರ್ಣಾಶ್ರಮ ಗಳಿಗೆ ಅಷ್ಟೇನೂ ಪ್ರಾಮುಖ್ಯವನ್ನು ಕೊಡಬೇಕಾದದ್ದಿಲ್ಲ. ಹೇಗಿದ್ದರೂ ಆ ಶಿವನಲ್ಲಿ ತನ್ನ ಹೃದಯ ಪೂರ್ವಕವಾದ ಭಕ್ತಿಯನ್ನಿಟ್ಟಿರಬೇಕು.

**ಗುಹಾಯಾಂ ಗೇಹೇ ವಾ ಬಹಿರಪಿ ವನೇ ವಾದ್ರಿಶಿಖರೇ**
**ಜಲೇ ವಾ ವಹ್ನೌ ವಾ ವಸತು ವಸತೇಃ ಕಿಂ ವದ ಫಲಮ್।**
**ಸದಾ ಯಸ್ಯೈವಾನ್ತಃಕರಣಮಪಿ ಶಂಭೋ, ತವ ಪದೇ**
**ಸ್ಥಿತಂ ಚೇದ್ಯೋಗೋಽಸೌ ಸ ಚ ಪರಮಯೋಗೀ ಸ ಚ ಸುಖೀ ॥೧೨॥**

೧೨. ಶಂಭುವೆ, ಗವಿಯಲ್ಲಾಗಲಿ, ಮನೆಯಲ್ಲಾಗಲಿ, ಹೊರಗೇ ಕಾಡಿನಲ್ಲಿ ಅಥವಾ ಬೆಟ್ಟದ ತುದಿಯಮೇಲೆ, ನೀರಿನಲ್ಲಿ ಅಥವಾ ಬೆಂಕಿಯಲ್ಲಿ ವಾಸಮಾಡಿಕೊಂಡಿರಲಿ, ಆ ವಾಸದ ಫಲವೇನು? ಹೇಳು. ಯಾರ ಅಂತಃಕರಣವು ನಿನ್ನ ಪದದಲ್ಲಿ ಯಾವಾಗಲೂ ಇರುವದೋ ಅದೇ ಯೋಗವು. ಅವನೇ ಪರಮಯೋಗಿಯು, ಅವನೇ ಸುಖಿಯು.

### ವಿವರಣೆ

ಮನಸ್ಸು ಸಮಾಧಾನದಿಂದ ಇರುವದಕ್ಕೆ ಇಂಥಿಂಥ ಸ್ಥಲದಲ್ಲಿದ್ದರೆ ಅನುಕೂಲವಾಗಿರುವದೆಂದು ಯೋಗಿಗಳು ಹೇಳುತ್ತಾರೆ. ಉದಾಹರಣೆಗೆ ಶ್ವೇತಾಶ್ವ ತರೋಪನಿಷತ್ತಿನಲ್ಲಿ ಹೀಗೆಂದು ಹೇಳಿದೆ :

'ತಗ್ಗುತಿಟ್ಟಿಲ್ಲದೆ ಸಮವಾಗಿರುವ, ಶುಚಿಯಾಗಿರುವ, ಕಲ್ಲುಹರಳು, ಬೆಂಕಿ, ಮರಳು ಇವುಗಳಿಲ್ಲದ, ಬಹಳ ಗದ್ದಲವಿಲ್ಲದ, ಜಲಾಶಯವೇ ಮುಂತಾದವುಗಳಿಲ್ಲದ, ಮನಸ್ಸಿಗೆ ಅನುಕೂಲವಾಗಿರುವ ಕಣ್ಣಿಗೆ ಪೀಡಾಕರವಲ್ಲದ, ಗಾಳಿಯಿಲ್ಲದ ಗವಿಯಲ್ಲಿ ಯೋಗವನ್ನು ಮಾಡಬೇಕು.'

ಯೋಗಾಭ್ಯಾಸಕ್ಕೆಂದು ಜನಗಳಿಲ್ಲದ ಕಾಡಿಗೆ ಕೆಲವರು ಸಾಧಕರು ಹೋಗುತ್ತಾರೆ. ಕೆಲವರು ಬೆಟ್ಟದ ಕೋಡುಗಲ್ಲಿನಮೇಲೆ ಕೂತು ಧ್ಯಾನಿಸುತ್ತಾರೆ. ಕೆಲವರು ಸದಾ ನೀರಿನಲ್ಲಿ ನಿಂತು ಜಪಾದಿಗಳನ್ನು ಮಾಡುತ್ತಾರೆ. ಮತ್ತೆ ಕೆಲವರು ನಾಲ್ಕು ದಿಕ್ಕಿನಲ್ಲಿಯೂ ಬೆಂಕಿಯನ್ನಿಟ್ಟುಕೊಂಡು ತಲೆಯ ಮೇಲೆ ಉರಿಯುತ್ತಿರುವ ಸೂರ್ಯನನ್ನು ನೋಡುತ್ತ ತಪಸ್ಸು ಮಾಡುವದಕ್ಕೆ ಹೋಗುತ್ತಾರೆ. ಹೀಗೆ ಎಲ್ಲಿಗಾದರೂ ಹೋಗಲಿ, ಮುಖ್ಯವಾಗಿ ಮನಸ್ಸು ವಿಕ್ಷೇಪವಾಗಬಾರದು; ಆದರಲ್ಲಿಯೂ ಪರಮೇಶ್ವರನ ಧ್ಯಾನದಲ್ಲಿಯೇ ನಿಂತಿರಬೇಕು. ಇದೊಂದಿಲ್ಲದಿದ್ದರೆ ಧ್ಯಾನಕ್ಕೆಂದು ಆರಿಸಿಕೊಳ್ಳುವ ಸ್ಥಲದ ಪ್ರಯೋಜನವ

ಏನೇನೂ ಇರುವದಿಲ್ಲ.

ಯಾವನು ಎಲ್ಲಿಯಾದರೂ ಸಾಧನವನ್ನು ಮಾಡಲಿ, ಆ ಶಂಭುವಿನ ಧ್ಯಾನವನ್ನು ಮಾಡುತ್ತಿರುವನೆಂದರೆ, ಮನೆಯನ್ನು ಬಿಟ್ಟು ಹೊರಕ್ಕೆ ಹೋಗಲಿ, ಹೋಗದಿರಲಿ- ಆವನ ಸಾಧನವೇ ನಿಜವಾದ ಯೋಗವೆನಿಸುತ್ತದೆ. ಆವನು ಮಿಕ್ಕ ಎಲ್ಲಾ ಯೋಗಿಗಳಿಗಿಂತಲೂ ಹೆಚ್ಚಿನ ಹೋಗಿಯು. ಆವನಿಗೇ ಶಿವಾನಂದವು ದೊರಕುವುದು.

**ಅಸಾರೇ ಸಂಸಾರೇ ನಿಜಭಜನದೂರೇ ಜಡಧಿಯಾ**
**ಭ್ರಮನ್ತಂ ಮಾಮನ್ಧಂ ಪರಮಕೃಪಯಾ ಪಾತುಮುಚಿತಮ್।**
**ಮದನ್ಯಃ ಕೋ ದೀನಸ್ತವ ಕೃಪಣರಕ್ಷಾತಿನಿಪುಣಃ**
**ತ್ವದನ್ಯಃ ಕೋ ವಾ ಮೇ ತ್ರಿಜಗತಿ ಶರಣ್ಯಃ ಪಶುಪತೇ ॥೧೩॥**

೧೩. ಪಶುಪತಿಯೆ, ಸಾರವಿಲ್ಲದ, ನಿನ್ನ ಭಜನೆಯಿಲ್ಲದ ಸಂಸಾರದಲ್ಲಿ ಮೂಢಬುದ್ಧಿಯಿಂದ ತೊಳಲುತ್ತಿರುವ ಕುರುಡನಾದ ನನ್ನನ್ನು ಕಪಾಡುವದೇ ನಿನಗೆ ತಕ್ಕದ್ದು. ನಿನಗೆ ನನಗಿಂತ ಬೇರೊಬ್ಬ ದೀನನು ಯಾವನಿರುವನು? ದೀನರನ್ನು ಕಾಪಾಡುವದರಲ್ಲಿ ಅತಿನಿಪುಣನಾದವನೂ, ಶರಣುಹೊಗುವದಕ್ಕೆ ಯೋಗ್ಯನಾದವನೂ ಮೂರು ಲೋಕದಲ್ಲಿ ನಿನಗಿಂತ ಬೇರೆ ಯಾವನಿರುವನು?

**ವಿವರಣೆ**

ದೀನಬಂಧುವೆಂದು ಪ್ರಖ್ಯಾತಿಹೊಂದಿರುವ, ದೀನರನ್ನು ಕಾಪಾಡುವದರಲ್ಲಿ ನಿಪುಣನಾಗಿ ಆದರಲ್ಲಿಯೇ ನಿರತನಾಗಿರುವ ನಿನಗೆ ದೀನರಾದವರು ಬೇಕೇ ಬೇಕಲ್ಲವೆ? ದೀನರಿಲ್ಲದೆ ದೀನರಕ್ಷಕನೆಂಬ ಬಿರುದು ಹೇಗೆ ತಾನೆ ನಿನಗೆ ಸಂದೀತು? ಸಲ್ಲುವಂತಿಲ್ಲವೆಂಬುದು ಸ್ಪಷ್ಟ. ಇನ್ನು ನನಗಿಂತ ದೀನನು ಮತ್ತೆಯಾವನೂ ಇಲ್ಲ. ನನಗೆ ಒಬ್ಬ ದೀನನಾಥನು ಬೇಕೇಬೇಕು. ನಿನ್ನನ್ನು ಬಿಟ್ಟರೆ ದೀನರನ್ನು ಕಾಪಾಡುವವರಲ್ಲಿ ಕುಶಲನಾದವನು ಮತ್ತೆಯಾವನು ತಾನೆ ಇರುತ್ತಾನೆ? ಆದ್ದರಿಂದ ಎಲೈ ಪಶುಪತಿಯೆ, ಅತ್ಯಂತದೀನನಾದ ನನಗೆ ನೀನೇ ಶರಣು; ದೀನರನ್ನು ಕಾಪಾಡುವದರಲ್ಲಿ ನಿಪುಣನಾದ ನಿನಗೆ ನನ್ನನ್ನು ಬಿಟ್ಟರೆ ಆಗುವಂತೆಯೇ ಇಲ್ಲ. ಹೀಗೆ ನಮ್ಮಿಬ್ಬರಿಗೂ ನಿಕಟಸಂಬಂಧವಿದೆ- ಎಂದು ಕವಿಯು ಇಲ್ಲಿ ತನಗೆ ಈಶ್ವರನೇ ಗತಿಯೆಂಬುದನ್ನು ವ್ಯಕ್ತಗೊಳಿಸಿರುತ್ತಾನೆ.

ನನ್ನಂಥ ದೀನರನ್ನು ಯಾರು ತಾನೆ ಕನಿಕರದಿಂದ ನೋಡಿಯಾರು? ಎಂಬ ತಳ್ಳಂಕ ಬೇಡ. ದಯಾಘನನಾದ ಪರಮೇಶ್ವರನು ಅವಶ್ಯವಾಗಿ ಕಾಪಾಡುವನೆಂಬ

ಭರವಸೆಯಿಂದ ಆತನಲ್ಲಿಗೇ ಶರಣುಹೋಗಿರಿ!- ಎಂದು ದೀನಜನರಿಗೆಲ್ಲ ತಿಳಿವಳಿಕೆಯನ್ನು ಹೇಳಿದಂತೆ ಆಯಿತು.

**ಪ್ರಭುಸ್ತ್ವಂ ದೀನಾನಾಂ ಖಲು ಪರಮಬನ್ಧುಃ ಪಶುಪತೇ**
**ಪ್ರಮುಖ್ಯೋಽಹಂ ತೇಷಾಮಪಿ ಕಿಮುತ ಬನ್ಧುತ್ವಮನಯೋಃ ।**
**ತ್ವಯೈವ ಕ್ಷನ್ತವ್ಯಾಃ ಶಿವ ಮದಪರಾಧಾಶ್ಚ ಸಕಲಾಃ**
**ಪ್ರಯತ್ನಾತ್ ಕರ್ತವ್ಯಂ ಮದವನಮಿಯಂ ಬನ್ಧುಸರಣಿಃ ॥೧೪॥**

೧೪. ಪಶುಪತಿಯೆ, ನೀನು ದೀನರ ಒಡೆಯನೂ ತೀರಹತ್ತಿರದ ಬಂಧುವೂ ಅಲ್ಲವೆ? ಆ ದೀನರಲ್ಲಿಯೂ ನಾನು ಮುಖ್ಯನು. ಇಂಥ ಇಬ್ಬರಿಗೆ ಬಾಂಧವ್ಯವಿದೆಯೆಂದು ಹೇಳತಕ್ಕದ್ದೇನಿದೆ? ಶಿವನೆ, ನನ್ನ ತಪ್ಪುಗಳನ್ನೆಲ್ಲ ನೀನೇ ಕ್ಷಮಿಸಬೇಕು. ನನ್ನ ರಕ್ಷಣೆಯನ್ನು ನೀನು ಪ್ರಯತ್ನದಿಂದ ಮಾಡಲೇಬೇಕು. ಇದೇ ಬಂಧುಗಳ ಮಾರ್ಗ.

### ವಿವರಣೆ

ನಾವು ಅತ್ಯಂತದೀನರಾದ್ದರಿಂದ ಭಗವಂತನು ನಮ್ಮನ್ನು ಅಸಡ್ಡೆಮಾಡಿಯಾನೆಂದು ಅಂಜಬೇಕಾದದ್ದಿಲ್ಲ. ಏಕೆಂದರೆ ದೀನತೆಯು ಹೆಚ್ಚಿದಷ್ಟೂ ಈಶ್ವರನ ದಯೆಗೆ ಹತ್ತಿರವಿರುವೆವು-ಎಂಬ ಧೈರ್ಯದಿಂದ ಆತನನ್ನೇ ಶರಣುಹೊಂದಬೇಕು.

**ಉಪೇಕ್ಷಾ ನೋ ಚೇತ್ ಕಿಂ ನ ಹರಸಿ ಭವದ್ಧ್ಯಾನವಿಮುಖಾಂ**
**ದುರಾಶಾಭೂಯಿಷ್ಠಾಂ ವಿಧಿಲಿಪಿಮಶಕ್ತೋ ಯದಿ ಭವಾನ್ ।**
**ಶಿರಸ್ತದ್ ವೈಧಾತ್ರಂ ನನಖಲು ಸುವೃತ್ತಂ ಪಶುಪತೇ**
**ಕಥಂ ವಾ ನಿರ್ಯತ್ನಂ ಕರನಖಮುಖೇನೈವ ಲುಲಿತಮ್ ॥೧೫॥**

೧೫. ಪಶುಪತಿಯೆ, ನಿನಗೆ ಉಪೇಕ್ಷೆಯಿಲ್ಲವಾದರೆ ನಿನ್ನ ಧ್ಯಾನಕ್ಕೆ ಬೆನ್ನು ತಿರುಗಿಸುವ, ಕೆಟ್ಟ ವಿಷಯಾಶೆಯೇ ಹೆಚ್ಚಾಗಿರುವ(ಂತೆ ಮಾಡಿರುವ) ಬ್ರಹ್ಮನ ಬರಹವನ್ನು ಏತಕ್ಕೆ ತೊಡೆದುಹಾಕದೆ ಇರುವೆ? ನೀನು ಅಶಕ್ತನೆಂದಾದರೆ, ಉಗುರಿನಿಂದ ಚಿವುಟಿಹಾಕುವದಕ್ಕಾಗದ ಬಲವಾಗಿದ್ದ ಬ್ರಹ್ಮನ ಆ ತಲೆಯನ್ನು ಯಾವ ಪ್ರಯತ್ನವೂ ಇಲ್ಲದೆ ಕೈಯುಗುರಿನ ಕೊನೆಯಿಂದಲೇ ಚಿವುಟಿದ್ದು ಹೇಗೆ?

## ವಿವರಣೆ

ಪರಮೇಶ್ವರನ ಕಡೆಗೆ ನನ್ನ ಮನಸ್ಸು ಒಲಿಯುತ್ತಿಲ್ಲ. ಕೆಟ್ಟ ವಿಷಯಗಳ ಆಶೆಯೇ ಅದರಲ್ಲಿ ತುಂಬಿಕೊಂಡಿರುತ್ತದೆ. ಆದ್ದರಿಂದ ಈಶ್ವರನು ನನ್ನ ವಿಷಯಕ್ಕೆ ಉದಾಸೀನನಾಗಿರಬಹುದು. ಅಥವಾ ಅವನು ತಾನೆ ಏನು ಮಾಡಿಯಾನು? ಇಂಥ ಪಾಪವಾಸನೆಯುಳ್ಳ ನನ್ನ ಹಣೆಯಬರಹವೇ ಹೀಗಿದೆ- ಎಂದು ನಿರಾಶರಾಗಬಾರದು; ಏಕೆಂದರೆ ಈಶ್ವರನಿಗೆ ಯಾವ ವಿಷಯದಲ್ಲಿಯೂ ಅಸಡ್ಡೆಯಿರುವದಿಲ್ಲ. ಅವನಿಗೆ ಅಸಾಧ್ಯವಾದದ್ದು ಯಾವದೂ ಇರುವದಿಲ್ಲ. ಹಾಗಾದರೆ ಹುಟ್ಟುವಾಗಲೆ ಬ್ರಹ್ಮದೇವರು ಜೀವರ ಹಣೆಯಲ್ಲಿ ಮುಂದೆ ಹೀಗೆ ಹೀಗೆ ಆಗಲೇಬೇಕೆಂದು ಬರೆದಿರುತ್ತಾನೆಂದು ಹೇಳುತ್ತಾರಲ್ಲ!- ಎಂದರೆ, ಬರೆದಿರಲಿ. ಬ್ರಹ್ಮನು ಬರೆದ ಬರೆಹವನ್ನು ತೊಡೆದುಹಾಕುವ ಶಕ್ತಿಯು ಆ ಮಹಾದೇವನಲ್ಲಿರುತ್ತದೆ. ಹಿಂದೆ ಬ್ರಹ್ಮದೇವನಿಗೆ ಐದು ತಲೆಗಳಿದ್ದವಂತೆ. ಅವನು ತನ್ನ ಸ್ಥಾನವನ್ನೂ ಶಕ್ತಿಯ ಮಿತಿಯನ್ನೂ ಮರೆತು 'ನನಗೂ ಐದು ತಲೆಗಳಿವೆ, ಶಿವನಿಗೂ ಐದೇ ತಲೆಗಳು ; ಇಬ್ಬರಿಗೂ ಯಾವ ತಾರತಮ್ಯವಿದೆ?' ಎಂದು ತನ್ನ ಯೋಗ್ಯತೆಯನ್ನು ದೇವತೆಗಳ ಮುಂದೆ ಕೊಚ್ಚಿಕೊಂಡನಂತೆ. ಜನರ ಗರ್ವನ್ನು ಭಂಗಮಾಡಿ ಸನ್ಮಾರ್ಗಕ್ಕೆ ತರಬಲ್ಲ ಪರಮೇಶ್ವರನು ಲೀಲಾಮಾತ್ರದಿಂದ ಅವನ ಒಂದು ತಲೆಯನ್ನು ತನ್ನ ಉಗುರಿನ ಕೊನೆಯಿಂದ ಚಿವುಟಿಹಾಕಿಬಿಟ್ಟನು. ಆಗ ಬ್ರಹ್ಮನಿಗೆ ಜ್ಞಾನೋದಯವಾಯಿತು. ಶಿವನನ್ನು ಶರಣುಹೊಕ್ಕು 'ನನ್ನ ಅಪರಾಧವನ್ನು ಮನ್ನಿಸಿ ಕಾಪಾಡಬೇಕು!' ಎಂದು ಬೇಡಿಕೊಂಡನು. ಪರಮಕರುಣಾಳುವಾದ ಆ ದೇವದೇವನು 'ದೇವತೆಗಳಿಗೆಲ್ಲ ಪಿತಾಮಹನೆನಿಸಿರು ; ವೇದಗಳು ನಾಲ್ಕಕ್ಕೂ ಸ್ಥಾನವಾಗಿ ನಿನ್ನ ಮುಖಗಳಿರಲಿ'!- ಎಂದು ಆಶೀರ್ವದಿಸಿದನು. ಅಂದಿನಿಂದ ಬ್ರಹ್ಮನು ಚತುರ್ಮುಖನೆನಿಸಿಕೊಂಡಿರುತ್ತಾನೆ- ಎಂದು ಪುರಾಣಗಳ ಕಥೆ.

**ವಿರಿಞ್ಚಿರ್ದೀರ್ಘಾಯುರ್ಭವತು ಭವತಾ ತತ್ಪರಶಿರ-**
**ಶ್ಚತುಷ್ಕಂ ಸಂರಕ್ಷ್ಯಂ ಸ ಖಲು ಭುವಿ ದೈನ್ಯಂ ಲಿಖಿತವಾನ್ ।**
**ಚಾರಃ ಕೋ ವಾ ಮಾಂ ವಿಶದಕೃಪಯಾ ಪಾತಿ ಶಿವ ತೇ**
**ಕಟಾಕ್ಷವ್ಯಾಪಾರಃ ಸ್ವಯಮಪಿ ಚ ದೀನಾವನಪರಃ ॥೧೬॥**

೧೬. ಶಿವನೆ, ಬ್ರಹ್ಮನು ದೀರ್ಘಾಯುವಾಗಲಿ! ಆ ಉಳಿದ ನಾಲ್ಕು ಶಿರಸ್ಸುಗಳನ್ನು ನೀನು ಕಾಪಾಡಬೇಕು. ಅವನೇ ಭೂಮಿಯ ಮೇಲಿರುವವರಿಗೆ ದೈನ್ಯವನ್ನು ಬರೆದಿರುವವನು. ಅಲ್ಲವೆ? ಇಲ್ಲಿ (ಮಾಡತಕ್ಕ) ವಿಚಾರವಾದರೂ

ಯಾವದು? ನಿನ್ನ ಕಡೆಗಣ್ಣಿನ ನೋಟದ ವ್ಯಾಪಾರವು ನನ್ನನ್ನು ಸ್ಪಷ್ಟವಾದ ಕೃಪೆಯಿಂದ ಕಾಪಾಡುತ್ತಿರುವದು; ನೀನು ಸ್ವತಃ ದೀನರನ್ನು ರಕ್ಷಿಸುವದರಲ್ಲಿ ತತ್ಪರನಾಗಿರುವೆ.

### ವಿವರಣೆ

ಬ್ರಹ್ಮನು ಭೂಮಿಯ ಮೇಲಿರುವ ನನ್ನಂಥ ಎಷ್ಟೋ ಜನರ ಹಣೆಯಲ್ಲಿ ದೈನ್ಯವನ್ನೇ ಬರೆದಿರುತ್ತಾನೆ. ಆದರೆ ಅದಕ್ಕಾಗಿ ಯೋಚಿಸುವದೇಕೆ? ದೀನತ್ವವಿರುವದರಿಂದಲೇ ನಮ್ಮಂಥವರು ನಿನ್ನ ಕಡೆಗೆ ತಿರುಗುತ್ತಿದೇವೆ. ಆದ್ದರಿಂದ ಈ ಉಪಕಾರವನ್ನು ಮಾಡಿದ ಬ್ರಹ್ಮನ ಮೇಲೆ ನಾನೇನೂ ದೂರುಹೇಳಿಕೊಳ್ಳುವಂತಿಲ್ಲ; ಅದಕ್ಕೆ ಬದಲು ಬಡತನವನ್ನು ಹಣೆಯಲ್ಲಿ ಬರೆದ ಆ ಬ್ರಹ್ಮನು ಚಿರಾಯುವಾಗಿರಲಿ! ಅವನ ಮಿಕ್ಕ ನಾಲ್ಕು ತಲೆಗಳನ್ನು ನೀನು ಕಾಪಾಡಿಕೊಂಡು ಬಾ!- ಎಂದೇ ನಾನು ಬೇಡಿಕೊಳ್ಳುತ್ತೇನೆ. ನಿನ್ನ ಕಡೆಗೆ ತಿರುಗಿದ ಮೇಲೆ ಬ್ರಹ್ಮನ ಬರೆಹವೇನು ಮಾಡೀತು? ನಿನ್ನ ಕೃಪಾಕಟಾಕ್ಷವು ನಮ್ಮಂಥವರ ಮೇಲೆ ಬಿದ್ದರೆ ಸಾಕು, ನಾವು ಧನ್ಯರಾಗುವೆವು. ಇದೂ ಅಲ್ಲದೆ ದೀನಬಂಧುವೆಂಬ ಬಿರುದೇ ನಿನ್ನದಾಗಿದೆ- ಎಂದು ಭಕ್ತನು ಬೇಡಿಕೊಂಡಂತೆ ಕವಿ ಇಲ್ಲಿ ವರ್ಣಿಸಿರುತ್ತಾನೆ. ಈಶ್ವರನ ಕಡೆಗೆ ಸ್ವಲ್ಪ ತಿರುಗಿದರೆ ಸಾಕು, ಎಂಥ ತೀರ ಕೆಳ ಅಂತಸ್ತಿನಲ್ಲಿರುವವನೇ ಆಗಿರಲಿ, ಅವನ ಜೀವನವು ಸುಖಮಯವಾಗುವದು. ಪರಮೇಶ್ವರನ ಭಕ್ತರಿಗೆ ಯಾರಿಂದಲೂ ಕೇಡು ಆಗುವ ಸಂಭವವೇ ಇಲ್ಲ- ಎಂಬುದರಲ್ಲಿ ಶ್ಲೋಕದ ತಾತ್ಪರ್ಯವಿದೆ.

**ಫಲಾದ್ ವಾ ಪುಣ್ಯಾನಾಂ ಮಯಿ ಕರುಣಯಾ ವಾ ತ್ವಯಿ ವಿಭೋ**
**ಪ್ರಸನ್ನೇಽಪಿ ಸ್ವಾಮಿನ್ ಭವದಮಲಪಾದಾಬ್ಜಯುಗಲಮ್ ।**
**ಕಥಂ ಪಶ್ಯೇಯಂ ಮಾಂ ಸ್ಥಗಯತಿ ನಮಸ್ಸಂಭ್ರಮಜುಷಾಂ**
**ನಿಲಿಮ್ಪಾನಾಂ ಶ್ರೇಣಿರ್ನಿಜಕನಕಮಾಣಿಕ್ಯಮಕುಟೈಃ ॥೧೭॥**

೧೭. ವಿಭುವೆ, ಪುಣ್ಯಗಳ ಫಲದಿಂದಲೋ ನನ್ನಲ್ಲಿರುವ (ನಿನ್ನ) ಕರುಣೆಯಿಂದಲೋ ಸ್ವಾಮಿಯೆ, ನೀನು ಪ್ರಸನ್ನನಾಗಿದ್ದರೂ ನಿನ್ನ ಪಾದ ಕಮಲದ್ವಂದ್ವವನ್ನು ಹೇಗೆತಾನೆ ಕಂಡೇನು? ನಮಸ್ಕಾರಮಾಡುವದರಲ್ಲಿ ಸಂಭ್ರಮವುಳ್ಳ ದೇವತೆಗಳ ಸಾಲು, ಅವರ ರತ್ನ ಖಚಿತವಾದ ಚಿನ್ನದ ಕಿರೀಟಗಳಿಂದ ನನ್ನನ್ನು ಮರೆಮಾಡುತ್ತಿದೆ!

## ವಿವರಣೆ

ಪರಮೇಶ್ವರನ ದರ್ಶನವು ದೊರಕುವದಕ್ಕೆ ಹಿಂದಿನ ಅನೇಕ ಜನ್ಮಗಳ ಪುಣ್ಯವು ಬೇಕು, ಆ ಮಹಾದೇವನ ಕರುಣೆಯೂ ಬೇಕು. ಏಕೆಂದರೆ ಆ ಪರಮಾತ್ಮನ ದರ್ಶನಕ್ಕಾಗಿ ದೇವತೆಗಳೂ ಕಾದುಕೊಂಡಿರುತ್ತಾರೆ. ಪಾಮರರಾದ ಮನುಜರ ಪಾಡೇನು? ಆದ್ದರಿಂದ ಸ್ಥಿರಪ್ರಯತ್ನದಿಂದ ಆತನ ದರ್ಶನದ ಹಂಬಲನ್ನು ಸಂಪಾದಿಸಿಕೊಳ್ಳಬೇಕು.

**ತ್ವಮೇಕೋ ಲೋಕಾನಾಂ ಪರಮಫಲದೋ ದಿವ್ಯಪದವೀಂ**
**ವಹನ್ತಸ್ತ್ವನ್ಮೂಲಾಂ ಪುನರಪಿ ಭಜನ್ತೇ ಹರಿಮುಖಾಃ ।**
**ಕಿಯದ್ ವಾ ದಾಕ್ಷಿಣ್ಯಂ ತವ ಶಿವ ಮದಾಶಾ ಚ ಕಿಯತೀ**
**ಕದಾ ವಾ ಮದ್ರಕ್ಷಾಂ ವಹಸಿ ಕರುಣಾಪೂರಿತದೃಶಾ ॥೧೮॥**

೧೮. ನೀನೊಬ್ಬನೇ ಜನರಿಗೆ ಪರಮಫಲವನ್ನು ಕೊಡುವಾತನು. ವಿಷ್ಣುವೇ ಮುಂತಾದವರು ನಿನ್ನಿಂದಾಗಿರುವ ದಿವ್ಯಸ್ಥಾನವನ್ನು ಅನುಭವಿಸುವವರಾಗಿದ್ದರೂ ಮತ್ತೂ ಭಜಿಸುತ್ತಿರುವರು. ಶಿವನೆ, ನಿನ್ನ ಔದಾರ್ಯವು ಎಷ್ಟು! ನನ್ನ ಆಶೆಯಾದರೂ ಎಷ್ಟು! ಕೃಪಾಪೂರ್ಣದೃಷ್ಟಿಯಿಂದ ಯಾವಾಗ ನನ್ನ ರಕ್ಷಣೆಯನ್ನು ವಹಿಸುವೆಯೊ!

## ವಿವರಣೆ

ಪರಮೇಶ್ವರನ ಕೃಪೆಗೆ ಪಾರವಿಲ್ಲ. ಪರಮಪುರುಷಾರ್ಥದವರೆಗೂ ಭಕ್ತರಿಗೆ ಕೊಡುವದಕ್ಕೆ ಆತನು ಸಿದ್ಧನೂ ಶಕ್ತನೂ ಇರುತ್ತಾನೆ. ಆದ್ದರಿಂದ ಮಹಾ ಮಹಾ ದೇವತೆಗಳೂ ಆತನ ಕೃಪೆಯಿಂದ ದೊಡ್ಡ ದೊಡ್ಡ ಸ್ಥಾನಗಳನ್ನು ಪಡೆದಿದ್ದರೂ ಆತನ ಅನುಗ್ರಹದಿಂದ ಇನ್ನೂ ಮೇಲಕ್ಕೆ ಹೋಗಬೇಕೆಂದೇ ಬಯಸುತ್ತಿರುತ್ತಾರೆ. ಅಂಥವರಿಗೆ ಇಷ್ಟಾರ್ಥಗಳನ್ನು ನೆರವೇರಿಸಿದಮೇಲಲ್ಲವೆ, ಆ ಕರುಣಾಳುವು ನನ್ನ ಕಡೆಗೆ ಕಣ್ಣು ಹಾಕಬೇಕು? 'ಏಕೋ ಬಹೂನಾಂ ಯೋ ವಿದಧಾತಿ ಕಾಮಾನ್' -ಎಂಬ ಶ್ರುತಿವಚನದಂತೆ ಆತನೊಬ್ಬನೇ ಎಲ್ಲರ ಸಾಧನಕ್ಕೂ ಫಲವನ್ನು ಕೊಡುವಾತನಾಗಿದ್ದಾನೆ. ಹೀಗಿರುವಲ್ಲಿ ದೊಡ್ಡದೊಡ್ಡ ಭಕ್ತರ ಬೇಡಿಕೆಗಳು ಎಂದಿಗೆ ಪೂರೈಸಬೇಕು? ನನ್ನಂಥ ಅಲ್ಪರ ಕಡೆಗೆ ಆಮೇಲೆಲ್ಲವೆ, ಆತನು ತಿರುಗಬೇಕು? ಎಂದು ಅರ್ಥ.

ಭಕ್ತನಾದವನು 'ಇಷ್ಟು ದಿನಗಳು ನಾನಾಸಾಧನಗಳನ್ನು ಮಾಡಿದರೂ ನನ್ನ ಮೇಲೆ

ದೇವರು ದಯೆಯನ್ನು ತೋರಿಸಲಿಲ್ಲವಲ್ಲ!' ಎಂದು ಬೇಸರಗೊಳ್ಳಬಾರದು. 'ನ್ನ ಸಾಧನವು ಕಡಿಮೆಯಾಗಿರಬಹುದು, ನಾನು ಬಯಸುವ ಪುರುಷಾರ್ಥವು ಮಾತ್ರ ಹಿಡಿಸಲಾರದಷ್ಟು ಇದೆ. ಹೇಗಾದರೂ ಇರಲಿ, ಆತನಲ್ಲಿ ಮನಸ್ಸಿಡುವದು ನನ್ನ ಕರ್ತವ್ಯ ಎಂದು ಸ್ಥಿರಪ್ರಯತ್ನವನ್ನು ಮಾಡುತ್ತಿರಬೇಕು. ಅಂಥ ಸಾಧನದಿಂದಲೇ ಆನಂದವ ದೊರಕುವದು; ಪರಮೇಶ್ವರ ಅನುಗ್ರಹವೂ ದೊರಕುವದು- ಎಂದು ಭಾವ.

**ದುರಾಶಾಭೂಯಿಷ್ಠೇ ದುರಧಿಪಗೃಹದ್ವಾರಘಟಕೇ**
**ದುರನ್ತೇ ಸಂಸಾರೇ ದುರಿತನಿಲಯೇ ದುಃಖಜನಕೇ ।**
**ಮದಾಯಾಸಂ ಕಿಂ ನ ವ್ಯಪನಯಸಿ ಕಸ್ಯೋಪಕೃತಯೇ**
**ವದೇಯಂ ಪ್ರೀತಿಶ್ಚೇತ್ತವ ಶಿವ ಕೃತಾರ್ಥಾಃ ಖಲು ವಯಮ್ ॥೧೯॥**

೧೯. ಶಿವನೆ, ಕೆಟ್ಟ ಆಶೆಗಳು ಬಹುವಾಗಿ ತುಂಬಿರುವ, ದುಷ್ಟರಾದ ಪ್ರಭುಗಳ ಮನೆಯ ಬಾಗಿಲುಗಳನ್ನು ಸೇವಿಸುತ್ತಿರುವ, ಕೆಟ್ಟ ಪರ್ಯವಸಾನವುಳ್ಳ ಪಾಪಗಳಿಗೆ ಬೀಡಾಗಿರುವ, ದುಃಖಗಳನ್ನುಂಟುಮಾಡುತ್ತಿರುವ ಸಂಸಾರದಲ್ಲಿ, ನನ್ನ ಆಯಾಸವನ್ನು ಏತಕ್ಕೆ ಪರಿಹರಿಸದೆ ಇರುವೆ? (ಇದು) ಯಾರ ಉಪಕಾರಕ್ಕಾಗಿ? ಹೇಳು. ಇದು ನಿನ್ನ ಸಂತೋಷವೆಂದಾದರೆ, ನಾವು ಕೃತಾರ್ಥರೇ ಸರಿ.

## ವಿವರಣೆ

ಸಂಸಾರದಲ್ಲಿ ಯಾವದೊಂದು ಗುಣವೂ ಇಲ್ಲ. ಇಲ್ಲಿ ನಮ್ಮ ಆಶೆಗಳು ಮುಗಿಯುವಂತೆ ಇಲ್ಲ. ಹಣವಂತರ ಮನೆಯ ಬಾಗಿಲು ಕಾಯುತ್ತಾ ಪಾಪವನ್ನು ಸಂಪಾದಿಸಿಕೊಂಡು ದುಃಖಪಡುತ್ತಾ ಇದ್ದು ಕೊನೆಗೆ ಮರಣದಲ್ಲಿ ಕೊನೆಗಾಣುತ್ತಿರುವೆವು. ಆದರೂ ನಾವು ಈ ಆಯಾಸವನ್ನು ಲೆಕ್ಕಿಸುವದಿಲ್ಲ. ಇದರಿಂದ ನಮಗಂತೂ ತೃಪ್ತಿಯಿಲ್ಲ. ಹೀಗೆ ನಾವು ಬಳಲುತ್ತಿರುವದು ಪರಮೇಶ್ವರನ ಪ್ರೀತಿಗೆಂದಾದರೆ ನಾವು ಕೃತಕೃತ್ಯರಾದಂತೆಯೇ ಸರಿ- ಎಂಬುದು ಶ್ಲೋಕದ ಅಭಿಪ್ರಾಯ.

ಜೀವನದಲ್ಲಿ ಎಷ್ಟೇ ಕಷ್ಟವಿರಲಿ, ಪರಮೇಶ್ವರಪ್ರೀತ್ಯರ್ಥವಾಗಿ ನಮ್ಮ ಕರ್ತವ್ಯವನ್ನು ನಾವು ಮಾಡುತ್ತಿದ್ದರೆ, ನಮಗೆ ಪುರುಷಾರ್ಥಪ್ರಾಪ್ತಿಯು ಕಟ್ಟಿಟ್ಟಬುತ್ತಿಯಾಗುವದು ಎಂದು ಭಾವ.

ಸದಾ ಮೋಹಾಟವ್ಯಾಂ ಚರತಿ ಯುವತೀನಾಂ ಕುಚಗಿರೌ
ನಟತ್ಯಾಶಾಶಾಖಾಸ್ವಟತಿ ಝುಟಿತಿ ಸ್ವೈರಮಭಿತಃ ।
ಕಪಾಲಿನ್ ಭಿಕ್ಷೋ ಮೇ ಹೃದಯಕಪಿಮತ್ಯನ್ತಚಪಲಂ
ದೃಢಂ ಭಕ್ತ್ಯಾ ಬದ್ಧ್ವಾ ಶಿವ ಭವದಧೀನಂ ಕುರು ವಿಭೋ ॥೨೦॥

೨೦. ಕಪಾಲಧರನಾದ ಭಿಕ್ಷುಕನೆ, ಶಿವನೆ, (ನನ್ನ ಮನಸ್ಸೆಂಬ) ಕಪಿಯು ಭ್ರಾಂತಿಯೆಂಬ ಅಡವಿಯಲ್ಲಿ ಸುತ್ತಾಡುತ್ತಿರುವದು; ಯೌವನವಂತೆಯರ ಸ್ತನಗಳೆಂಬ ಬೆಟ್ಟದಲ್ಲಿ ಹಾರಾಡುತ್ತಿದೆ. ಆಶೆಗಳೆಂಬ ಮರದ ಕೊಂಬೆಗಳಲ್ಲಿ ಚಂಗನೆ ತನಗೆ ತೋರಿದಂತೆ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಿರುತ್ತದೆ. (ಹೀಗೆ) ಅತ್ಯಂತಚಪಲವಾದ ಈ ನನ್ನ ಮನಸ್ಸೆಂಬ ಕಪಿಯನ್ನು ಗಟ್ಟಿಯಾಗಿ ಭಕ್ತಿಯಿಂದ ಬಿಗಿದುಕಟ್ಟಿ, ವಿಭುವೆ, ನಿನ್ನ ಅಧೀನವಾಗಿರುವಂತೆ ಮಾಡಿಕೊ!

## ವಿವರಣೆ

ಮನಸ್ಸೆಂಬುದು ಇದ್ದಕಡೆ ಇರುವದಿಲ್ಲ. ಅದನ್ನು ಬಿಗಿಹಿಡಿದು ನಿಲ್ಲಿಸಿಕೊಳ್ಳುವುದು ಬಹಳ ಕಷ್ಟ. ಇದು ಬೇಕು, ಅದು ಬೇಕು- ಎಂದು ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಹಾರುತ್ತಿರುವದು. ಅದನ್ನು ನಿಲ್ಲಿಸುವದಕ್ಕೆ ಪರಮೇಶ್ವರನ ಭಕ್ತಿಯೊಂದೇ ಸಾಧನವು. ಯಾರು ಆ ಪರಮೇಶ್ವರನಲ್ಲಿ ಪ್ರೇಮವನ್ನು ಸಂಪಾದಿಸಿಕೊಳ್ಳುವರೋ, ಅವರಿಗೆ ಈಶ್ವರನ ಅನುಗ್ರಹದಿಂದ ಮನಸ್ಸು ಸ್ಥಿರವಾಗಿ ನಿಂತು ಜ್ಞಾನವನ್ನು ಕೊಡುತ್ತದೆ.

ಈ ಶ್ಲೋಕದಲ್ಲಿ 'ಕಪಾಲಿನ್' ಎಂಬ ವಿಶೇಷಣವು ಬ್ರಹ್ಮಶಿರಸ್ಸನ್ನು ಚಿವುಟಿಹಾಕಿ ಕೈಯಲ್ಲಿ ಅದನ್ನೇ ಭಿಕ್ಷಾಪಾತ್ರೆಯಾಗಿ ಮಾಡಿಕೊಂಡಿರುವ ಮಹಾ ಬಲಶಾಲಿಯೂ ಅನೇಕಕಲ್ಪಗಳನ್ನು ಕಂಡಿರುವ ಸನಾತನನೂ ಆಗಿರುವವನು ಶಿವನು-ಎಂಬುದನ್ನು ಸೂಚಿಸುತ್ತದೆ. ''ಭಿಕ್ಷು'' ಎಂಬ ವಿಶೇಷಣವು ಭಕ್ತಿಭಿಕ್ಷೆಯನ್ನೇ ಆತನು ಪ್ರಾರ್ಥಿಸುತ್ತಿರುವನೆಂಬುದನ್ನು ತಿಳಿಸುತ್ತದೆ.

ಧೃತಿಸ್ತಮ್ಭಾಧಾರಾಂ ದೃಢಗುಣನಿಬದ್ಧಾಂ ಸಗಮನಾಂ
ವಿಚಿತ್ರಾಂ ಪದ್ಮಾಢ್ಯಾಂ ಪ್ರತಿದಿವಸಸನ್ಮಾರ್ಗಘಟಿತಾಮ್ ।
ಸ್ಮರಾರೇ ಮಚ್ಚೇತಃಸ್ಫುಟಪಟಕುಟೀಂ ಪ್ರಾಪ್ಯ ವಿಶದಾಂ
ಜಯ ಸ್ವಾಮಿನ್ ಶಕ್ತ್ಯಾ ಸಹ ಶಿವ ಗಣೈಃ ಸೇವಿತ ವಿಭೋ ॥೨೧॥

೨೧. ಕಾಮಾರಿಯೆ, ಸ್ವಾಮಿಯೆ, ಶಿವನೆ, ಪ್ರಮಥಗಣಗಳಿಂದ ಸೇವಿತನಾಗಿರುವಾತನೆ, ವಿಭುವೆ, ಧೃತಿಯೆಂಬ ಕಂಬದ ಆಧಾರವುಳ್ಳ, ಗಟ್ಟಿಯಾದ ಗುಣಗಳಿಂದ ಕಟ್ಟಲ್ಪಟ್ಟಿರುವ, ಗತಿಯುಳ್ಳ ವಿಚಿತ್ರವಾಗಿರುವ, ಕಮಲಚಿತ್ರಗಳಿರುವ, ಪ್ರತಿದಿನವೂ ಸನ್ಮಾರ್ಗಕ್ಕೆ ಸೇರಿಕೊಂಡಿರುವ, ನಿರ್ಮಲವಾದ ನನ್ನ ಚಿತ್ತವೆಂಬ ಸ್ಫುಟವಾಗಿರುವ ಗುಡಾರವನ್ನು ಸೇರಿ ಶಕ್ತಿಯೊಡನೆ ಒಪ್ಪುತ್ತಿರು.

### ವಿವರಣೆ

ದಾರಿಯಲ್ಲಿ ನಡೆಯುತ್ತಿರುವವರಿಗೆ ಭದ್ರವಾದ ಕಂಬವೂ ಹಗ್ಗದ ಕಟ್ಟುಗಳೂ ಇರುವ ಒಂದು ಡೇರೆಯು ಸಿಕ್ಕಿದರೆ ಅದರಲ್ಲಿದ್ದುಕೊಂಡು ವಿಶ್ರಮಿಸುವರು. ಆ ಗುಡಾರವು ಸರಿಯಾದ ಮಾರ್ಗಕ್ಕೆ ಹತ್ತಿಕೊಂಡಿದ್ದರೆ, ಅದರ ಬಟ್ಟೆಯಲ್ಲಿ ಬಣ್ಣದ ಚಿತ್ರಗಳೂ ಮನೋಹರವಾಗಿದ್ದರೆ, ದಾರಿಹೋಕರು ಅವಶ್ಯವಾಗಿ ಅಲ್ಲಿಯೇ ವಿನೋದದಿಂದ ಕಾಲವನ್ನು ಕಳೆಯುವದಕ್ಕೆ ಮನಸ್ಸು ಮಾಡುವರು.

ಇದರಂತೆ, ಯಾರ ಮನಸ್ಸು ಸಾತ್ತ್ವಿಕವಾದ ಧೃತಿಯಿಂದೊಡಗೂಡಿರುವ, ಉತ್ತಮವಾದ ಗುಣಗಳೂ ಇರುವದಾಗಿ ಸನ್ಮಾರ್ಗದಲ್ಲಿಯೇ ಚಲಿಸುತ್ತಾ ಶುಭ ಲಕ್ಷಣದಿಂದ ಕೂಡಿ, ಸದ್ಭಾವನೆಗಳಿಂದ ತುಂಬಿ ನಿರ್ಮಲವಾಗಿರುವದೋ ಅಂಥ ಚಿತ್ತವು ದೊರೆತರೆ ಅಲ್ಲಿ ಶಿವನು ಪಾರ್ವತಿಸಮೇತನಾಗಿ ಪ್ರಮಥಗಣಗಳೊಡನೆ ವಾಸಿಸುವನು. ಅಂಥ ದೃಢಭಕ್ತಿಯುಳ್ಳ ಸಾತ್ತ್ವಿಕಚಿತ್ತವನ್ನು ಸಂಪಾದಿಸಿಕೊಳ್ಳಬೇಕು ಎಂದು ಭಾವ.

**ಪ್ರಲೋಭಾದ್ಯೈರರ್ಥಾಹರಣಪರತನ್ತ್ರೋ ಧನಿಗೃಹೇ**
**ಪ್ರವೇಶೋದ್ಯುಕ್ತಃ ಸನ್ ಭವತಿ ಬಹುಧಾ ತಸ್ಕರಪತೇ ।**
**ಇಮಂ ಚೇತಶ್ಚೋರಂ ಕಥಮಿಹ ಸಹೇ ಶಙ್ಕರ ವಿಭೋ**
**ತವಾಧೀನಂ ಕೃತ್ವಾ ಮಯಿ ನಿರಪರಾಧೇ ಕುರು ಕೃಪಾಮ್ ॥೨೨॥**

೨೨. ಕಳ್ಳರಿಗೊಡೆಯನೆ, ಶಂಕರನೇ, ವಿಭುವೆ (ನನ್ನ ಚಿತ್ತವೆಂಬ ಕಳ್ಳನು) ಆಶೆಯನ್ನು ಹುಟ್ಟಿಸುವದೇ ಮುಂತಾದ ಉಪಾಯಗಳಿಂದ ಹಣವನ್ನ ಅಪಹರಿಸುವದರಲ್ಲಿ ಆಸಕ್ತನಾಗಿ ಹಣವಂತರ ಮನೆಯೊಳಕ್ಕೆ ಹೋಗುವದರಲ್ಲಿಯೇ ಉದ್ಯುಕ್ತನಾಗಿ ಬಹಳವಾಗಿ ಅಲೆದಾಡುತ್ತಿರುತ್ತಾನೆ. ಈ ಚಿತ್ತವೆಂಬ ಚೋರನನ್ನು ಇಲ್ಲಿ ಹೇಗೆ ಸಹಿಸಲಿ? ಇವನನ್ನು ನಿನ್ನ ಅಧೀನನನ್ನಾಗಿ ಮಾಡಿಕೊಂಡು ನಿರಪರಾಧಿಯಾದ ನನ್ನಲ್ಲಿ ಕೃಪೆಯನ್ನು ಮಾಡು.

## ವಿವರಣೆ

ಈ ಶ್ಲೋಕದ ಅಭಿಪ್ರಾಯವೂ ಹಿಂದಿನ ಶ್ಲೋಕದಂತೆಯೇ ಇದೆ. ಸಿರಿವಂತರ ಮನೆಯನ್ನು ಹೊಕ್ಕು ಅವರನ್ನು ಹೊಗಳಿ ಆಸೆಹುಟ್ಟಿಸಿ ಅಥವಾ ಮತ್ತೆ ಯಾವದಾದರೊಂದು ಉಪಾಯದಿಂದ ಹಣವನ್ನು ಸಂಪಾದಿಸಬೇಕೆಂಬ ಆಶೆಯೇ ಮನಸ್ಸಿಗೆ ಬಹಳವಾಗಿರುತ್ತದೆ. ಇಂಥ ಚಿತ್ತವನ್ನು ಈಶ್ವರನಿಗೆ ಒಪ್ಪಿಸಿದರೆ ಅದು ತನ್ನ ದುರಭ್ಯಾಸವನ್ನು ಬಿಟ್ಟುಬಿಡುತ್ತದೆ. ಕಳ್ಳರನ್ನು ಕೂಡ ಒಳ್ಳೆಯ ಮಾರ್ಗಕ್ಕೆ ಹತ್ತಿಸುವದು ಶಿವಭಕ್ತಿಯು.

**ಕರೋಮಿ ತ್ವತ್ಪೂಜಾಂ ಸಪದಿ ಸುಖದೋ ಮೇ ಭವ ವಿಭೋ**
**ವಿಧಿತ್ವಂ ವಿಷ್ಣುತ್ವಂ ದಿಶಸಿ ಖಲು ತಸ್ಯಾಃ ಫಲಮಿತಿ ।**
**ಪುನಶ್ಚ ತ್ವಾಂ ದ್ರಷ್ಟುಂ ದಿವಿ ಭುವಿ ವಹನ್ ಪಕ್ಷಿಮೃಗತಾ-**
**ಮದೃಷ್ಟ್ವಾ ತತ್ಖೇದಂ ಕಥಮಿಹ ಸಹೇ ಶಙ್ಕರ ವಿಭೋ ॥೨೩॥**

೨೩. ಎಲೈ ವಿಭುವೆ, ಶಂಕರನೆ, ನಿನ್ನ ಪೂಜೆಯನ್ನು ಮಾಡುತ್ತೇನೆ. ಕೂಡಲೆ ನನಗೆ ಸುಖದಾಯಕನಾಗು. ಆ ಪೂಜೆಗೆ ಬ್ರಹ್ಮತ್ವವೂ ವಿಷ್ಣುತ್ವವೂ ಫಲವೆಂದು ಉಪದೇಶಿಸುತ್ತಿರುವೆಯಲ್ಲವೆ? ನಿನ್ನನ್ನು ನೋಡುವದಕ್ಕೆ ಪಕ್ಷಿಯ ಜನ್ಮವನ್ನೂ ಮೃಗದ ಜನ್ಮವನ್ನೂ ಪಡೆಯುವವನಾಗಿ ನಿನ್ನನ್ನು ನೋಡದೆ ಇರುವ ಅದರ ದುಃಖವನ್ನು ಹೇಗೇತಾನೆ ಸಹಿಸಲಿ?

## ವಿವರಣೆ

ಪರಮೇಶ್ವರನನ್ನು ಪೂಜೆಮಾಡಿದರೆ ಬ್ರಹ್ಮಪದವೂ ವಿಷ್ಣುಪದವೂ ದೊರಕುವವೆಂದು ಶಾಸ್ತ್ರವುಂಟು. ಶಾಸ್ತ್ರವು ಪರಮೇಶ್ವರನ ಉಸಿರೇ ಆದ್ದರಿಂದ ಈಶ್ವರನೇ ಹಾಗೆಂದು ಹೇಳಿದಂತೆ ಆಯಿತು. ಆದರೆ ಬ್ರಹ್ಮನಾದರೂ ವಿಷ್ಣುವಾದರೂ ಪರಮೇಶ್ವರನ ಆದ್ಯಂತಗಳನ್ನು ಕಾಣದೆ ಬಳಲಬೇಕಾಗಬಹುದು. ಏಕೆಂದರೆ ಹಿಂದೆ ಬ್ರಹ್ಮನಿಗೂ ವಿಷ್ಣುವಿಗೂ ಯಾರು ದೇವತೆಗಳಲ್ಲಿ ಹೆಚ್ಚಿನವರೆಂಬ ವಿಷಯಕ್ಕೆ ವಿವಾದವುಂಟಾಗಲು 'ನನ್ನ ಪಾದವನ್ನಾಗಲಿ ನನ್ನ ತಲೆಯನ್ನಾಗಲಿ ಕಂಡು ನಿಮ್ಮಲ್ಲಿ ಯಾವನು ಮೊದಲು ಬರುವನೋ ಅವನೇ ಹೆಚ್ಚಿನವನು' ಎಂದು ಈಶ್ವರನು

ಅಪ್ಪಣೆಕೊಡಿಸಿದನು. ಆಗ ಬ್ರಹ್ಮನು ಹಂಸರೂಪವನ್ನು ಧರಿಸಿ ಆಕಾಶದಲ್ಲೆಲ್ಲ ನೋಡಿದರೂ ಶಿವನ ತಲೆ ಕಾಣದೆ ಹೋಯಿತು; ವಿಷ್ಣುವು ವರಾಹ ರೂಪವನ್ನು ಧರಿಸಿ ಪಾತಾಳಕ್ಕೆ ಹೋದರೂ ಅವನ ಪಾದವು ಕಾಣದೆಹೋಯಿತು. ಸರ್ವಗತನಾಗಿರುವ ಪರಮಶಿವನ ಆದ್ಯಂತವನ್ನು ಯಾರುತಾನೆ ಕಾಣಬಲ್ಲರು?

ಹೀಗಿದ್ದರೂ ಅದೇ ಶಾಸ್ತ್ರದಲ್ಲಿ 'ಯಾರು ಪರಮೇಶ್ವರನನ್ನು ನಿಷ್ಕಾಮ ಭಕ್ತಿಯಿಂದ ಪೂಜಿಸುವರೋ ಅವರಿಗೆ ಆದರ ಫಲವಾಗಿ ಕೂಡಲೆ ಆ ಪರಮಾತ್ಮನ ಅನುಭವವು ಆಗಲೆ ಅಲ್ಲಿಯೇ ಆಗುತ್ತದೆ'- ಎಂದು ಹೇಳಿದೆ. ಆದ್ದರಿಂದ ಸಕಾಮನಾಗಿ ಬ್ರಹ್ಮತ್ವವಿಷ್ಣುತ್ವಗಳನ್ನು ಪಡೆಯುವುದಕ್ಕಿಂತಲೂ ನಿಷ್ಕಾಮನಾಗಿ ಪೂಜಿಸಿ ಸದ್ಯೋಮುಕ್ತಿಯನ್ನು ಪಡೆಯುವದೇ ಮೇಲು ಎಂದು ಕವಿ ವರ್ಣಿಸಿರುತ್ತಾನೆ. ಇಲ್ಲಿ ಬ್ರಹ್ಮನ ಅಥವಾ ವಿಷ್ಣುವಿನ ಕೀಳ್ತನವನ್ನು ಹೇಳಿದೆ ಎಂದು ಭ್ರಮಿಸಬಾರದು. ಎಂಥವರಿಗೂ ಸ್ವತಂತ್ರವಾಗಿ ಪರಮೇಶ್ವರತತ್ತ್ವವನ್ನು ತಿಳಿದುಕೊಳ್ಳುವದು ಆಗಲಾರದು- ಎಂಬುದೇ ಇಲ್ಲಿ ಗ್ರಹಿಸಬೇಕಾದದ್ದು.

**ಕದಾ ವಾ ಕೈಲಾಸೇ ಕನಕಮಣಿಸೌಧೇ ಸಹ ಗಣೈ-**
**ರ್ವಸನ್ ಶಮ್ಭೋರಗ್ರೇ ಸ್ಫುಟಘಟಿತಮೂರ್ಧಾಞ್ಜಲಿಪುಟಃ ।**
**ವಿಭೋ ಸಾಂಬ ಸ್ವಾಮಿನ್ ಪರಮಶಿವ ಪಾಹೀತಿ ನಿಗದನ್**
**ವಿಧಾತೄಣಾಂ ಕಲ್ಪಾನ್ ಕ್ಷಣಮಿವ ವಿನೇಷ್ಯಾಮಿ ಸುಖತಃ ॥೨೪॥**

೨೪. ಕೈಲಾಸದಲ್ಲಿ ರತ್ನಗಳಿಂದ ಕೆತ್ತಿದ ಚಿನ್ನದ ಭವನದಲ್ಲಿ ಪ್ರಮಥಗಣಗಳೊಂದಿಗೆ ವಾಸಮಾಡುತ್ತಾ ಶಂಭುವಿನ ಮುಂದೆ ತಲೆಯಮೇಲೆ ಗಟ್ಟಿಯಾಗಿ ಕೈ ಮುಗಿದುಕೊಂಡು 'ವಿಭುವೆ, ಸಾಂಬನೆ, ಸ್ವಾಮಿಯೆ, ಪರಮಶಿವನೆ, ಕಾಪಾಡು!'- ಎಂದು ಹೇಳಿಕೊಳ್ಳುತ್ತಾ ಬ್ರಹ್ಮರಕನೇಕರ ಕಲ್ಪಗಳನ್ನು ಒಂದುಕ್ಷಣವೆಂಬಂತೆ ಯಾವಾಗ ಸುಖದಿಂದ ಕಳೆದೇನು!

## ವಿವರಣೆ

ಅನೇಕ ಬ್ರಹ್ಮಲೋಕಗಳು ಲಯವಾದರೂ ಅರಿವಿಗೆ ಬರದಂತಿರುವ ಕಾಲಾತೀತಲೋಕವು ಶಿವಲೋಕವಾದ ಕೈಲಾಸವು ಎಂದಂತೆ ಆಯಿತು. ಅಲ್ಲಿ ಪರಮೇಶ್ವರನ ಚಿಂತೆಯ ಸುಖವೊಂದಲ್ಲದೆ ಮತ್ತೆ ಯಾವ ಮನಸ್ಸಿನ ಕಿರಿಕಿರಿಯೂ ಇರುವದಿಲ್ಲ ಎಂದೂ ಹೇಳಿದಂತೆ ಆಯಿತು.

**ಸ್ತವೈರ್ಬ್ರಹ್ಮಾದೀನಾಂ ಜಯಜಯವಚೋಭಿರ್ನಿಯಮಿನಾಂ**
**ಗಣಾನಾಂ ಕೇಳೀಭಿರ್ಮದಕಲಮಹೋಕ್ಷಸ್ಯ ಕಕುದಿ ।**
**ಸ್ಥಿತಂ ನೀಲಗ್ರೀವಂ ತ್ರಿನಯನಮುಮಾಶ್ಲಿಷ್ಟವಪುಷಂ**
**ಕದಾ ತ್ವಾಂ ಪಶ್ಯೇಯಂ ಕರಧೃತಮೃಗಂ ಖಣ್ಡಪರಶುಮ್ ॥೨೫॥**

೨೫ ಬ್ರಹ್ಮನೇ ಮೊದಲಾದವರ ಸ್ತೋತ್ರಗಳಿಂದಲೂ ಯೋಗಿಗಳ ಜಯ ಜಯ! ಎಂಬ ಘೋಷಗಳಿಂದಲೂ ಪ್ರಮಥಗಣಗಳ ಗದ್ದಲಗಳಿಂದಲೂ ಮದದಿಂದ ಗುಟುರುಹಾಕುತ್ತಿರುವ ವೃಷಭರಾಜನಾದ ನಂದಿಯ ಬೆನ್ನ ಮೇಲೆ ಇರುವ, ನೀಲಕಂಠನೂ ಮುಕ್ಕಣ್ಣನೂ ಪಾರ್ವತಿಯಿಂದ ಆಲಿಂಗಿಸಲ್ಪಟ್ಟ ಶರೀರವುಳ್ಳ ಕೈಯಲ್ಲಿ ಮೃಗವನ್ನು ಹಿಡಿದಿರುವ ಖಂಡುಪರಶುವೆಂಬ ಆಯುಧವನ್ನು ಧರಿಸಿರುವ ನಿನ್ನನ್ನು ಎಂದಿಗೆ ಕಂಡೇನು?

### ವಿವರಣೆ

ಶಿವನ ಸಭೆಯನ್ನು ಇಲ್ಲಿ ವರ್ಣಿಸಿದೆ. ಇಂಥ ಸಗುಣಮೂರ್ತಿಯನ್ನು ಧ್ಯಾನಮಾಡುವ ಭಕ್ತರಿಗೆ ಇದು ಸಹಾಯಕವಾಗಿರುತ್ತದೆ.

**ಕದಾ ವಾ ತ್ವಾಂ ದೃಷ್ಟ್ವಾ ಗಿರಿಶ ತವ ಭವ್ಯಾಙ್ಘ್ರಿಯುಗಲಂ**
**ಗೃಹೀತ್ವಾ ಹಸ್ತಾಭ್ಯಾಂ ಶಿರಸಿ ನಯನೇ ವಕ್ಷಸಿ ವಹನ್ ।**
**ಸಮಾಶ್ಲಿಷ್ಯಾಘ್ರಾಯ ಸ್ಫುಟಜಲಜಗನ್ಧಾನ್ ಪರಿಮಲಾ-**
**ನಲಭ್ಯಂ ಬ್ರಹ್ಮಾದ್ಯೈರ್ಮುದಮನುಭವಿಷ್ಯಾಮಿ ಹೃದಯೇ ॥೨೬॥**

೨೬. ಎಲೈ ಪರ್ವತವಾಸಿಯೆ, ನಿನ್ನನ್ನು ಕಂಡು ನಿನ್ನ ಮಂಗಲಕರವಾದ ಪಾದಗಳೆರಡನ್ನೂ ಕೈಗಳಿಂದ ಹಿಡಿದು ತಲೆಯಲ್ಲಿಯೂ ಕಣ್ಣಿನಲ್ಲಿಯೂ ಎದೆಯಲ್ಲಿಯೂ ಒತ್ತಿಕೊಂಡು ಅಪ್ಪಿಕೊಂಡು, ಅರಳಿದ ಕಮಲದಿಂದ ಹುಟ್ಟಿದ ಪರಿಮಳಗಂಧವನ್ನು ಮೂಸುತ್ತಾ ಬ್ರಹ್ಮಾದಿಗಳಿಗೂ ಸಿಕ್ಕದಿರುವ ಸಂತೋಷವನ್ನು ಮನಸ್ಸಿನಲ್ಲಿ ಯಾವಾಗ ಅನುಭವಿಸಿಯೇನು?

### ವಿವರಣೆ

ಪರಮಾತ್ಮನ ಸೇವೆಯಿಂದಾಗುವ ಅಪರಿಮಿತಾನಂದದ ಭಾವನೆಯಿದು.

ಕರಸ್ಥೇ ಹೇಮಾದ್ರೌ ಗಿರಿಶ ನಿಕಟಸ್ಥೇ ಧನಪತೌ
ಗೃಹಸ್ಥೇ ಸ್ವರ್ಭೂಜಾಮರಸುರಭಿಚಿನ್ತಾಮಣಿಗಣೇ ।
ಶಿರಸ್ಥೇ ಶೀತಾಂಶೌ ಚರಣಯುಗಲಸ್ಥೇಽಖಿಲಶುಭೇ
ಕಮರ್ಥಂ ದಾಸ್ಯೇಽಹಂ ಭವತು, ಭವದರ್ಥಂ ಮಮ ಮನಃ ॥೨೭॥

೨೭. ಎಲೈ ಕೈಲಾಸವಾಸಿಯೆ, ಚಿನ್ನದ ಪರ್ವತವೇ ಕೈಯಲ್ಲಿರುತ್ತಿರುವಲ್ಲಿ, ಧನಗಳೊಡೆಯನೇ ಹತ್ತಿರವಿರುತ್ತಿರುವಲ್ಲಿ, ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿ- ಇವುಗಳ ಗುಂಪೇ ಮನೆಯಲ್ಲಿರಲು ತಂಗದಿರನೇ ನಿನ್ನ ತಲೆಯಲ್ಲಿರುವಲ್ಲಿ, ಸರ್ವಮಂಗಲವೂ ಪಾದಯುಗ್ಮದಲ್ಲಿರುತ್ತಿರುವಲ್ಲಿ, ನಾನು ಯಾವ ವಸ್ತುವನ್ನು ತಾನೆ ಕೊಟ್ಟೇನು? ನಿನಗಾಗಿ ನನ್ನ ಮನಸ್ಸು ಇದ್ದು ಕೊಂಡಿರಲಿ!

## ವಿವರಣೆ

ಶಿವನಿಗೆ ಮೇರುವೆಂಬ ಚಿನ್ನದ ಪರ್ವತವು ಕೈಯಲ್ಲಿದೆ, ಕುಬೇರನೇ ಸ್ನೇಹಿತನಾಗಿರುತ್ತಾನೆ; ಆದ್ದರಿಂದ ಅವನಿಗೆ ಧನಕನಕದ ಕೊರತೆಯೇನೂ ಇಲ್ಲ. ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿ- ಇವು ಮನಸ್ಸಿನಲ್ಲಿ ಹೊಳೆಯುವ ವಸ್ತುಗಳನ್ನೆಲ್ಲ ಒದಗಿಸುವ ಪದಾರ್ಥಗಳು; ಅವೂ ಆತನ ವಶದಲ್ಲಿವೆ. ಎಲ್ಲರ ಮನಸ್ಸಿಗೂ ಸಂತೋಷವನ್ನುಂಟು ಮಾಡುವ ಚಂದ್ರನೇ ಅವನಿಗೆ ಶಿರೋಭೂಷಣವು. ಜೀವರುಗಳಿಗೆ ಕೊಡಬಹುದಾದ ಪುರುಷಾರ್ಥಗಳೆಲ್ಲವೂ ಆತನ ಪಾದಪದ್ಮಗಳ ವಶವಾಗಿರುತ್ತವೆ. ಅಂತೂ ಅವಾಪ್ತಸರ್ವಕಾಮನಾಗಿರುವ ಆ ಪರಮೇಶ್ವರನು ನಮ್ಮಂಥವರಿಂದ ಏನನ್ನು ತಾನೆ ಬೇಡಿಯಾನು? ಹೀಗಿರುವದರಿಂದ ಸಾಧಕರು ಭಗವಂತನನ್ನು ಇಂಥದ್ದೊಂದು ಅಪೂರ್ವವಸ್ತುವನ್ನು ಕೊಟ್ಟು ಮತ್ತೆಲ್ಲಿಯೋ ಸಂತೋಷಗೊಳಿಸುವೆನು ಎಂಬ ಹಂಬಲವನ್ನು ತೊರೆಯಬೇಕು. ತಮ್ಮ ಮನಸ್ಸನ್ನು ಚಲಿಸದಂತೆ ಆತನಲ್ಲಿಯೇ ನಿಲ್ಲಿಸಬೇಕು. ಪರಮೇಶ್ವರನು ಭಕ್ತಿಯೊಂದಕ್ಕೆ ಒಲಿಯುವನೇ ಹೊರತು ಸಾಧಕರಿಂದ ಮತ್ತೇನನ್ನೂ ಬಯಸನು. ಭಕ್ತಿಯೇ ಎಲ್ಲಾ ಪುರುಷಾರ್ಥಗಳಿಗೂ ಸಾಧನವಾಗಿರುತ್ತದೆ ಎಂದು ಅಭಿಪ್ರಾಯ.

ಸಾರೂಪ್ಯಂ ತವ ಪೂಜನೇ ಶಿವ ಮಹಾದೇವೇತಿ ಸಂಕೀರ್ತನೇ
ಸಾಮೀಪ್ಯಂ ಶಿವಭಕ್ತಿಧುರ್ಯಜನತಾಸಾಂಗತ್ಯಸಂಭಾಷಣೇ।
ಸಾಲೋಕ್ಯಂ ಚ ಚರಾಚರಾತ್ಮಕತನುಧ್ಯಾನೇ ಭವಾನೀಪತೇ
ಸಾಯುಜ್ಯಂ ಮಮ ಸಿದ್ಧಮತ್ರ ಭವತಿ ಸ್ವಾಮಿನ್ ಕೃತಾರ್ಥೋಽಸ್ಮ್ಯಹಮ್ ॥

೨೮. ನಿನ್ನ ಪೂಜೆಯಿಂದ ಸಾರೂಪ್ಯವೂ, ಶಿವ! ಮಹಾದೇವ! ಎಂದು ಗಟ್ಟಿಯಾಗಿ ಕೂಗಿ ಸುತ್ತಿಸುವದರಲ್ಲಿ ಸಾಮೀಪ್ಯವೂ, ಶಿವಭಕ್ತಿಯಲ್ಲಿ ಶ್ರೇಷ್ಠರಾದ ಜನರ ಸಹವಾಸದಲ್ಲಿಯೂ ಅವರೊಡನೆ ಸಂಭಾಷಣೆಮಾಡುವದರಲ್ಲಿ ಸಾಲೋಕ್ಯವೂ, ಸ್ಥಾವರಜಂಗಮಾತ್ಮಕವಾದ ನಿನ್ನ ಅಷ್ಟಮೂರ್ತಿರೂಪವನ್ನು ಧ್ಯಾನಿಸುವದರಲ್ಲಿ ಸಾಯುಜ್ಯವೂ ನನಗೆ ಇಲ್ಲಿಯೇ ಸಿದ್ಧವಾಗುತ್ತವೆ. ಸ್ವಾಮಿಯೆ, ನಾನು ಕೃತಾರ್ಥನಾಗಿರುತ್ತೇನೆ.

## ವಿವರಣೆ

ಪರಮಶಿವನ ಸೇವೆಯಿಂದ, ಶರೀರಪಾತವಾದಮೇಲೆ ಸಾರೂಪ್ಯ, ಸಾಮೀಪ್ಯ, ಸಾಲೋಕ್ಯ, ಸಾಯುಜ್ಯ- ಎಂಬ ನಾಲ್ಕು ವಿಧವಾದ ಮುಕ್ತಿಗಳು ಸಾಧನದ ಉತ್ಕರ್ಷಕ್ಕೆ ಅನುಗುಣವಾಗಿ ಆಗುತ್ತವೆ ಎಂದು ದೊಡ್ಡವರು ಹೇಳುತ್ತಾರೆ.

ಆದರೆ ಸಾಧನೆಯು ಉತ್ಕಟವಾಗಿದೆ, ಆದರಿಂದ ಅವಶ್ಯವಾಗಿ ನನಗೆ ಚತುರ್ವಿಧಮುಕ್ತಿಯೂ ಆಗುವದು ನಿಶ್ಚಯ ಎಂದು ಗೊತ್ತಾಗುವದಕ್ಕೆ ಇಲ್ಲಿರುವಾಗಲೇ ಗುರುತುಗಳು ಕಾಣಬೇಕು. ಹೇಗೆಂದರೆ ಶಿವನ ಅರ್ಚನೆಯನ್ನು ಮಾಡುವಾಗ ಆತನ ಮೂರ್ತಿಯಲ್ಲಿಯೇ ಕಣ್ಣುಗಳೂ ಮನಸ್ಸೂ ಪೂರ್ತಿಯಾಗಿ ನೆಟ್ಟುಬಿಟ್ಟಿದ್ದರೆ ತನ್ನನ್ನಾಗಲಿ ಮತ್ತೊಬ್ಬರನ್ನಾಗಲಿ ನೋಡುವ ಸಂಭವವೇ ಇರುವುದಿಲ್ಲ, ಆದ್ದರಿಂದ ಶಿವನ ರೂಪವೊಂದೇ ತನ್ನ ಮನದಲ್ಲಿ ಉಳಿಯುವದರಿಂದ ಶಿವಸಾರೂಪ್ಯವು ದೊರೆತ ಭಾವನೆಯಾಗುವದು.

ಶಿವ! ಮಹಾದೇವ! ಎಂದು ಶ್ರದ್ಧಾಭಕ್ತಿಯುತನಾಗಿ ಕೀರ್ತನಮಾಡುತ್ತಿರುವ ಪ್ರೇಮಮಯವಾದ ಹೃದಯವುಳ್ಳಾತನಿಗೆ ಆ ಶಿವನು ಎಲ್ಲಿಯೋ ದೂರದಲ್ಲಿರುವನೆಂದಾಗಲಿ ಅವನನ್ನು ಸೇರುವದಕ್ಕೆ ಇನ್ನೂ ಬಹಳ ಕಾಲವುಬೇಕೆಂದಾಗಲಿ ಎನಿಸುವದಿಲ್ಲ, ಆ ಮಹಾದೇವನು, ಈಗಲೆ ಇಲ್ಲಿಯೇ ಇರುತ್ತಾನೆ ಎಂಬ ಭಾವನೆಯು ಆಗಿಬಿಡುವದು. ಭಕ್ತನಿಗೆ ಇದೇ ಸಾಲೋಕ್ಯವು.

ತಮ್ಮ ತಾಯಿಯು ಎಲ್ಲಿಯೇ ಇರಲಿ, ಮಕ್ಕಳು ಆಕೆಯ ನೆನಪಾದಕೂಡಲೆ ಇದ್ದಲ್ಲಿಂದಲೇ 'ಅಮ್ಮಾ!' ಎಂದು ಗಟ್ಟಿಯಾಗಿ ಕೂಗಿಕೊಳ್ಳುವರು; ಅವರ ಧ್ವನಿಯನ್ನು

ಕೇಳಿದರೆ ತಾಯಿ ಎಷ್ಟೇ ದೂರದಲ್ಲಿದ್ದರೂ ಅಲ್ಲಿಗೆ ಧಾವಿಸಿಬರುತ್ತಾಳೆಂದು ಆ ಮಕ್ಕಳಿಗೆ ಗಟ್ಟಿಯಾದ ನಂಬಿಕೆ ಇದ್ದು ಬಿಡುತ್ತದೆಯಲ್ಲವೆ? ಇದರಂತೆ ಶಿವನಾಮಸಂಕೀರ್ತನೆಯಿಂದ ಭಕ್ತನಿಗೆ ತಾನು ಆ ಮಹಾದೇವನ ಹತ್ತಿರದಲ್ಲಿಯೇ ಇರುವೆನೆಂಬ ಭಾವನೆಯ ಸಾಮೀಪ್ಯಮುಕ್ತಿಯು ದೊರೆತಂತೆ ಆಗಿರುತ್ತದೆ.

ಅಷ್ಟಮೂರ್ತಿಯಾದ ಶಿವನು ಸರ್ವಾತ್ಮನು. ಎತ್ತ ನೋಡಿದರೂ ಅತ್ತ ಆತನೇ ನನಗೆ ಗೋಚರವಾಗುತ್ತಿರುವನು. ಹೀಗಿರುವಲ್ಲಿ ನಾನು ಮಾತ್ರ ಅವನನ್ನು ಬಿಟ್ಟು ಬೇರೆ ಹೇಗೆ ಇರುವದಕ್ಕಾದೀತು?- ಎಂಬ ಭಾವನೆಯು ಶಿವಧ್ಯಾನದಿಂದ ಸಾಧಕನಿಗೆ ದೊರಕುವದು. ಇದೇ ಸಾಯುಜ್ಯಮುಕ್ತಿಯ ಹೆಗ್ಗುರುತು.

ಯಾರು ಹೀಗೆ ಸಾಧನೋತ್ಕರ್ಷದಿಂದ ಕಾಲವನ್ನು ಕಳೆಯುವರೋ ಅವರಿಗೆ 'ದೇವೋ ಭೂತ್ವಾ ದೇವಾನಪ್ಯೇತಿ' ಎಂಬ ಶ್ರುತಿಯಂತೆ ಆ ದೇವನ ಸಾಕ್ಷಾತ್ಕಾರವು ಇಲ್ಲಿಯೇ ದೊರಕುವದರಿಂದ ಅವರಿಗೆ ಶಿವಲೋಕದಲ್ಲಿ ಮುಕ್ತಿಚತುಷ್ಟಯವೂ ವಶವಾಗುವದು ಸಿದ್ಧ.

**ತ್ವತ್ಪಾದಾಮ್ಬುಜಮರ್ಚಯಾಮಿ ಪರಮಂ ತ್ವಾಂ ಚಿನ್ತಯಾಮ್ಯನ್ವಹಂ**
**ತ್ವಾಮೀಶಂ ಶರಣಂ ವ್ರಜಾಮಿ ವಚಸಾ ತ್ವಾಮೇವ ಯಾಚೇ ವಿಭೋ ।**
**ದೀಕ್ಷಾಂ ಮೇ ದಿಶ ಚಾಕ್ಷುಷೀಂ ಸಕರುಣಾಂ ದಿವ್ಯೈಶ್ಚಿರಂ ಪ್ರಾರ್ಥಿತಾಂ**
**ಶಮ್ಭೋ ಲೋಕಗುರೋ ಮದೀಯಮನಸಃ ಸೌಖ್ಯೋಪದೇಶಂ ಕುರು ॥**

೨೯. ಶಂಭುವೆ, ಲೋಕಗುರುವೆ, ನಿನ್ನ ಪಾದಕಮಲವನ್ನು ಅರ್ಚಿಸುವೆನು; ಶ್ರೇಷ್ಠನಾದ ನಿನ್ನನ್ನು ದಿನದಿನವೂ ಚಿಂತಿಸುತ್ತಿರುವೆನು. ಈಶ್ವರನಾದ ನಿನ್ನನ್ನೇ ಶರಣುಹೊಗುವೆನು. ವಿಭುವೆ, ವಾಕ್ಕಿನಿಂದ ನಿನ್ನನ್ನೇ ಪ್ರಾರ್ಥಿಸುತ್ತಿರುವೆನು; ದೇವತೆಗಳೂ ಬಹುಕಾಲದಿಂದ ಪ್ರಾರ್ಥಿಸುತ್ತಿರುವ ಕರುಣಾಸಹಿತನಾದ ಚಾಕ್ಷುಷೀದೀಕ್ಷೆಯನ್ನು ಕೊಡು, ನನ್ನ ಮನಸ್ಸಿಗೆ ಸೌಖ್ಯೋಪದೇಶವನ್ನು ಮಾಡು!

### ವಿವರಣೆ

ಗುರುವನ್ನೇ ಸೇವಿಸುತ್ತಾ ಗುರುಧ್ಯಾನವನ್ನೇ ಮಾಡುತ್ತಾ, ಗುರುವನ್ನೇ ಶರಣುಹೊಂದಿ, ನನ್ನನ್ನು ಅನುಗ್ರಹಿಸಬೇಕು!- ಎಂದು ಮತ್ತೆ ಮತ್ತೆ ಬೇಡುತ್ತಿರುವ ಶಿಷ್ಯನಿಗೆ ದಯಾರ್ದ್ರಹೃದಯನಾದ ಗುರುವು ಮೊದಲು ಚಾಕುಷೀದೀಕ್ಷೆಯನ್ನು ಕೊಟ್ಟು ಆ ಬಳಿಕ ಉಪದೇಶ ಮಾಡುವನೆಂದು ಆಗಮಜ್ಞರು ಹೇಳುತ್ತಾರೆ.

ಲೋಕದಲ್ಲಿರುವ ಮಾನವಗುರುಗಳೇ ಹೀಗೆ ಕನಿಕರದಿಂದ ಶಿಷ್ಯನನ್ನು ಉದ್ಧಾರ ಮಾಡುತ್ತಿರುವಲ್ಲಿ ಲೋಕಗುರುವಾದ ಶಂಭುವಿನ ವಿಷಯದಲ್ಲಿ ಹೇಳುವದಿನ್ನೇನು? ಆ ಪರಮಶಿವನೇ ಸನಕಾದಿಋಷಿಗಳಿಗೂ ಸ್ವರ್ಗದಲ್ಲಿರುವ ದೇವತೆಗಳಿಗೂ ಉಪದೇಶ ಮಾಡುವಾತನು. ಆತನ ಸೇವೆಯಿಂದ ಕೃತಾರ್ಥರಾದೇವೆ? ಆತನ ಧ್ಯಾನದಲ್ಲಿ ಮುಳುಗಿ ಯೇವೆ? ಅವನೇ ಶರಣೆಂದು ಮಿಕ್ಕ ಆಶ್ರಯವನ್ನೆಲ್ಲ ಎಂದಿಗೆ ಬಿಟ್ಟೇವು? ಆತನು ನಮ್ಮ ಪ್ರಾರ್ಥನೆಯನ್ನು ಕೇಳಿ ಎಂದಿಗೆ ತನ್ನ ದರ್ಶನವನ್ನು ಕೊಟ್ಟು ದಯಾರ್ದ್ರದೃಷ್ಟಿಯಿಂದ ನಮ್ಮನ್ನು ನೋಡಿ ಅನುಗ್ರಹಿಸಿಯಾನು? ಎಂದಿಗೆ ಆತನ ಮೃದುಮಧುರವಾದ ಉಪದೇಶವಾಕ್ಯಗಳನ್ನು ಕೇಳಿ ನಮ್ಮ ಕಿವಿಗಳು ಆನಂದಿಸಿಯಾವು?- ಎಂದು ಹಂಬಲಿಸುತ್ತಿರುವರು.

ಆದರೆ ಪರಮೇಶ್ವರನು ದೇವತೆಗಳು ಮೇಲಿನ ಲೋಕದಲ್ಲಿರುವವರು ಎಂದು ಅವರಲ್ಲಿ ಹೆಚ್ಚಿನ ಪಕ್ಷಪಾತವನ್ನು ಇಟ್ಟಿಲ್ಲ. ಯಾರು ಸರ್ವಭಾವದಿಂದಲೂ ತನ್ನನ್ನೇ ಸೇವಿಸುವರೋ ಅವರಿಗೆ ಸದ್ಗುರುವಿನ ವೇಷದಿಂದ ಬಂದು ತನ್ನ ದಿವ್ಯವಾದ ಕೃಪಾರ್ದ್ರದೃಷ್ಟಿಯಿಂದ ನೋಡುವನು. ಆ ಚಾಕ್ಷುಷೀದೀಕ್ಷೆಯಿಂದಲೇ ಅವರು ದಿವ್ಯವಾದ ಸುಖವನ್ನು ಹೊಂದುವರು. ಇನ್ನು ಸದ್ಗುರುಮೂರ್ತಿಯ ರೂಪದಿಂದ ಆತನು ಉಪದೇಶಿಸಿದರೆ ಹೇಳತಕ್ಕದ್ದೇನು?

**ವಸ್ತ್ರೋದ್ಧೂತವಿಧೌ ಸಹಸ್ರಕರತಾ ಪುಷ್ಪಾರ್ಚನೇ ವಿಷ್ಣುತಾ**
**ಗನ್ಧೇ ಗನ್ಧವಹಾತ್ಮತಾನ್ನಪಚನೇ ಬರ್ಹಿರ್ಮುಖಾಧ್ಯಕ್ಷತಾ ।**
**ಪಾತ್ರೇ ಕಾಞ್ಚನಗರ್ಭತಾಸ್ತಿಮಯಿ ಚೇದ್ ಬಾಲೇನ್ದು ಚೂಡಾಮಣೇ**
**ಶುಶ್ರೂಷಾಂ ಕರವಾಣಿ ತೇ ಪಶುಪತೇ ಸ್ವಾಮಿನ್ ತ್ರಿಲೋಕೀಗುರೋ ।೩೦।**

೩೦. ಬಾಲಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವ ಪಶುಪತಿಯೇ; ಸ್ವಾಮಿಯೆ, ಮೂರು ಲೋಕಕ್ಕೂ ಹಿರಿಯನಾದವನೆ, ವಸ್ತ್ರವನ್ನು ಶುದ್ಧಿಗೊಳಿಸುವದರಲ್ಲಿ ಸಾವಿರಕಿರಣವುಳ್ಳ ಸೂರ್ಯನ ಭಾವವೂ ಹೂಗಳನ್ನು ಅರ್ಚಿಸುವದರಲ್ಲಿ ವಿಷ್ಣುತ್ವವೂ ಗಂಧವನ್ನು ಅರ್ಪಿಸುವದರಲ್ಲಿ ಗಂಧವಹನಾದ ವಾಯುವಿನ ಭಾವವೂ ಅನ್ನವನ್ನು ಬೇಯಿಸಿ ಸಿದ್ಧಗೊಳಿಸುವ ದೇವತೆಗಳೆಲ್ಲರ ಅಗ್ರಗಾಮಿತ್ವವೂ ಪಾತ್ರವನ್ನರ್ಪಿಸುವದರಲ್ಲಿ ಹಿರಣ್ಯಗರ್ಭನ ಸ್ಥಾನವೂ ನನ್ನಲ್ಲಿರುವದಾದರೆ ನಿನ್ನ ಸೇವೆಯನ್ನು ಮಾಡಿಯೇನು!

## ವಿವರಣೆ

ಮಹಾದೇವನಾದ ಶಿವನಿಗೆ ವಸ್ತ್ರವನ್ನು ಶುದ್ಧಿಗೊಳಿಸಿ ಸಿದ್ಧಪಡಿಸುವದಕ್ಕೆ ಸಕಲದಿಕ್ಕುಗಳನ್ನೂ ಬೆಳಗುವ ಸೂರ್ಯನೊಬ್ಬನಿಗೆ ಸಾಧ್ಯ; ಇಲ್ಲದಿದ್ದರೆ ದಿಗಂಬರನಾದ ಆತನಿಗೆ ಯಾವ ಮಡಿಯ ವಸ್ತ್ರವನ್ನು ಯಾವನುತಾನೆ ಅರ್ಪಿಸಬಲ್ಲನು? ಹೂಗಳನ್ನು ಅರ್ಪಿಸುವದಾದರೆ ವಿಷ್ಣುವೊಬ್ಬನಿಗೆ ಮಾತ್ರ ಸಾಧ್ಯ; ಏಕೆಂದರೆ ಹಿಂದೆ ಆತನು ಶಿವನನ್ನು ಪ್ರತಿದಿನವೂ ಸಹಸ್ರಕಮಲಗಳಿಂದ ಅರ್ಚಿಸುತ್ತಿರುವಲ್ಲಿ ಒಂದು ದಿನ ಶಿವನು ಲೀಲೆಯಿಂದ ಒಂದು ಹೂವು ಸಂಖ್ಯೆಯಲ್ಲಿ ಕಡಿಮೆಯಾಗುವಂತೆ ಮಾಡಿದನು. ಆಗ ತನಗೆ ಕಮಲನೇತ್ರನೆಂಬ ಪ್ರಸಿದ್ಧನಾಮವಿದೆ ಎಂಬುದನ್ನು ಮನದಂದು ವಿಷ್ಣುವು ತನ್ನ ಕಣ್ಣನ್ನೇ ಅರ್ಪಿಸಿ ಸಹಸ್ರನಾಮಾರ್ಚನೆಯನ್ನು ಪೂರ್ಣಗೊಳಿಸಿದನಂತೆ; ಸರ್ವವ್ಯಾಪಕನಾದ ಆ ಪರಮೇಶ್ವರನಿಗೆ ತಕ್ಕಷ್ಟು ಗಂಧವನ್ನು ಯಾವನುತಾನೆ ಒದಗಿಸಿಯಾನು? ಪ್ರಪಂಚದಲ್ಲಿರುವ ಎಲ್ಲಾ ಗಂಧಗಳನ್ನೂ ತಮ್ಮ ತಮ್ಮ ಆಶ್ರಯದಿಂದ ಕೊಂಡೊಯ್ಯಬಲ್ಲ ವಾಯುದೇವನಾದರೆ ಮಾತ್ರ. 'ಸರ್ವಗಂಧವೂ ಗಂಧಾತ್ಮನಾದ ಶಿವನಿಗೆ ಅರ್ಪಿತವಾಗಲಿ!' ಎಂದು ಅರ್ಪಿಸಬಲ್ಲನು. ಆ ಕಾಲರುದ್ರನಿಗೆ ಸಾಕಾಗುವಷ್ಟು ಅನ್ನವನ್ನು ಪಕ್ವಗೊಳಿಸುವ ಸಾಮರ್ಥ್ಯವು ಯಾವನಿಗೆತಾನೆ ಇದ್ದೀತು? ದೇವತೆಗಳಲ್ಲಿ ಅಗ್ರಗಾಮಿಯಾದ್ದರಿಂದ 'ಅಗ್ನಿ' ಎಂಬ ಹೆಸರುಳ್ಳ ಅಗ್ನೀದೇವನು ಮಾತ್ರ ಎಲ್ಲವನ್ನೂ ಪಕ್ವಗೊಳಿಸುವ ಶಕ್ತಿಯುಳ್ಳವನಾಗಿರುವದರಿಂದ ಆತನು ನೈವೇದ್ಯವನ್ನು ಪಾಕಮಾಡಬಹುದು. ಆ ನೈವೇದ್ಯಕ್ಕೆ ತಕ್ಕ ಪಾತ್ರವನ್ನು ಯಾವನು ಸಿದ್ಧಗೊಳಿಸುವದಕ್ಕಾದೀತು? ಬ್ರಹ್ಮಾಂಡವೆಲ್ಲಕ್ಕೂ ಒಡೆಯನಾದ ಬ್ರಹ್ಮದೇವನು ಮಾತ್ರ ಈ ಲೋಕವೆಲ್ಲವನ್ನೂ ತಕ್ಕ ಪಾತ್ರೆಯೆಂದು ಒದಗಿಸಬಹುದಾದೀತು. ಆದ್ದರಿಂದ ನಾನು ಶಿವನ ಸೇವೆಯನ್ನು ಮಾಡಬಲ್ಲೆನು- ಎಂಬ ಹೆಮ್ಮೆಯನ್ನು ಯಾವನೂ ವಹಿಸಬಾರದು; ಯಥಾಶಕ್ತಿಯಾಗಿ ಭಕ್ತಿಯಿಂದ ಪರಮೇಶ್ವರನ ಸೇವೆಗೆ ಸಿದ್ಧನಾಗಬೇಕು. ಭಕ್ತಿಯಿಂದ ಎಷ್ಟು ಅಲ್ಪವನ್ನು ಅರ್ಪಿಸಿದರೂ ಈ ದಯಾಲುವು ಅದನ್ನೇ ದೊಡ್ಡದಾಗಿ ಭಾವಿಸಿ ಅನುಗ್ರಹಿಸುತ್ತಾನೆ- ಎಂಬುದು ಶ್ಲೋಕದ ಅಭಿಪ್ರಾಯ.

**ನಾಲಂ ವಾ ಪರಮೋಪಕಾರಕಮಿದಂ ತ್ವೇಕಂ ಪಶೂನಾಂ ಪತೇ**
**ಪಶ್ಯನ್ ಕುಕ್ಷಿಗತಾನ್ ಚರಾಚರಗಣಾನ್ ಬಾಹ್ಯಸ್ಥಿತಾನ್ ರಕ್ಷಿತುಮ್ ।**
**ಸರ್ವಾಮರ್ತ್ಯಪಲಾಯನೌಷಧಮತಿಜ್ವಾಲಾಕರಂ ಭೀಕರಂ**
**ನಿಕ್ಷಿಪ್ತಂ ಗರಲಂ ಗಲೇ ನ ಗಿಲಿತಂ ನೋದ್ಗೀರ್ಣಮೇವ ತ್ವಯಾ ॥೩೧॥**

೩೧. ಪಶುಪತಿಯೆ, ಹೊಟ್ಟೆಯೊಳಗಿರುವ ಮತ್ತು ಹೊರಗಿರುವ ಸ್ಥಾವರಜಂಗಮಸಮೂಹಗಳನ್ನು ಕಂಡು ಅವರನ್ನು ರಕ್ಷಿಸುವದಕ್ಕೆ ದೇವತೆಗಳನ್ನೆಲ್ಲ

ಓಡಿಸುವ ಮದ್ದಾಗಿದ್ದ ಹೆಚ್ಚಿನ ಉರಿಯುಳ್ಳ ಭಯಂಕರವಾದ ವಿಷವು ನಿನ್ನಿಂದ ನುಂಗಲ್ಪಡಲಿಲ್ಲ, ಕಾರಲ್ಪಡಲೂ ಇಲ್ಲ, ಕಂಠದಲ್ಲಿಯೇ ಇರಿಸಲ್ಪಟ್ಟಿತು. ಹೆಚ್ಚಿನ ಉಪಕಾರಕವಾದ ಇದೊಂದೇ ಸಾಲದೇನು?

## ವಿವರಣೆ

ಸಮುದ್ರಮಥನಕಾಲದಲ್ಲಿ ಹಾಲಾಹಲವೆಂಬ ಭೀಕರವಾದ ಉರಿಯನ್ನು ಉಗುಳುವ ವಿಷವು ಉಂಟಾಯಿತು. ಅದುವರೆಗೆ ಬೇರೆಬೇರೆಯ ಉತ್ತಮ ಪದಾರ್ಥಗಳು ಹುಟ್ಟಿದವು; ಅವನ್ನು 'ನನಗೆ ಬೇಕು, ನನಗೆ ಬೇಕು'- ಎಂದು ಇಟ್ಟುಕೊಂಡಿದ್ದ ದೊಡ್ಡದೊಡ್ಡ ದೇವತೆಗಳು ಕೂಡ ಆ ಉರಿಯ ವೇಗವನ್ನು ತಡೆದುಕೊಳ್ಳಲಾರದೆ ದಿಕ್ಕಾಪಾಲಾಗಿ ಓಡಿದರು.

ಆದರೆ ಕರುಣಾಳುವಾದ ಪರಮಶಿವನು ಆ ವಿಷವನ್ನು ಆಪೋಶನಮಾಡಿದಂತೆ ಕುಡಿದುಬಿಟ್ಟನು. ಆಗ ತಾನು ಬ್ರಹ್ಮಾಂಡನಾಯಕನಾದ್ದರಿಂದ ತನ್ನನ್ನು ಆಶ್ರಯಿಸಿಕೊಂಡು ತನ್ನ ಹೊಟ್ಟೆಯೊಳಗೂ ಹೊರಗೂ ಎಷ್ಟೋ ಸ್ಥಾವರಜಂಗಮಜೀವಿಗಳಿದ್ದಾರಲ್ಲ, ಇವರಿಗೆ ತೊಂದರೆಯಾಗುವದಲ್ಲ!- ಎಂದು ಯೋಚಿಸಿಕೊಂಡು ಆ ವಿಷವನ್ನು ನುಂಗಲಿಲ್ಲ, ಆದ್ದರಿಂದ ಹೊಟ್ಟೆಯೊಳಗಿದ್ದ ಪ್ರಾಣಿಗಳೆಲ್ಲ ಬದುಕಿಕೊಂಡಿವು; ಅದನ್ನು ಉಗುಳಲೂ ಇಲ್ಲ, ಅದರಿಂದ ಆತನ ಸಗುಣಾಕಾರದ ಹೊರಗೆ ಇದ್ದ ಪ್ರಾಣಿಗಳೂ ವಿಷದ ಉರಿಗೆ ಸಿಕ್ಕಿಕೊಳ್ಳದೆ ಬದುಕಿಕೊಂಡವು. ಅದನ್ನು ಕೊರಳಿನಲ್ಲಿ ಹಾಗೆಯೇ ನಿಲ್ಲಿಸಿಕೊಂಡುಬಿಟ್ಟನು. ಆತನ ಅತಿಶುಭ್ರವಾದ ಕಂಠದೊಳಗಿನಿಂದ ವಿಷವು ಹೊರಕ್ಕೆ ತನ್ನ ಕಾಂತಿಯನ್ನು ಬೀರುತ್ತಾ ಅಲ್ಲಿಯೇ ಇದ್ದುಕೊಂಡಿತು. ಅಂದಿನಿಂದ ಶಿವನಿಗೆ ''ವಿಷಕಂಠ'' ''ಶ್ರೀಕಂಠ''- ಎಂಬ ಅನ್ವರ್ಥನಾಮಗಳು ಉಂಟಾದವು. ಈಶ್ವರನೆಂದರೆ ಸರ್ವರನ್ನೂ ಆಳುವವನು, ಸರ್ವಶಕ್ತನು, ಲೋಕಕ್ಕೆಲ್ಲ ಪರಮೋಪಕಾರವನ್ನು ಮಾಡುವ ದಯಾಘನನು- ಎಂಬ ಉತ್ತಮಗುಣಗಳು ಇದರಿಂದ ಪ್ರಕಾಶಿತವಾದವು.

**ಜ್ವಾಲೋಗ್ರಃ ಸಕಲಾಮರಾತಿಭಯದಃ ಕ್ಷ್ವೇಲಃ ಕಥಂ ವಾ ತ್ವಯಾ**
**ದೃಷ್ಟಃ ಕಿಂ ಚ ಕರೇ ಧೃತಃ ಕರತಲೇ ಕಿಂ ಪಕ್ವಜಮ್ಬೂಫಲಮ್ ।**
**ಜಿಹ್ವಾಯಾಂ ನಿಹಿತಶ್ಚ ಸಿದ್ಧಗುಟಿಕಾ ವಾ ಕಣ್ಠದೇಶೇ ಧೃತಃ**
**ಕಿಂ ತನ್ನೀಲಮಣಿರ್ವಿಭೂಷಣಮಯಂ ಶಮ್ಭೋ ಮಹಾತ್ಮನ್ ವದ ॥೩೨॥**

೩೨. ಶಂಭುವೆ, ಮಹಾತ್ಮನೆ, ಜ್ವಾಲೆಗಳಿಂದ ಉಗ್ರವಾಗಿ, ಎಲ್ಲಾ ದೇವತೆಗಳಿಗೂ ಅತಿಭಯಂಕರವಾಗಿದ್ದ ಈ ವಿಷವು ನಿನ್ನಿಂದ ಹೇಗೆ ಕಾಣಲ್ಪಟ್ಟಿತು?

ಏನೆಂದು ಕೈಯಿಂದ ಹಿಡಿಯಲ್ಪಟ್ಟಿತು? ಮಾಗಿದ ನೇರಳೆಹಣ್ಣೆಂದೊ? ಸಿದ್ಧರ ಗುಳಿಗೆ ಎಂದು ನಾಲಗೆಯ ಮೇಲೆ ಇಡಲ್ಪಟ್ಟಿತೆ? ಅಲಂಕಾರವಾದ ನೀಲದ ರತ್ನವೆಂದು ಕಂಠಪ್ರದೇಶದಲ್ಲಿ ಧರಿಸಲ್ಪಟ್ಟಿತೊ? ಹೇಳು.

## ವಿವರಣೆ

ಶಿವನ ಪಾಲಿಗೆ ಆ ವಿಷವು ಹಾಲಾಹಲವಾಗಿ ಕಾಣಲೇ ಇಲ್ಲ; ಅದನ್ನು ಹಿಡಿಯುವದಕ್ಕೆ ಆತನು ಸ್ವಲ್ಪವೂ ಹಿಂಜರಿಯಲಿಲ್ಲ. ಮಾಗಿದ ಕರಿನೇರಳೆಯ ಹಣ್ಣನ್ನು ಕೈಯಲ್ಲಿಟ್ಟುಕೊಳ್ಳುವಂತೆ ಲೀಲೆಯಿಂದ ಅದನ್ನು ಅಂಗೈಯಲ್ಲಿಟ್ಟುಕೊಂಡನು. ಸಿದ್ಧರು ನಾಲಗೆಯಲ್ಲಿ ಕೆಲವು ಗುಳಿಗೆಗಳನ್ನು ಇಟ್ಟುಕೊಂಡು ಆಕಾಶಯಾನವೇ ಮುಂತಾದ ಲೀಲೆಗಳನ್ನು ಮಾಡುವಂತೆ ಅದನ್ನು ನಾಲಗೆಯ ಮೇಲೆ ಇಟ್ಟುಕೊಂಡು ಚಪ್ಪರಿಸಿದನು. ಅಲಂಕಾರಪ್ರಿಯರಾದ ರಾಜರೇ ಮುಂತಾದವರು ನೀಲರತ್ನವನ್ನು ಕೊರಳಿಗೆ ಕಟ್ಟಿಕೊಳ್ಳುವಂತೆ ಅದನ್ನು ಕಂಠದಲ್ಲಿ ಧರಿಸಿಬಿಟ್ಟನು. ಮಹಾಮಹಿಮನಾದ ಅವನಿಗೆ ಇದು ಯಾವದೂ ಕಷ್ಟದ ಕೆಲಸವಾಗಿ ಕಾಣಲಿಲ್ಲ. ಇದೆಲ್ಲ ಆತನಿಗೆ ಲೀಲೆಯೇ ಆಗಿತ್ತು!

ಮಹಾತ್ಮರಾದವರು ಲೋಕೋಪಕಾರಕ್ಕಾಗಿ ಎಂಥ ಕಷ್ಟವನ್ನಾದರೂ ಸಹಿಸುವದಕ್ಕೆ ಸಿದ್ಧರಾಗಿರುವರು. 'ಲೋಕದ ಸುಖವೇ ನನ್ನ ಸುಖ, ಲೋಕದ ದುಃಖವೇ ನನ್ನ ದುಃಖ' ಎನ್ನುತ್ತಿರುವದೇ ಅಂಥ ಉದಾರಹೃದಯರ ಭಾವ. ಪರೋಪಕಾರಕ್ಕಾಗಿ ಅವರು ಅನುಭವಿಸುವ ಕಷ್ಟವು ಅವರಿಗೆ ಕಷ್ಟವಾಗಿ ತೋರುವದೇ ಇಲ್ಲ. ಕುಟುಂಬದ ಯಜಮಾನನು ಮನೆಯವರೆಲ್ಲರೂ ನೆಮ್ಮದಿಯಾಗಿದ್ದರೆ ಸಾಕೆಂದು ಅವರ ಸೌಖ್ಯಕ್ಕಾಗಿ ಹಗಲೂ ಇರುಳೂ ದುಡಿಯುತ್ತಿರುವಲ್ಲಿ ಅವನಿಗೆ ಅದರಿಂದಾಗುವ ಕಷ್ಟವು ಒಂದಿಷ್ಟೂ ಮನಸ್ಸಿಗೆ ತಟ್ಟುವದಿಲ್ಲ, ಅಲ್ಲವೆ? ನಿತ್ಯಸಿದ್ಧಯೋಗಿಯಾಗಿ ಸಕಲಪಶುಜೀವರನ್ನೂ ಪಾಶದಿಂದ ಬಿಡುಗಡೆ ಮಾಡಿ ತನ್ನ ಸಾಯುಜ್ಯದವರೆಗಿನ ಪುರುಷಾರ್ಥವನ್ನು ನೀಡುವದರಲ್ಲಿಯೇ ನಿರತನಾಗಿರುವ, ಸರ್ವಾತ್ಮನಾದ, ಸರ್ವಲೋಕಕುಟುಂಬಿಯಾದ ಆ ಮಹಾದೇವನಿಗೆ ಲೋಕೋಪಕಾರಕಕಾರ್ಯದಲ್ಲಿ ಹಾಲಾಹಲವೂ ಅಮೃತವಾಗಿ ತೋರಿದ್ದರಲ್ಲಿ ಅಚ್ಚರಿಯೇನು?

**ನಾಲಂ ವಾ ಸಕೃದೇವ ದೇವ ಭವತಃ ಸೇವಾ ನತಿರ್ವಾ ನುತಿಃ**
**ಪೂಜಾ ವಾ ಸ್ಮರಣಂ ಕಥಾಶ್ರವಣಮಪ್ಯಾಲೋಕನಂ ಮಾದೃಶಾಮ್ ।**
**ಸ್ವಾಮಿನ್ನಸ್ಥಿರದೇವತಾನುಸರಣಾಯಾಸೇನ ಕಿಂ ಲಭ್ಯತೇ**
**ಕಾ ವಾ ಮುಕ್ತಿರಿತಃ ಕುತೋ ಭವತಿ ಚೇತ್ ಕಿಂ ಪ್ರಾರ್ಥನೀಯಂ ತದಾ ॥**

೩೩. ದೇವನೆ, ನನ್ನಂಥವರಿಗೆ ನಿನ್ನ ಸೇವೆಯಾಗಲಿ ನಮಸ್ಕಾರವಾಗಲಿ ಸ್ತೋತ್ರವಾಗಲಿ ಪೂಜೆಯಾಗಲಿ, ಸ್ಮರಣೆಯಾಗಲಿ, ಕಥಾಶ್ರವಣವಾಗಲಿ, ದರ್ಶನವಾಗಲಿ ಒಂದೇ ಸಲ ಆದರೂ ಸಾಲದೇನು? ಸ್ವಾಮಿಯೆ, ಅನಿತ್ಯರಾದ ದೇವತೆಗಳನ್ನು ಅನುಸರಿಸುವ ಆಯಾಸದಿಂದ ಏನು ಸಿಕ್ಕುತ್ತದೆ? ಈ ಸಂಸಾರವನ್ನು ಬಿಡಿಸುವ ಯಾವ ಮುಕ್ತಿ ತಾನೆ ಆದೀತು? ಒಂದುವೇಳೆ ಆದರೂ ಆಗ ಕೇಳಿಕೊಳ್ಳತಕ್ಕದ್ದೇನುತಾನೆ ಇದ್ದೀತು?

### ವಿವರಣೆ

ಶಿವನ ವಿಷಯದಲ್ಲಿ ಶ್ರವಣಾದಿಗಳನ್ನು ಒಮ್ಮೆ ಮಾಡಿದ್ದರೂ ಸಾಕು, ಆಮೇಲೆ ಮತ್ತೆಯಾವ ದೇವತೆಗಳನ್ನೂ ಶರಣುಹೊಕ್ಕು ಪಡೆದುಕೊಳ್ಳಬೇಕಾದದ್ದು ಏನೂ ಉಳಿದಿರುವದಿಲ್ಲ.

**ಕಿಂ ಬ್ರೂಮಸ್ತವ ಸಾಹಸಂ ಪಶುಪತೇ ಕಸ್ಯಾಸ್ತಿ ಶಮ್ಭೋ ಭವ-**
**ದ್ಧೈರ್ಯಂ ಚೇದೃಶಮಾತ್ಮನಃ ಸ್ಥಿತಿರಿಯಂ ಚಾನ್ಯೈಃ ಕಥಂ ಲಭ್ಯತೇ ।**
**ಭ್ರಶ್ಯದ್ದೇವಗಣಂ ತ್ರಸನ್ಮುನಿಗಣಂ ನಶ್ಯತ್ಪ್ರಪಞ್ಚಂ ಲಯಂ**
**ಪಶ್ಯನ್ನಿರ್ಭಯ ಏಕ ಏವ ವಿಹರತ್ಯಾನನ್ದಸಾನ್ದ್ರೋ ಭವಾನ್ ॥೩೪॥**

೩೪. ಪಶುಪತಿಯೆ, ನಿನ್ನ ಸಾಹಸವನ್ನು ಏನೆನ್ನೋಣ! ಶಂಭುವೆ, ಇಂಥ ನಿನ್ನ ಧೈರ್ಯವು ಯಾರಿಗೆತಾನೆ ಇದೆ? ಈ ನಿನ್ನ ಸ್ಥಿತಿಯು ಬೇರೆಯಾರಿಗೆ ಹೇಗೆತಾನೆ ದೊರಕೀತು? ಜಾರಿಬೀಳುವ ದೇವಗಣವುಳ್ಳ, ಅಂಜಿಕೊಂಡಿರುವ ಮುನಿಗಣವುಳ್ಳ, ಪ್ರಪಂಚವೇ ಲಯವಾಗುತ್ತಿರುವ ಪ್ರಲಯವನ್ನು ಕಂಡು ನಿರ್ಭಯನಾಗಿ, ನೀನೊಬ್ಬನೇ ಆನಂದಭರಿತವಾಗಿ ವಿಹರಿಸುತ್ತಿರುವೆಯಲ್ಲ!

### ವಿವರಣೆ

ಸೃಷ್ಟಿಕಾಲದಲ್ಲಾಗಲಿ ಸ್ಥಿತಿಕಾಲದಲ್ಲಾಗಲಿ ಉಲ್ಲಾಸದಿಂದ ಇರುವವರು ಬೇಕಾದಷ್ಟು ದೇವತೆಗಳೂ ಮುನಿಗಳೂ ಇರಬಹುದು. ಆದರೆ ಎಲ್ಲಾ ದೇವತೆಗಳೂ ಎಲ್ಲಾ ಋಷಿಗಳೂ ಪ್ರಪಂಚದ ಎಲ್ಲಾ ಭೇದವೂ ಅಳಿಸಿಹೋಗುವ ಪ್ರಲಯದಲ್ಲಿ ಕೂಡ ಆನಂದದಿಂದಿರಬಲ್ಲಾತನು ಶಿವನೊಬ್ಬನೇ.

**ಯೋಗಕ್ಷೇಮಧುರನ್ಧರಸ್ಯ ಸಕಲಶ್ರೇಯಃಪ್ರದೋದ್ಯೋಗಿನೋ
ದೃಷ್ಟಾದೃಷ್ಟಮತೋಪದೇಶಕೃತಿನೋ ಬಾಹ್ಯಾನ್ತರವ್ಯಾಪಿನಃ ।
ಸರ್ವಜ್ಞಸ್ಯ ದಯಾಕರಸ್ಯ ಭವತಃ ಕಿಂ ವೇದಿತವ್ಯಂ ಮಯಾ
ಶಮ್ಭೋ ತ್ವಂ ಪರಮಾನ್ತರಙ್ಗ ಇತಿ ಮೇ ಚಿತ್ತೇ ಸ್ಮರಾಮ್ಯನ್ವಹಮ್ ॥೩೫॥**

೩೫. ಶಂಭುವೆ, ಯೋಗಕ್ಷೇಮಗಳ ಭಾರವನ್ನು ವಹಿಸುವ, ಸಕಲಶ್ರೇಯಸ್ಸುಗಳನ್ನೂ ಕೊಡುವದರಲ್ಲಿಯೇ ಉದ್ಯುಕ್ತನಾಗಿರುವ, ದೃಷ್ಟವಾದ ಮತ್ತು ಅದೃಷ್ಟವಾದ ಪುರುಷಾರ್ಥೋಪಾಯದ ತಿಳಿವಳಿಕೆಯನ್ನು ಉಪದೇಶಿಸಬಲ್ಲ, ಸರ್ವಜ್ಞನಾದ ಕೃಪಾನಿಧಿಯಾದ ನಿನಗೆ ನಾನು ಹೇಳಿಕೊಳ್ಳತಕ್ಕದ್ದು ಏನಿದೆ? ನೀನು ಎಲ್ಲಕ್ಕಿಂತಲೂ ಹೆಚ್ಚಿನ ಅಂತರಂಗನು ಎಂದು ನನ್ನ ಚಿತ್ತದಲ್ಲಿ ಪ್ರತಿದಿನವೂ ಸ್ಮರಿಸುತ್ತಿರುವೆನು.

## ವಿವರಣೆ

ಪರಮೇಶ್ವರನನ್ನು ಸ್ಮರಣೆಮಾಡುವದು ಅವನಲ್ಲಿ ನಮಗೆ ಇಂಥದ್ದು ಬೇಕೆಂದು ದೂರಿಕೊಳ್ಳುವದಾಗಲಿ, ಆಮೇಲೆ ಆತನು ಪ್ರಸನ್ನನಾಗಿ ನಮ್ಮ ಕುಂದುಕೊರತೆಗಳನ್ನು ಸರಿಪಡಿಸಿಕೊಡುವದೆಂಬುದಾಗಲಿ ಯಾವದೂ ಇರುವದಿಲ್ಲ. ಏಕೆಂದರೆ ಆತನು ಸರ್ವಜ್ಞನಾಗಿರುತ್ತಾನೆ. ನಾವು ಹೇಳಿಕೊಂಡಮೇಲೆಯೇ ತಿಳಿಯಬೇಕಾಗಿ ಉಳಿದಿರುವದು ಯಾವದೊಂದೂ ಇರುವದಿಲ್ಲ. ಅವನು ದಯಾನಿಧಿಯು. ಕರುಣೆಯಿಲ್ಲದವರಲ್ಲಿ ಮೊರೆಯಿಟ್ಟುಕೊಂಡು ಅವರ ಹೃದಯವನ್ನು ಕರಗಿಸಿ ನಮ್ಮ ಕೆಲಸವನ್ನು ಮಾಡಿಕೊಳ್ಳಬೇಕಾದದ್ದಿರುವಂತೆ ಇಲ್ಲಿ ಏನೂ ಇರುವದಿಲ್ಲ. ಆ ಮಹಾದೇವನು ಸಕಲಜೀವರ, ಅದರಲ್ಲಿಯೂ ಅವನನ್ನು ಶರಣುಹೊಕ್ಕವರ ಯೋಗಕ್ಷೇಮವನ್ನು ನೋಡಿಕೊಳ್ಳುವ ಹೊಣೆಯನ್ನು ಹೊತ್ತಿರುತ್ತಾನೆ. ಪಾರತ್ರಿಕ ಶ್ರೇಯಸ್ಸುಗಳನ್ನು ಕೊಡುವದರಲ್ಲೂ ಸತತೋದ್ಯುಕ್ತನಾಗಿರುತ್ತಾನೆ. ನಮಗೆ ಐಹಿಕಾಮುಷ್ಮಿಕಪುರುಷಾರ್ಥಗಳು ದೊರಕುವ ಉಪಾಯಗಳು ತಿಳಿಯದೆ ಇದ್ದರೆ ಅವನ್ನು ತಿಳಿಸಿಕೊಡುವದರಲ್ಲಿ ಆತನಂಥ ಉತ್ತಮ ಗುರುವು ಮತ್ತೆ ಯಾರೂ ಇರುವದಿಲ್ಲ. ಇಷ್ಟೆಲ್ಲ ಗುಣಗಳಿದ್ದರೂ ಆತನು ಎಲ್ಲಿಯೋ ದೂರದಲ್ಲಿದ್ದಿದ್ದರೆ ಅವನನ್ನು ಹುಡುಕಿಕೊಂಡು ಹೋಗಬೇಕಾಗುತ್ತಿತ್ತು; ಹಾಗೂ ಇಲ್ಲ, ನಮ್ಮ ಒಳಗೂ ಹೊರಗೂ ವ್ಯಾಪಿಸಿಕೊಂಡಿರುವವನಾತನು. ಇಂಥ ಪರಮಾತ್ಮನಲ್ಲಿ ನಾವು ಹೇಳಿಕೊಂಡು, ಪಡೆದುಕೊಳ್ಳಬೇಕಾದ ಪುರುಷಾರ್ಥವು ಯಾವದುತಾನೆ ಇದೆ?

ಹಾಗಾದರೆ ಆತನನ್ನು ಸ್ಮರಿಸಬೇಕಾದದ್ದಾದರೂ ಏತಕ್ಕೆ? ಎಂದರೆ ಆತನು ನಮ್ಮೆಲ್ಲರ

ಸರ್ವಾಂತರಾತ್ಮನು. ನಾವು ಅರಿತೋ ಅರಿಯದೆಯೋ ಪ್ರೀತಿಮಾಡುತ್ತಿರುವದು ಆತನನ್ನೇ. ಆತನ ಸ್ಮರಣೆಯಿಂದ ಸಿಕ್ಕುವ ಆನಂದವು ಮತ್ತೇತರಿಂದಲೂ ದೊರೆಯಲಾರದು. ಆದ್ದರಿಂದ ಆತನ ಸಂತತವಾದ ಸ್ಮರಣೆಯನ್ನು ಮಾಡುತ್ತಿರುವದೇ ನಮ್ಮ ಬಾಳುವೆಗೆ ಆನಂದಸಾಧನವು.

**ಭಕ್ತೋ ಭಕ್ತಿಗುಣಾವೃತೇ ಮುದಮೃತಾಪೂರ್ಣೇ ಪ್ರಸನ್ನೇ ಮನಃ**
**ಕುಮ್ಭೇ ಸಾಮ್ಬತವಾಙ್ಘ್ರಿಪಲ್ಲವಯುಗಂ ಸಂಸ್ಥಾಪ್ಯ ಸಂವಿತ್ಫಲಮ್ ।**
**ಸತ್ವಂ ಮನ್ತ್ರಮುದೀರಯನ್ ನಿಜಶರೀರಾಗಾರಶುದ್ಧಿಂ ವಹನ್**
**ಪುಣ್ಯಾಹಂ ಪ್ರಕಟೀಕರೋಮಿ ರುಚಿರಂ ಕಲ್ಯಾಣಮಾಪಾದಯನ್ ॥೩೬॥**

೩೬. ಸಾಂಬನೆ, ಭಕ್ತನಾದ ನಾನು ಭಕ್ತಿಗುಣಾವೃತವಾಗಿ ಸಂತೋಷವೆಂಬ ಅಮೃತದಿಂದ ಪೂರ್ಣವಾಗಿರುವ ಪ್ರಸನ್ನವಾದ ಮನಸ್ಸೆಂಬ ಕಲಶದಲ್ಲಿ, ನಿನ್ನ ಪಾದಗಳೆಂಬ ಚಿಗುರುಗಳ ಜೊತೆಯನ್ನೂ ಜ್ಞಾನವೆಂಬ ಫಲವನ್ನೂ ಇರಿಸಿ ಸತ್ತ್ವಮಯವಾದ ಮಂತ್ರವನ್ನು ಉಚ್ಚರಿಸುತ್ತಾ ನನ್ನ ಶರೀರವೆಂಬ ಮನೆಯ ಶುದ್ಧಿಯನ್ನು ಮಾಡಿಕೊಳ್ಳುತ್ತಾ ಮನೋಜ್ಞವಾದ ಕಲ್ಯಾಣವನ್ನುಂಟುಮಾಡಿ ಕೊಂಡು ಪುಣ್ಯಾಹವನ್ನು ಪ್ರಕಟಮಾಡುತ್ತಿದ್ದೇನೆ.

## ವಿವರಣೆ

ಮನೆಗೆ ಶುದ್ಧಿಯನ್ನು ಮಾಡಿಕೊಳ್ಳುವದಕ್ಕೆಂದು, ಆಚಾರವಂತರು ಒಂದು ಕಲಶಕ್ಕೆ ದಾರವನ್ನು ಸುತ್ತಿ ಅದರಲ್ಲಿ ಸ್ವಚ್ಛವಾದ ನೀರನ್ನು ತುಂಬಿ, ಮಾವಿನ ಚಿಗುರೆಲೆಯೇ ಮುಂತಾದವುಗಳನ್ನು ಹಾಕಿ ಮೇಲುಗಡೆ ತೆಂಗಿನಕಾಯಿಯನ್ನಿಟ್ಟು ಮಂತ್ರವನ್ನುಚ್ಚರಿಸಿ ಆ ಮಂತ್ರಪೂತವಾದ ಜಲವನ್ನು ಮನೆಯಲ್ಲಿ ಚಿಮುಕಿಸುತ್ತಾರೆ. ಅದರಿಂದ ಅವರಿಗೆ ಮಂಗಲವಾಗುತ್ತದೆ.

ಇದರಂತೆ ಭಕ್ತನಾದವನು ತನ್ನ ಮನಸ್ಸನ್ನೇ ಕಲಶವಾಗಿ ಮಾಡಿಕೊಂಡು ಆನಂದಾಮೃತವನ್ನು ಅದರಲ್ಲಿ ತುಂಬಿಕೊಂಡು ಪರಮೇಶ್ವರನ ಪಾದಯುಗಲವೆಂಬ ಚಿಗುರುಗಳನ್ನು ಅದರೊಳಗೆ ಇಟ್ಟು ಆ ಸ್ಮರಣೆಯ ಫಲವಾಗಿ ಬಂದ ಜ್ಞಾನವನ್ನೇ ಫಲವನ್ನಾಗಿ ಮಾಡಿಕೊಂಡು ಸಾತ್ತ್ವಿಕವಾದ ಪರಮೇಶ್ವರನ ನಾಮಜಪ, ಸ್ತೋತ್ರ-ಮುಂತಾದವುಗಳನ್ನು ಉಚ್ಚರಿಸುತ್ತಾ ತಮ್ಮ ದೇಹವೆಂಬ ಮನೆಯನ್ನೆಲ್ಲ ಪವಿತ್ರಗೊಳಿಸಿ ಕೊಳ್ಳುತ್ತಾರೆ. ಈ ಕರ್ಮಕ್ಕೆ ಪುಣ್ಯಾಹವೆಂದು ಹೆಸರು.

ಶರೀರವೆಂಬುದು ಅಶುಚಿ, ಅನಿತ್ಯ, ದುಃಖ; ಆದರೆ ಅದರೊಳಗಿರುವ ಮನಸ್ಸಿನಲ್ಲಿ ಪರಮೇಶ್ವರನ ಸ್ಮರಣೆಯನ್ನು ತಂದುಕೊಂಡರೆ ಅದು ಶುಚಿಯಾಗುವದು. ಅಮೃತವಾಗಿ ಆತ್ಮಮಯವಾಗುವದು, ಪರಮಾನಂದಸ್ವರೂಪವೇ ಆಗಿ ಭಕ್ತನಿಗೆ ತೋರುವದು-ಎಂದು ಭಾವ.

**ಆಮ್ನಾಯಾಮ್ಬುಧಿಮಾದರೇಣ ಸುಮನಸ್ಸಙ್ಘಾಃ ಸಮುದ್ಯನ್ಮನೋ**
**ಮನ್ಥಾನಂ ದೃಢಭಕ್ತಿರಜ್ಜು ಸಹಿತಂ ಕೃತ್ವಾ ಮಥಿತ್ವಾ ತತಃ ।**
**ಸೋಮಂ ಕಲ್ಪತರುಂ ಸುಪರ್ವಸುರಭಿಂ ಚಿನ್ತಾಮಣಿಂ ಧೀಮತಾಂ**
**ನಿತ್ಯಾನನ್ದಸುಧಾಂ ನಿರನ್ತರರಮಾಸೌಭಾಗ್ಯಮಾತನ್ವತೇ ॥೩೭॥**

೩೭. ಸುಮನಸರಾದವರ ಸಂಘಗಳು, ವೇದವೆಂಬ ಸಮುದ್ರವನ್ನು ದೃಢಭಕ್ತಿ ಎಂಬ ಹಗ್ಗದಿಂದ ಕಟ್ಟಿದ ಉದ್ಯುಕ್ತವಾದ ಮನಸ್ಸನ್ನು ಕಡೆಗೋಲನ್ನಾಗಿ ಮಾಡಿಕೊಂಡು ಅದರದಿಂದ ಕಡೆದು ಕಲ್ಪವೃಕ್ಷವೂ ದೇವತೆಗಳ ಕಾಮಧೇನುವೂ ಜ್ಞಾನಿಗಳ ಚಿಂತಾಮಣಿಯೂ ನಿತ್ಯಾನಂದವೆಂಬ ಅಮೃತವೂ ನಿರಂತರ ಲಕ್ಷ್ಮೀಸೌಭಾಗ್ಯವೂ ಆಗಿರುವ ಸೋಮನಾದ ನಿನ್ನನ್ನು ಪಡೆದುಕೊಳ್ಳುತ್ತಾರೆ.

## ವಿವರಣೆ

ಈ ಶ್ಲೋಕದಲ್ಲಿ ಸಮುದ್ರಮಥನದ ವೃತ್ತಾಂತವನ್ನೊಳಗೊಂಡ ರೂಪಕವಿದೆ. ಮಂದರಪರ್ವತವೆಂಬ ಕಡೆಗೋಲಿಗೆ ವಾಸುಕಿ ಎಂಬ ಹಗ್ಗವನ್ನು ಕಟ್ಟಿ ಕ್ಷೀರಸಮುದ್ರವನ್ನು ಕಡೆದದ್ದರಿಂದ ಪೂರ್ವದಲ್ಲಿ ಸುಮನಸರು (ದೇವತೆಗಳು) ಸೋಮ (ಚಂದ್ರ), ಕಲ್ಪವೃಕ್ಷ, ಕಾಮಧೇನು, ಚಿಂತಾಮಣಿ, ಅಮೃತ, ಲಕ್ಷ್ಮೀ ಇಂಥ ದಿವ್ಯವಸ್ತುಗಳನ್ನು ಪಡೆದುಕೊಂಡರೆಂದು ಪುರಾಣದಲ್ಲಿದೆಯಷ್ಟೆ? ಹಾಗೆಯೇ ಈಗ ಸುಮನಸರಾದ ವಿದ್ವಾಂಸರು ವೇದವೆಂಬ ಸಮುದ್ರವನ್ನು ಭಕ್ತಿಯೆಂಬ ಹಗ್ಗವನ್ನು ಕಟ್ಟಿದ ಮನಸ್ಸೆಂಬ ಕಡೆಗೋಲಿನಿಂದ ಕಡೆದದ್ದರಿಂದ ಈಗ ಕಲ್ಪತರುವಿನಂತೆಯೂ ಕಾಮಧೇನುವಿನಂತೆಯೂ ಚಿಂತಾಮಣಿಯಂತೆಯೂ ಇಷ್ಟಾರ್ಥಗಳನ್ನು ನಿರಾಯಾಸವಾಗಿ ಕೊಡುವವನಾಗಿಯೂ, ಜ್ಞಾನಾನಂದಾಮೃತರಸವನ್ನೂ ನಿತ್ಯವಾದ ಮೋಕ್ಷಲಕ್ಷ್ಮಿಯನ್ನೂ ಕೊಡುವವನಾಗಿಯೂ ಇರುವ ಸೋಮನನ್ನು, (= ಉಮಾದೇವಿಸಹಿತನಾದ) ಪರಮೇಶ್ವರನನ್ನು, ಕಂಡುಕೊಳ್ಳುತ್ತಾರೆ. ಕ್ಷೀರ ಸಮುದ್ರಕ್ಕೆ ಸಾರವು ಹೇಗೆ ಅಮೃತಾದಿವಸ್ತುಗಳೋ ಹಾಗೆ ವೇದಕ್ಕೆಲ್ಲ ಸಾರವಾಗಿರುವದು ಮೋಕ್ಷಪ್ರದನಾದ ಪರಮೇಶ್ವರನ ತತ್ತ್ವವು ಎಂದರ್ಥ.

ಪ್ರಾಕ್ಪುಣ್ಯಾಚಲಮಾರ್ಗದರ್ಶಿತಸುಧಾಮೂರ್ತಿಃ ಪ್ರಸನ್ನಃ ಶಿವಃ
ಸೋಮಃ ಸದ್ಗಣಸೇವಿತೋ ಮೃಗಧರಃ ಪೂರ್ಣಸ್ತಮೋಮೋಚಕಃ ।
ಚೇತಃಪುಷ್ಕರಲಕ್ಷಿತೋ ಭವತಿ ಚೇದಾನನ್ದಪಾಥೋನಿಧಿಃ
ಪ್ರಾಗಲ್ಭ್ಯೇನ ವಿಜೃಮ್ಭತೇ ಸುಮನಸಾಂ ವೃತ್ತಿಸ್ತದಾ ಜಾಯತೇ ॥೩೮॥

೩೮. ಪೂರ್ವಪುಣ್ಯವೆಂಬ ಪರ್ವತದ ಮಾರ್ಗದಿಂದ ತೋರಿಸಲ್ಪಟ್ಟ ಅಮೃತಮೂರ್ತಿಯೂ ಪ್ರಸನ್ನನೂ ಸದ್ಗಣಗಳಿಂದ ಸೇವಿಸಲ್ಪಟ್ಟವನೂ ಮೃಗಧರನೂ ಪೂರ್ಣನೂ ತಮಸ್ಸನ್ನು ಬಿಡುಗಡೆಮಾಡಿಸುವವನೂ ಆದ ಶಿವನೆಂಬ ಸೋಮನು ಚಿತ್ತವೆಂಬ ಆಕಾಶದಲ್ಲಿ ಕಂಡು ಬಂದರೆ ಆನಂದಸಮುದ್ರವು ಉಬ್ಬಿ ವೃದ್ಧಿಯನ್ನು ಹೊಂದುತ್ತದೆ, ಆಗ ಸುಮನಸರ ವೃತ್ತಿಯೂ ಉಂಟಾಗುತ್ತದೆ.

## ವಿವರಣೆ

ಪೂರ್ವಾಚಲದ ಮೇಲುಗಡೆಯಲ್ಲಿ ಅಮೃತಮೂರ್ತಿಯೂ ನಿರ್ಮಲನೂ ಮಂಗಲಕರನೂ ಆದ ಚಂದ್ರನು ಥಳಗುಟ್ಟುವ ನಕ್ಷತ್ರಗಳೊಡನೆ ತನ್ನಲ್ಲಿ ಮೃಗದ ಗುರುತನ್ನು ತೋರಿಸುತ್ತಾ ಕತ್ತಲೆಯನ್ನು ನೀಗುತ್ತಾ ಆಕಾಶದಲ್ಲಿ ಕಂಡುಬಂದರೆ ಸಮುದ್ರವು ಉಕ್ಕುತ್ತದೆ, ಹೂಗಳು ಅರಳುವದಕ್ಕೂ ಕಾರಣವಾಗುತ್ತದೆ ಅಲ್ಲವೆ? ಇದರಂತೆ ಪೂರ್ವಜನ್ಮಸಂಚಿತವಾದ ಪುಣ್ಯದಿಂದ ಶಿವನು ಕಾಣಬರುತ್ತಾನೆ. ಅವನು ಅಮೃತದ ಮೂರ್ತಿಯೇ ಆಗಿರುತ್ತಾನೆ, ಶಿವನೂ (ಮಂಗಲಕರನೂ), ಸೋಮನೂ (ಉಮಾಸಹಿತನೂ) ಆಗಿರುತ್ತಾನೆ. ಪ್ರಮಥಗಣಗಳಿಂದೊಡಗೂಡಿರುತ್ತಾನೆ. ಮೃಗವನ್ನು ಕೈಯಲ್ಲಿ ಧರಿಸಿರುತ್ತಾನೆ, ಅಂಧಕಾಸುರನ ಕಾಟದಿಂದ ತಪ್ಪಿಸುವ ಆತನು ಚಿತ್ತಾಕಾಶದಲ್ಲಿ ಕಂಡುಬಂದನೆಂದರೆ ಭಕ್ತರ ಆನಂದವು ಉಕ್ಕುತ್ತದೆ. ದೈವೀವೃತ್ತಿಯು ಮನಸ್ಸಿನಲ್ಲಿ ಸಹಜವಾಗಿ ಉಂಟಾಗುತ್ತದೆ.

ಈ ಶ್ಲೋಕದಲ್ಲಿ ಚಂದ್ರನ ದರ್ಶನದಿಂದ ಜನರಿಗೆ ಆನಂದವಾಗುವಂತೆ ಶಿವಸಾಕ್ಷಾತ್ಕಾರದಿಂದ ಹೆಚ್ಚಿನ ಆನಂದವಾಗುವದು ಎಂದು ಶ್ಲೇಷೆಯಿಂದಲೂ ರೂಪಕದಿಂದಲೂ ತಿಳಿಸಿರುತ್ತದೆ.

ಧರ್ಮೋ ಮೇ ಚತುರಙ್ಘ್ರಿಕಃ ಸುಚರಿತಸ್ಪಾಪಂ ವಿನಾಶಂ ಗತಂ
ಕಾಮಕ್ರೋಧಮದಾದಯೋ ವಿಗಲಿತಾಃ ಕಾಲಃ ಸುಖಾವಿಷ್ಕೃತಃ ।
ಜ್ಞಾನಾನನ್ದಮಹೌಷಧಿಃ ಸುಫಲಿತಾ ಕೈವಲ್ಯನಾಥೇ ಸದಾ
ಮಾನ್ಯೇ ಮಾನಸಪುಣ್ಡರೀಕನಗರೇ ರಾಜಾವತಂಸೇ ಸ್ಥಿತೇ ॥೩೯॥

೩೯. ಕೈವಲ್ಯಕ್ಕೆ ಒಡೆಯನಾಗಿ, ಪೂಜ್ಯನಾಗಿರುವ ರಾಜಾವತಂಸನು (ರಾಜಶ್ರೇಷ್ಠನಂತಿರುವ ಚಂದ್ರಶಿರೋಭೂಷಣನಾದ ಶಿವನು) ನನ್ನ ಹೃದಯಕಮಲವೆಂಬ ನಗರದಲ್ಲಿ ಯಾವಾಗಲೂ ನೆಲೆಗೊಂಡಿರುವಲ್ಲಿ ನನ್ನ ಧರ್ಮವು ನಾಲ್ಕು ಪಾದಗಳಿಂದಲೂ ಕೂಡಿ ಸರಿಯಾಗಿ ಅನುಷ್ಠಿತವಾಯಿತು; ತಾಪವು ನಾಶವಾಯಿತು, ಕಾಮ, ಕ್ರೋಧ, ಮದ ಮುಂತಾದವುಗಳು ಜಾರಿಹೋದವು; ಕಾಲವು ಸುಖದಿಂದ ಕಾಣಿಸಿಕೊಳ್ಳುತ್ತಿದೆ. ಜ್ಞಾನಾನಂದವೆಂಬ ಮಹಾಸಸ್ಯವು ಚೆನ್ನಾಗಿ ಫಲಿಸಿದೆ.

### ವಿವರಣೆ

ರಾಜಶ್ರೇಷ್ಠನೊಬ್ಬನು ರಾಜ್ಯವನ್ನು ಉತ್ತಮರೀತಿಯಿಂದ ಆಳುತ್ತಾ ರಾಜಧಾನಿಯಲ್ಲಿ ಇದ್ದುಕೊಂಡಿದ್ದರೆ, ಪ್ರಜೆಗಳು ಸ್ವಲ್ಪವೂ ಲೋಪವಿಲ್ಲದಂತೆ ಪುಣ್ಯಕರ್ಮಗಳನ್ನು ಆಚರಿಸುತ್ತಿರುವರು. ಅವರಿಗೆ ತಾಪತ್ರಯಗಳ ಬಾಧೆ ಇರುವದಿಲ್ಲ, ಶತ್ರುಗಳ ಕಾಟವಿರುವದಿಲ್ಲ, ಯಾವಾಗಲೂ ಸುಖಕಾಲವೇ ಕಾಣಿಸಿಕೊಳ್ಳುತ್ತಿರವದು, ಪೈರುಪಚ್ಚೆಗಳು ಸಮೃದ್ಧವಾಗಿ ಫಲಿಸುವವು.

ಹೀಗೆಯೇ ಪರಮೇಶ್ವರನು ನಮ್ಮ ಹೃದಯದಲ್ಲಿ ನೆಲಸಿಬಿಟ್ಟರೆ, ಎಲ್ಲಾ ಧರ್ಮವನ್ನೂ ಮಾಡಿದ ಫಲವು ದೊರಕಿದಂತೆ ಆಯಿತು; ಸಂಸಾರತಾಪದ ಕಾಟವು ತಪ್ಪಿ ಹೋಗುವದು; ಮನಸ್ಸನ್ನು ಗೋಳಾಡಿಸುತ್ತಿದ್ದ ಕಾಮಕ್ರೋಧಾದಿಗಳ ಉಪಟಳವು ಹಾರಿಹೋಗುವದು. ನಿತ್ಯವೂ ಸುಖಕಾಲವೇ ಆಗಿರುವದು. ಜ್ಞಾನಾನಂದವು ಲಭಿಸುವದು.

**ಧೀಯನ್ತ್ರೇಣ ವಚೋಘಟೇನ ಕವಿತಾಕುಲ್ಯೋಪಕುಲ್ಯಾಕ್ರಮೈ-**
**ರಾನೀತೈಶ್ಚ ಸದಾಶಿವಸ್ಯ ಚರಿತಾಮ್ಭೋರಾಶಿದಿವ್ಯಾಮೃತೈಃ ।**
**ಹೃತ್ಕೇದಾರಯುತಾಶ್ಚ ಭಕ್ತಿಕಲಮಾಃ ಸಾಫಲ್ಯಮಾತನ್ವತೇ**
**ದುರ್ಭಿಕ್ಷಾನ್ಮಮ ಸೇವಕಸ್ಯ ಭಗವನ್ ವಿಶ್ವೇಶ ಭೀತಿಃ ಕುತಃ ॥೪೦॥**

೪೦. ಭಗವಂತನೆ, ವಿಶ್ವೇಶನೆ, ವಾಕ್ಕೆಂಬ ಗಡಿಗೆಯಿಂದ ಬುದ್ಧಿಯೆಂಬ ಯಂತ್ರದ ಮೂಲಕ ಎತ್ತಿ ಕವಿತೆಯೆಂಬ ದೊಡ್ಡ ಚಿಕ್ಕಕಾಲುವೆಗಳ ಮಾರ್ಗಗಳಿಂದ ತಂದ ಸದಾಶಿವಚರಿತ್ರೆ ಎಂಬ ಜಲರಾಶಿಯ ದಿವ್ಯೋದಕಗಳಿಂದ, ಹೃದಯವೆಂಬ ಗದ್ದೆಯಲ್ಲಿ ನಾಟಿದ ಭಕ್ತಿಯ ಭತ್ತದ ಪೈರುಗಳು ಸಾಫಲ್ಯವನ್ನು ಹೊಂದುತ್ತಿವೆ. ನಿನ್ನ ಸೇವಕನಾದ ನನಗೆ ದುರ್ಭಿಕ್ಷದ ಅಂಜಿಕೆ ಏತಕ್ಕೆ?

## ವಿವರಣೆ

ಶಿವಭಕ್ತಿ ಎಂಬ ಪೈರನ್ನು ಬೆಳೆಯಿಸುವದಕ್ಕೆ ಹೃದಯವೆಂಬ ಗದ್ದೆಯಿದೆ, ಹಾಯಿಸುವದಕ್ಕೆ ಶಿವಚರಿತ್ರೆ ಎಂಬ ನೀರಿದೆ; ಆ ನೀರನ್ನು ಅಲ್ಲಿಗೆ ತರುವದಕ್ಕೆ ಕವಿತ್ವವೆಂಬ ಹೆಗ್ಗಾಲುವೆಯೂ ಕಿರುಗಾಲುವೆಗಳೂ ಇವೆ. ನೀರನ್ನು ಎತ್ತುವದಕ್ಕೆ ಬುದ್ಧಿ ಎಂಬ ಏತವಿದೆ; ನೀರುತಿಂಬಿಕೊಳ್ಳುವದಕ್ಕೆ ವಾಕ್ಕೆಂಬ ಹರವಿ ಅಥವಾ ಬಾನೆ ಇದೆ. ಹೀಗಿರುವಲ್ಲಿ ಭಕ್ತಿಯ ಪೈರು ಏತಕ್ಕೆ ಫಲಿಸದೆ ಇರುತ್ತದೆ? ಬರಗಾಲದ ಅಂಜಿಕೆ ಎಲ್ಲಿಂದ ಬಂದೀತು?- ಎಂದು ಕವಿಯು ಬೇಸಾಯಗಾರನು ಭತ್ತವನ್ನು ಬೆಳೆಯುವದಕ್ಕೆ ಬಳಸುವ ಉಪಕರಣಗಳ ರೂಪಕ ದಿಂದ ಭಕ್ತಿಯ ಸಾಧನಗಳನ್ನು ಇಲ್ಲಿ ವಿವರಿಸಿರುತ್ತಾನೆ. ಭಕ್ತಿಯಿದ್ದವರ ಯೋಗಕ್ಷೇಮವನ್ನು ಭಗವಂತನು ಅವಶ್ಯವಾಗಿ ನೋಡಿಕೊಳ್ಳುತ್ತಾನೆ ಎಂಬುದು ತಾತ್ಪರ್ಯ.

**ಪಾಪೋತ್ಪಾತವಿಮೋಚನಾಯ ರುಚಿರೈಶ್ವರ್ಯಾಯ ಮೃತ್ಯುಞ್ಜಯ**
**ಸ್ತೋತ್ರಧ್ಯಾನನತಿಪ್ರದಕ್ಷಿಣಸಪರ್ಯಾಲೋಕನಾಕರ್ಣನೇ ।**
**ಜಿಹ್ವಾಚಿತ್ತಶಿರೋಙ್ಘ್ರಿಹಸ್ತನಯನಶ್ರೋತ್ರೈರಹಂ ಪ್ರಾರ್ಥಿತೋ**
**ಮಾಮಾಜ್ಞಾಪಯ ತನ್ನಿರೂಪಯ ಮುಹುರ್ಮಾಮೇವ ಮಾ ಮೇಽವಚಃ ॥**

೪೧. ಮೃತ್ಯಂಜಯನೆ, ಪಾಪಗಳೆಂಬ ಉತ್ಪಾತಗಳ ಪರಿಹಾರಕ್ಕಾಗಿಯೂ ಉತ್ತಮವಾದ ಐಶ್ವರ್ಯಕ್ಕಾಗಿಯೂ, ಸ್ತೋತ್ರ, ಧ್ಯಾನ, ನಮಸ್ಕಾರ, ಪ್ರದಕ್ಷಿಣೆ, ಪೂಜೆ, ಮೂರ್ತಿಯ ದರ್ಶನ, ಲೀಲೆಯ ಶ್ರವಣ- ಇವುಗಳನ್ನು ಮಾಡಬೇಕೆಂದು ನಾಲಗೆ, ಮನಸ್ಸು, ತಲೆ, ಕಾಲುಗಳು, ಕೈಗಳು, ಕಣ್ಣುಗಳು, ಕಿವಿಗಳು- ಇವುಗಳು ನನ್ನನ್ನು ಪ್ರಾರ್ಥನೆಮಾಡಿರುತ್ತವೆ, ನನಗೆ ಅಪ್ಪಣೆಮಾಡು, ಮತ್ತೆ ಮತ್ತೆ ಅದನ್ನು ಪರೀಕ್ಷಿಸಿ ನೋಡುತ್ತಿರು, ನನ್ನನ್ನೇ ನನ್ನ ಮೂಕತ್ವವು ಕಟ್ಟು ಮಾಡದಿರಲಿ!

## ವಿವರಣೆ

ನಾಲಗೆಯು ಸ್ತೋತ್ರ ಮಾಡುವದಕ್ಕೂ ಮನಸ್ಸು ಧ್ಯಾನಿಸುವದಕ್ಕೂ ತಲೆಯು ನಮಸ್ಕರಿಸುವದಕ್ಕೂ ಕಾಲುಗಳು ಪ್ರದಕ್ಷಿಣೆಮಾಡುವದಕ್ಕೂ ಕೈಗಳು ಪೂಜಿಸುವದಕ್ಕೂ ಕಣ್ಣುಗಳು ಮೂರ್ತಿಯನ್ನು ನೋಡುವುದಕ್ಕೂ ಕಿವಿಗಳು ಶಿವಚರಿತ್ರೆಯನ್ನು ಕೇಳುವದಕ್ಕೂ ಅನುಕೂಲಿಸಬೇಕಾದರೆ ಸಾಧಕನ ಪ್ರಯತ್ನಗಳು ಸಾಕಾಗಲಾರದು. ಈಶ್ವರನ ಪ್ರೇರಣೆಯೂ ಪ್ರೋತ್ಸಾಹವೂ ಅವಶ್ಯ. ಇಲ್ಲದಿದ್ದರೆ ಈ ಸತ್ಕಾರ್ಯದಲ್ಲಿ

ಪ್ರವರ್ತಿಸಿದರೂ ಆ ಇಂದ್ರಿಯಗಳು ನಡುವೆ ತಟ್ಟನೆ ಸುಮ್ಮನಾಗಿಬಿಡಬಹುದು, ಅಥವಾ ಬೇರೊಂದು ಕಡೆಗೆ ತಿರುಗಲೂಬಹುದು.

ಪರಮೇಶ್ವರನ ಅನುಗ್ರಹದಿಂದಲೇ ಆತನ ಸೇವೆಯು ನಿರ್ವಿಘ್ನವಾಗಿ ನಡೆಯಬೇಕು. ಆದರಿಂದ ಪಾಪಗಳ ಪರಿಹಾರವಾಗುವದು, ಉತ್ತಮವಾದ ಐಶ್ವರ್ಯಪ್ರಾಪ್ತಿಯೂ ಆಗುವದು.

**ಗಾಮ್ಭೀರ್ಯಂ ಪರಿಖಾಪದಂ ಘನಧೃತಿಃ ಪ್ರಾಕಾರಉದ್ಯದ್ಗುಣ-**
**ಸ್ತೋಮಶ್ಚಾಪ್ತಬಲಂಘನೇನ್ದ್ರಿಯಚಯೋ ದ್ವಾರಾಣಿ ದೇಹೇ ಸ್ಥಿತಃ ।**
**ವಿದ್ಯಾ ವಸ್ತು ಸಮೃದ್ಧಿರಿತ್ಯಖಿಲಸಾಮಗ್ರೀಸಮೇತೇ ಸದಾ**
**ದುರ್ಗಾತಿಪ್ರಿಯದೇವ, ಮಾಮಕಮನೋದುರ್ಗೇ ನಿವಾಸಂ ಕುರು ॥೪೨॥**

೪೨. ದುರ್ಗಾದೇವಿಗೆ ಅತಿಪ್ರಿಯನಾದ ದೇವನೆ, ಗಾಂಭೀರ್ಯವೆಂಬ ಅಗಳ್ತೆ, ಅಭೇದ್ಯವಾದ ಧೈರ್ಯವೆಂಬ ಪೌಳಿಯಗೋಡೆ, ಬೆಳೆಯುತ್ತಿರುವ ಗುಣಗಳ ಸಮೂಹವೆಂಬ ಆಪ್ತರಾದವರ ಸೈನ್ಯವು, ಶ್ರೇಷ್ಠವಾದ ಇಂದ್ರಿಯ ಗಳೆಂಬ ಬಾಗಿಲುಗಳು, ವಿದ್ಯೆಯೆಂಬ ಪದಾರ್ಥಗಳ ದಾಸ್ತಾನು- ಹೀಗೆ ಎಲ್ಲಾ ಸಾಮಗ್ರಿಗಳಿಂದೊಡ ಗೂಡಿರುವ ನನ್ನ ಮನೋದುರ್ಗದಲ್ಲಿ ಯಾವಾಗಲೂ ವಾಸಮಾಡುತ್ತಿರು!

## ವಿವರಣೆ

ರಾಜರುಗಳು ಹಿಂದಕ್ಕೆ ಬಲವಾದ ಕೋಟೆ, ಭದ್ರವಾದ ಬಾಗಿಲು, ನಂಬಿಕೆಯಾದ ಸೇನಾದಳ, ಹುಲ್ಲುನೀರು, ಆಹಾರಸಾಮಗ್ರಿ- ಇವುಗಳ ಸಮೃದ್ಧಿಯು ಇರುವ ದುರ್ಗಗಳಲ್ಲಿಯೇ ವಾಸಮಾಡುತ್ತಿದ್ದರು. ಈ ದುರ್ಗವಾಸವನ್ನು ರೂಪಕವಾಗಿ ಮಾಡಿಕೊಂಡು ಕವಿಯು ಹೃದಯದಲ್ಲಿ ನಿತ್ಯವೂ ಪರಮೇಶ್ವರನ ಸಾಂನಿಧ್ಯವಿರುವದಕ್ಕೆ ಬೇಕಾದ ಸಾಧನಸಾಮಗ್ರಿಯನ್ನು ತಿಳಿಸಿರುತ್ತಾನೆ. ಶರೀರ, ಇಂದ್ರಿಯಗಳು, ಮನಸ್ಸು- ಇವು ಪರಿಶುದ್ಧವಾಗಿ ವಿಷಯಗಳಿಗೆ ಅವಕಾಶಕೊಡದಂತೆ ಪರಮೇಶ್ವರನ ಭಕ್ತಿಗೇ ಸಹಾಯಕವಾಗಿದ್ದರೆ ಅಲ್ಲಿ ಶಿವನ ಸಾಂನಿಧ್ಯವಿರುತ್ತದೆ.

**ಮಾ ಗಚ್ಛ ತ್ವಮಿತಸ್ತತೋ ಗಿರಿಶ ಭೋ ಮಯ್ಯೇವ ವಾಸಂ ಕುರು**
**ಸ್ವಾಮಿನ್ನಾದಿಕಿರಾತ, ಮಾಮಕಮನಃಕಾನ್ತಾರಸೀಮಾನ್ತರೇ ।**
**ವರ್ತನ್ತೇ ಬಹುಶೋಮೃಗಾಮದಜುಷೋ ಮಾತ್ಸರ್ಯಮೋಹಾದಯ**
**ಸ್ತಾನ್ ಹತ್ವಾ ಮೃಗಯಾವಿನೋದರುಚಿತಾಲಾಭಂ ಚ ಸಂಪ್ರಾಪ್ಸ್ಯಸಿ ॥೪೩॥**

೪೩. ಎಲೈ ಗಿರಿಯಲ್ಲಿರುವ ಶಿವನೆ, ಆದಿಕಿರಾತನೆ, ನನ್ನ ಮನಸ್ಸೆಂಬ ಕಾಡಿನ ಎಲ್ಲೆಯೊಳಗೆ ಬಹಳವಾಗಿ ಮದಿಸಿರುವ ಮಾತ್ಸರ್ಯ, ಮೋಹ- ಮುಂತಾದ ಮೃಗಗಳು ಇದ್ದು ಕೊಂಡಿವೆ. ಅವುಗಳನ್ನು ಕೊಂದು ಬೇಟೆಯ ವಿನೋದದ ಸವಿಯ ಲಾಭವನ್ನು ಹೊಂದುವೆ. ಆದ್ದರಿಂದ ಅತ್ತಿತ್ತ ಹೋಗದಿರು! ನನ್ನಲ್ಲಿಯೇ ವಾಸಮಾಡು.

### ವಿವರಣೆ

ಬೇಟೆಯಲ್ಲಿ ಅಭಿರುಚಿಯುಳ್ಳವರಾಗಿ ಬೆಟ್ಟಗಳಲ್ಲಿ ವಾಸಮಾಡಿಕೊಂಡು ಕೆಳಗೆ ಇರುವ ಕಾಡುಗಳಲ್ಲಿ ಬೇಟೆಯಾಡುವದಕ್ಕೆ ಹೋಗುವದು ವ್ಯಾಧರಿಗೆ ಸ್ವಭಾವವು; ಅರ್ಜುನನಿಗೆ ವರವನ್ನು ಕೊಡುವದಕ್ಕಾಗಿ ಅವನ ಸತ್ತ್ವಪರೀಕ್ಷೆಗೆಂದು ಕಿರಾತ ವೇಷವನ್ನು ಧರಿಸಿದ್ದ ಶಿವನನ್ನು ಬೇಡನೆಂಬ ರೂಪಕದಿಂದ ವರ್ಣಿಸಿ, ನನ್ನ ಹೃದಯದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಮೃಗಗಳನ್ನು ಕೊಂದು ಬೇಟೆಯ ವಿನೋದವನ್ನು ಪಡೆದುಕೊ- ಎಂದು ಕವಿಯು ಪ್ರಾರ್ಥಿಸುತ್ತಾನೆ.

**ಕರಲಗ್ನಮೃಗಃ ಕರೀನ್ದ್ರಭಙ್ಗೋ**
**ಘನಶಾರ್ದೂಲವಿಖಣ್ಡನೋಽಸ್ತ ಜನ್ತುಃ ।**
**ಗಿರಿಶೋ ವಿಶದಾಕೃತಿಶ್ಚ ಚೇತಃ**
**ಕುಹರೇ ಪಞ್ಚಮುಖೋಽಸ್ತಿ ಮೇ ಕುತೋ ಭೀಃ ॥೪೪॥**

೪೪. ಕೈಗೆ ಸೇರಿಕೊಂಡಿರುವ ಜಿಂಕೆಯುಳ್ಳವನೂ ಗಜಾಸುರನನ್ನು ಕೊಂದವನೂ ದೊಡ್ಡ ಹುಲಿಯನ್ನು - ಭಯಂಕರನಾದ ವ್ಯಾಘ್ರಾಸುರನನ್ನು- ಕೊಂದವನೂ ಎಲ್ಲಾ ಪ್ರಾಣಿಗಳನ್ನೂ ಲಯಗೊಳಿಸಿದವನೂ ಬೆಟ್ಟದಲ್ಲಿರು ವವನೂ ನಿರ್ಮಲಾಕಾರವುಳ್ಳವನೂ ಆದ ಪಂಚಮುಖನು ಚಿತ್ತದ ಗುಹೆಯಲ್ಲಿರುತ್ತಾನೆ. ನನಗೆಲ್ಲಿಯಭಯ?

### ವಿವರಣೆ

ಪಂಚಮುಖವೆಂಬುದು ಸಿಂಹಕ್ಕೂ ಹೆಸರು. ಐದು ಮುಖವುಳ್ಳ ಶಿವನು ಹೃದಯದಲ್ಲಿರುವದಾದರೆ ಯಾವ ಅಂಜಿಕೆಯೂ ಇಲ್ಲವೆಂದು ಸಿಂಹದ ರೂಪಕದಿಂದ ಇಲ್ಲಿ ವರ್ಣಿಸಿದೆ.

ಛನ್ದಶ್ಶಾಖಿಶಿಖಾನ್ವಿತೈರ್ದ್ವಿಜವರೈಃ ಸಂಸೇವಿತೇ ಶಾಶ್ವತೇ
ಸೌಖ್ಯಾಪಾದಿನಿ ಖೇದಭೇದಿನಿ ಸುಧಾಸಾರೈಃ ಫಲೈರ್ದೀಪಿತೇ ।
ಚೇತಃಪಕ್ಷಿಶಿಖಾಮಣೇ ತ್ಯಜ ವೃಥಾ ಸಞ್ಚಾರಮನ್ಯೈರಲಂ
ನಿತ್ಯಂ ಶಙ್ಕರಪಾದಪದ್ಮಯುಗಲೀನೀಡೇ ವಿಹಾರಂ ಕುರು ॥೪೫॥

೪೫. ಚಿತ್ತವೆಂಬ ಪಕ್ಷಿಶ್ರೇಷ್ಠನೆ, ವೇದಗಳೆಂಬ ವೃಕ್ಷದ ಅಗ್ರ ಭಾಗಗಳಿಂದೊಡಗೂಡಿದ ದ್ವಿಜಶ್ರೇಷ್ಠರು ಸೇವಿಸುತ್ತಿರುವ, ಶಾಶ್ವತವಾದ, ಸೌಖ್ಯವನ್ನುಂಟುಮಾಡುವ, ಆಯಾಸವನ್ನು ಹೋಗಲಾಡಿಸುವ ಅಮೃತ ರಸವುಳ್ಳ ಫಲಗಳಿಂದ ಹೊಳೆಯುತ್ತಿರುವ, ಶಂಕರನ ಪಾದಪದ್ಮಯುಗಲವೆಂಬ ಗೂಡಿನಲ್ಲಿ ವಿಹಾರಮಾಡುತ್ತಿರು. ಮತ್ತೊಬ್ಬರ ಜೊತೆಯಲ್ಲಿ ವೃಥಾ ಸಂಚರಿಸುವದನ್ನು ಬಿಟ್ಟುಬಿಡು, ಸಾಕು.

## ವಿವರಣೆ

ಮಧುರವಾದ ಹಣ್ಣುಗಳು ಸಿಕ್ಕುವ ಮರದಲ್ಲಿಯೇ ಗೂಡುಕಟ್ಟಿಕೊಂಡು ಪಕ್ಷಿಗಳು ವಾಸಮಾಡುತ್ತಿರುತ್ತವೆ. ಹಣ್ಣಿಲ್ಲದ ಮರಗಳಕಡೆಗೆ ಅವು ಹೋಗುವದೇ ಇಲ್ಲ. ಅದರಂತೆ ಈ ಚಿತ್ತವು ವೇದಾಂತದ ಸಾರವನ್ನು ಬಲ್ಲ ಬ್ರಾಹ್ಮಣರು ನಿತ್ಯವೂ ಸೇವಿಸುತ್ತಿರುವ ಶಂಕರಪಾದಪದ್ಮದಲ್ಲಿಯೇ ನಿಲ್ಲುವಂತೆ ಮಾಡಿಕೊಳ್ಳಬೇಕು. ಅದರಿಂದ ಸಂಸಾರದ ಖೇದವು ತಪ್ಪುವದು, ಸೌಖ್ಯವು ಸಿಕ್ಕುವದು, ಅಮೃತವೆಂಬ ಪರಮಪುರುಷಾರ್ಥವೂ ದೊರಕುವದು.

ದ್ವಿಜ- ಎಂಬ ಶಬ್ದಕ್ಕೆ ಹಕ್ಕಿಗಳೆಂದೂ ಬ್ರಾಹ್ಮಣರೆಂದೂ ಅರ್ಥವಾಗುತ್ತದೆ. ಹಕ್ಕಿಗಳು ಯಾವಾಗಲೂ ಫಲಭರಿತವಾದ ಮರದ ಮೇಲೆಯೇ ಇರುವಂತೆ ಸತ್ಪುರುಷರು ಸೇವಿಸುವ ಶಂಕರಪಾದದಲ್ಲಿಯೇ ವಿವೇಕಿಯು ಚಿತ್ತವನ್ನಿರಿಸಬೇಕು, ಅವು ಫಲರಹಿತವಾದ ಮರಗಳನ್ನು ಬಿಡುವಂತೆ ನಿಃಸಾರವಾದ ವಿಷಯಗಳಲ್ಲಿ ಚಿತ್ತವು ಹಾರಾಡದಂತೆ ಮಾಡಿಕೊಳ್ಳಬೇಕು- ಎಂದು ಪಕ್ಷಿರೂಪಕದಿಂದ ತಿಳಿಯಹೇಳಿದೆ.

ಆಕೀರ್ಣೇ ನಖರಾಜಿಕಾನ್ತಿವಿಭವೈರುದ್ಯತ್ಸುಧಾವೈಭವೈ
ರಾಧೌತೇಽಪಿ ಪದ್ಮರಾಗಲಲಿತೇ ಹಂಸವ್ರಜೈರಾಶ್ರಿತೇ ।
ನಿತ್ಯಂ ಭಕ್ತಿವಧೂಗಣೈಶ್ಚ ರಹಸಿ ಸ್ವೇಚ್ಛಾವಿಹಾರಂ ಕುರು
ಸ್ಥಿತ್ವಾ ಮಾನಸರಾಜಹಂಸ ಗಿರಿಜಾನಾಥಜ್ಘ್ರಿಸೌಧಾನ್ತರೇ ॥೪೬॥

೪೬. ಮನಸ್ಸೆಂಬ ರಾಜಹಂಸನೆ; ಉಗುರುಗಳ ಕಾಂತಿವೈಭವಗಳಿಂದ ವ್ಯಾಪ್ತವಾಗಿರುವ, ಎದ್ದು ಕಾಣುವ ಸುಧಾಕಾಂತಿಗಳಿಂದ ಅತ್ಯಂತ ಶುಭ್ರವಾಗಿರುವ ಪದ್ಮರಾಗದಿಂದ ಮನೋಹರವಾಗಿರುವ, ಹಂಸಸಮೂಹಗಳಿಂದಲೂ ಆಶ್ರಯಿಸಲ್ಪಟ್ಟಿರುವ ಗಿರಿಜಾನಾಥನ ಪಾದವೆಂಬ ಅರಮನೆಯೊಳಗೆ ಇದ್ದುಕೊಂಡು ನಿತ್ಯವೂ ಭಕ್ತಿಗಳೆಂಬ ಸ್ತ್ರೀಸಮೂಹದೊಡನೆ ರಹಸ್ಯವಾಗಿ ಸ್ವೇಚ್ಛಾವಿಹಾರವನ್ನು ಮಾಡಿಕೊಂಡಿರು.

### ವಿವರಣೆ

ಹಂಸಗಳು ಕಮಲಗಳು ಹೇರಳವಾಗಿರುವ ಸ್ಥಳದಲ್ಲಿ ತಮ್ಮ ಜಾತಿಯ ಹೆಂಗಳೊಡನೆ ವಿಹರಿಸುತ್ತಾ ಇರುವವು. ಇಲ್ಲಿ ಈಶ್ವರನ ಪಾದವನ್ನು ಒಂದು ಅರಮನೆಯೆಂದು ರೂಪಕಮಾಡಿಕೊಂಡಿದೆ. ಮನೆಯನ್ನು ಸ್ವಚ್ಛವಾದ ಸುಣ್ಣಗಾರೆಯಿಂದ ಬಳಿದಿದ್ದರೆ ಅದರ ಕಾಂತಿಯು ಎದ್ದು ಹೊಳೆಯುತ್ತಿರುತ್ತದೆ. ಅದರ ಗೋಡೆಗಳಲ್ಲಿ ಪದ್ಮರಾಗರತ್ನಗಳನ್ನು ಅಲ್ಲಲ್ಲಿಗೆ ಮೆಟ್ಟಿದ್ದರೆ ಗೋಡೆಯ ಕಾಂತಿಯು ಇನೂ ಹೆಚ್ಚಿರುವದು. ಅದರಮೇಲೆ ಹಂಸಪಕ್ಷಿಗಳ ಚಿತ್ರಗಳು ಅಲ್ಲಲ್ಲಿ ಕಾಣುತ್ತಿದ್ದರೆ ಎಷ್ಟು ಸೊಗಸು! ಪರಮೇಶ್ವರನ ಪಾದವನ್ನು ಪರಮಹಂಸರು ಆಶ್ರಯಿಸಿರುವರು. ಅವರ ಉಗುರುಗಳ ಕಾಂತಿಯಿಂದಲೂ ಅವರಿಗೆ ಆ ಪಾದವು ಕೊಡುವ ಅಮೃತತ್ವದ ವೈಭವದಿಂದಲೂ ಅದು ಇನ್ನಷ್ಟು ಶೋಭಿಸುತ್ತಿರುವದು. ಆ ಪಾದಪದ್ಮವನ್ನು ಭಕ್ತಿಯಿಂದ ಸೇವಿಸುತ್ತಿರುವವರ ಆನಂದವು ಎಷ್ಟು ಉತ್ಕೃಷ್ಟವಾಗಿರುತ್ತದೆ!

**ಶಮ್ಭುಧ್ಯಾನವಸನ್ತಸಙ್ಗಿನಿ ಹೃದಾರಾಮೇಽಘಜೀರ್ಣಚ್ಛದಾಃ**
**ಸ್ರಸ್ತಾ ಭಕ್ತಿಲತಾಚ್ಛಟಾವಿಲಸಿತಾಃ ಪುಣ್ಯಪ್ರವಾಲಶ್ರಿತಾಃ ।**
**ದೀಪ್ಯನ್ತೇ ಗುಣಕೋರಕಾ ಜಪವಚಃ ಪುಷ್ಪಾಣಿ ಸದ್ವಾಸನಾ**
**ಜ್ಞಾನಾನನ್ದಸುಧಾಮರನ್ದಲಹರೀ ಸಂವಿತ್ಫಲಾಭ್ಯುನ್ನತಿಃ ॥೪೭॥**

೪೭. ಶಿವನ ಧ್ಯಾನವೆಂಬ ವಸಂತದ ಸಂಬಂಧವುಳ್ಳ ಹೃದಯವೆಂಬ ಉದ್ಯಾನದಲ್ಲಿ ಪಾಪಗಳೆಂಬ ತರಗೆಲೆಗಳು ಜಗುಳಿಬಿದ್ದವು. ಭಕ್ತಿಯೆಂಬ ಬಳ್ಳಿಗಳ ಸಮೂಹವು ಹಬ್ಬಿದವು. ಪುಣ್ಯಗಳೆಂಬ ಚಿಗುರುಗಳಲ್ಲಿರುವ ಶುಭವಾಸನೆಗಳುಳ್ಳ ಸದ್ಗುಣಗಳೆಂಬ ಮೊಗ್ಗುಗಳು, ಜಪವಾಕ್ಕುಗಳೆಂಬ ಹೂಗಳು ಹೊಳೆಯುತ್ತಿವೆ. ಸಾಕ್ಷಾತ್ಕಾರವೆಂಬ ಫಲದ ಅಭಿವೃದ್ಧಿಯೂ ಜ್ಞಾನಾನಂದಾಮೃತ ಮಕರಂದಪ್ರವಾಹವೂ ಉಂಟಾಗಿರುತ್ತದೆ.

## ವಿವರಣೆ

ಶಿವನ ಧ್ಯಾನದಿಂದ ಪಾಪದ ನಾಶ, ಪುಣ್ಯವು ತೋರಿಕೊಳ್ಳವದು, ಭಕ್ತಿಯ ಹಬ್ಬಿಕೆ, ಶಾಂತ್ಯಾದಿಗುಣಗಳು ತಲೆದೋರುವದು, ನಿತ್ಯವಾಗಿ ಶಿವನಾಮದ ಜಪ, ಶಿವಸಾಕ್ಷಾತ್ಕಾರ, ಪರಮಾನಂದಾವಿರ್ಭಾವ- ಇವೆಲ್ಲವೂ ಲಭಿಸುವವು.

**ನಿತ್ಯಾನನ್ದರಸಾಲಯಂ ಸುರಮುನಿಸ್ವಾನ್ತಾಮ್ಬುಜಾತಾಶ್ರಯಂ**
**ಸ್ವಚ್ಛಂ ಸದ್ದ್ವಿಜಸೇವಿತಂ ಕಲುಷಹೃತ್ಸದ್ವಾಸನಾವಿಷ್ಕೃತಮ್ ।**
**ಶಮ್ಭುಧ್ಯಾನಸರೋವರಂ ವ್ರಜ ಮನೋಹಂಸಾವತಂಸ ಸ್ಥಿರಂ**
**ಕಿಂ ಕ್ಷುದ್ರಾಶ್ರಯಪಲ್ವಲಭ್ರಮಣಸಂಜಾತಶ್ರಮಂ ಪ್ರಾಪ್ಸ್ಯಸಿ ॥೪೮॥**

೪೮. ಮನಸ್ಸೆಂಬ ಹಂಸಶ್ರೇಷ್ಠನೆ, ನಿತ್ಯಾನಂದರಸಕ್ಕೆ ಬೀಡೂ ದೇವತೆಗಳ ಮತ್ತು ಮುನಿಗಳ ಹೃದಯವೆಂಬ ಕಮಲಗಳಿಗೆ ಆಶ್ರಯವೂ ಸ್ವಚ್ಛವಾದದ್ದೂ ಸಜ್ಜನರೆಂಬ ಪಕ್ಷಿಗಳಿಂದ ಸೇವಿತವಾದದ್ದೂ ಪಾಪಪರಿಹಾರಕವಾದ ಸದ್ವಾಸನೆಯಿಂದ ಹೊರತೋರಿಕೊಳ್ಳತಕ್ಕದ್ದೂ ಆಗಿರುವ ಶಂಭುಧ್ಯಾನವೆಂಬ ಸರೋವರವನ್ನು ನಿತ್ಯವೂ ಸೇರಿಕೊಂಡು ಕ್ಷುದ್ರರ ಆಶ್ರಯವೆಂಬ ಕುಂಟೆಗಳಲ್ಲಿ ಅಲೆದಾಡುವ ಶ್ರಮವನ್ನು ಏತಕ್ಕೆ ಹೊಂದುತ್ತಿರುವೆ?

## ವಿವರಣೆ

ಇಹಲೋಕದ ಕ್ಷುದ್ರಫಲಗಳಿಗಾಗಿ ನೀಚಜನರನ್ನೋ ಅಲ್ಪಫಲದಾತೃಗಳಾದ ದೇವತೆಗಳನ್ನೋ ಸೇವಿಸುವ ಆಯಾಸಕ್ಕೆ ಹೋಗದೆ ದೇವತೆಗಳೂ ಋಷಿಗಳೂ ಸಂತತವಾಗಿ ತಮ್ಮ ಹೃದಯದಲ್ಲಿ ಸೇವಿಸಿ ನಿತ್ಯಾನಂದವನ್ನು ಪಡೆದುಕೊಳ್ಳುತ್ತಿರುವ ಶಿವನನ್ನೇ ಧ್ಯಾನಿಸಿ ಪುನರಾವೃತ್ತಿರಹಿತಪರಮಾನಂದರೂಪವಾದ ಮೋಕ್ಷವನ್ನು ಪಡೆಯುವದು ಮೇಲು.

**ಆನನ್ದಾಮೃತಪೂರಿತಾ ಹರಪದಾಮ್ಭೋಜಾಲವಾಲೋದ್ಯತಾ**
**ಸ್ಥೈರ್ಯೋಪಘ್ನಮುಪೇತ್ಯ ಭಕ್ತಿಲತಿಕಾ ಶಾಖೋಪಶಾಖಾನ್ವಿತಾ ।**
**ಉಚ್ಚೈರ್ಮಾನಸಕಾಯಮಾನಪಟಲೀಮಾಕ್ರಮ್ಯ ನಿಷ್ಕಲ್ಮಷಾ**
**ನಿತ್ಯಾಭೀಷ್ಟಫಲಪ್ರದಾ ಭವತು ಮೇ ಸತ್ಕರ್ಮಸಂವರ್ಧಿತಾ ॥೪೯॥**

೪೯. ಶಿವಭಜನಾನಂದವೆಂಬ ಅಮೃತದಿಂದ ಸಿಕ್ತವಾಗಿ, ಶಿವನ

ಪಾದಕಮಲವೆಂಬ ಪಾತಿಯಿಂದ ಮೊಳೆತು ಸ್ಥೈರ್ಯವೆಂಬ ಆಸರೆಯ ಕಂಬವನ್ನು ಹೊಂದಿ ಕವಲುಕವಲುಗಳಾಗಿ ಒಡೆದುಕೊಂಡು ಎತ್ತರವಾಗಿರುವ ಮನಸ್ಸೆಂಬ ಚಪ್ಪರದ ಮೇಲುಗಡೆಯನ್ನು ವ್ಯಾಪಿಸಿಕೊಂಡಿರುವ ನಿಷ್ಕಲ್ಮಷವಾದ ಭಕ್ತಿ ಎಂಬ ಬಳ್ಳಿಯು ಶುಭಕರ್ಮಗಳಿಂದ ಬೆಳೆಯುತ್ತಾ ನನಗೆ ನಿತ್ಯಾನಂದವೆಂಬ ಇಷ್ಟಾರ್ಥ ಫಲವನ್ನು ಕೊಡಲಿ!

## ವಿವರಣೆ

ಭಕ್ತಿಯಿಂದ ಪರಮಪುರುಷಾರ್ಥವು ಲಭಿಸುವದಕ್ಕೆ ಬೇಕಾದ ಸಾಮಗ್ರಿಗಳನ್ನು ಇಲ್ಲಿ ಬಳ್ಳಿಯ ರೂಪಕದಿಂದ ವರ್ಣಿಸಿದೆ.

ಸನ್ಧ್ಯಾರಮ್ಭವಿಜೃಮ್ಭಿತಂ ಶ್ರುತಿಶಿರಸ್ಥಾನಾನ್ತರಾಧಿಷ್ಠಿತಂ
ಸಪ್ರೇಮಭ್ರಮರಾಭಿರಾಮಮಸಕೃತ್ ಸದ್ವಾಸನಾಶೋಭಿತಮ್ ।
ಭೋಗೀನ್ದ್ರಾಭರಣಂ ಸಮಸ್ತಸುಮನಃಪೂಜ್ಯಂ ಗುಣಾವಿಷ್ಕೃತಂ
ಸೇವೇ ಶ್ರೀಗಿರಿಮಲ್ಲಿಕಾರ್ಜುನಮಹಾಲಿಙ್ಗಂ ಶಿವಾಲಿಙ್ಗಿತಮ್ ॥೫೦॥

೫೦. ಸಂಧ್ಯಾಕಾಲದ ಆರಂಭದಲ್ಲಿ ವಿಜೃಂಭಣೆಯಿಂದ ತೋರುವ, ಉಪನಿಷತ್ತುಗಳೆಂಬ ಸ್ಥಾನದಲ್ಲಿ ನೆಲೆಸಿರುವ ಪ್ರೇಮದಿಂದೊಡಗೂಡಿದ ಭ್ರಮರಾಂಬಿಕೆಯಿಂದ ಒಪ್ಪುತ್ತಿರುವ, ಸದ್ವಾಸನೆಗಳಿಂದ ಅಲಂಕೃತವಾಗಿರುವ, ಸರ್ಪಶ್ರೇಷ್ಠರೆಂಬ ಆಭರಣವುಳ್ಳ ಸಮಸ್ತದೇವತೆಗಳಿಂದ ಪೂಜಿತನಾಗಿರುವ ಕಲ್ಯಾಣಗುಣಗಳಿಂದ ಹೊರತೋರುವ ಪಾರ್ವತಿಯಿಂದ ಆಲಿಂಗಿತನಾಗಿರುವ ಶ್ರೀಶೈಲದ ಮಲ್ಲಿಕಾರ್ಜುನನನ್ನು ಸೇವಿಸುತ್ತೇನೆ.

## ವಿವರಣೆ

ಶ್ಲೋಕದ ಅಭಿಪ್ರಾಯವು ಸ್ಪಷ್ಟವಾಗಿದೆ. ಇಲ್ಲಿ ಶ್ರೀಶೈಲಪರ್ವತದಲ್ಲಿ ಬೆಳೆದಿರುವ ಮಲ್ಲಿಗೆಬಳ್ಳಿಯು ಮತ್ತಿಯಮರಕ್ಕೆ ಹತ್ತಿಕೊಂಡಿಕರುವಂತೆಯೂ ಶ್ಲೇಷೆಯಿಂದ ಬಣ್ಣಿಸಲಾಗಿದೆ. ಆ ಬಳ್ಳಿಯಲ್ಲಿ ಸಂಜೆಯಹೊತ್ತು ಅರಳುವ ಸುವಾಸನೆಯ ಹೂಗಳಿರುತ್ತವೆ, ದುಂಬಿಗಳು ಅದನ್ನು ಮುತ್ತಿಕೊಂಡಿರುತ್ತವೆ. ಭೋಗಿಗಳು ಅದನ್ನು ಆಶ್ರಯಿಸಿರುತ್ತಾರೆ. ಅಂಥ ಮಲ್ಲಿಗೆಯ ಬಳ್ಳಿ ಮತ್ತು ಆದು ಆಶ್ರಯಿಸಿರುವ ಮರವನ್ನು

ಆಶ್ರಯಿಸುತ್ತೇನೆ ಎಂದು ಮಲ್ಲಿಗೆಯ ಪರವಾಗಿ ತೋರುವ ಅರ್ಥ. ಆದರೆ ಅದೇನೂ ಮುಖ್ಯವಲ್ಲ.

**ಭೃಙ್ಗೀಚ್ಛಾನಟನೋತ್ಕಟಃ ಕರಿಮದಗ್ರಾಹೀ ಸ್ಫುರನ್ಮಾಧವಾ-**
**ಹ್ಲಾದೋ ನಾದಯುತೋ ಮಹಾಸಿತವಪುಃ ಪಞ್ಚೇಷುಣಾ ಚಾದೃತಃ ।**
**ಸತ್ಪಕ್ಷಃ ಸುಮನೋವನೇಷು ಸ ಪುನಃ ಸಾಕ್ಷಾನ್ಮದೀಯೇ ಮನೋ**
**ರಾಜೀವೇ ಭ್ರಮರಾಧಿಪೋ ವಿಹರತಾಂ ಶ್ರೀಶೈಲವಾಸೀ ವಿಭುಃ ॥೫೧॥**

೫೧. ಭೃಂಗಿಯ ಇಚ್ಛೆಯಂತೆ ನಾಟ್ಯವಾಡುವದರಲ್ಲಿ ಹೆಚ್ಚಾಗಿ ಪ್ರವರ್ತಿಸುವ, ಗಜಾಸುರನ ಮದವನ್ನು ತೆಗೆದುಹಾಕುವ, ಪ್ರಕಾಶಿಸುವ ವಿಷ್ಣುವಿನ ಆನಂದವುಳ್ಳವನಾದ ಪ್ರಣವನಾದದೊಡಗೂಡಿರುವ, ದೊಡ್ಡದಾದ ಶುಭ್ರದೇಹವುಳ್ಳವನಾದ ಮನ್ಮಥನಿಂದ ಆದರಿಸಲ್ಪಟ್ಟ ದೇವತೆಗಳನ್ನು ಕಾಪಾಡುವದರಲ್ಲಿ ಅಭಿಮಾನವುಳ್ಳವನಾದ ಆ ಪ್ರಸಿದ್ಧ ಶ್ರೀಶೈಲವಾಸಿಯಾದ ವಿಭುವಾದ ಭ್ರಮರಾಂಬೆಯ ಪತಿಯು ನನ್ನ ಮನಸ್ಸೆಂಬ ಕಮಲದಲ್ಲಿ ಸಾಕ್ಷಾತ್ತಾಗಿ ವಿಹರಿಸುತ್ತಿರಲಿ!

## ವಿವರಣೆ

ಇಲ್ಲಿ 'ಭ್ರಮರಾಧಿಪ' ಎಂಬ ಮಾತಿನಿಂದ ಒಂದು ತುಂಬಿಯ ಪರವಾಗಿಯೂ ಅರ್ಥವಾಗುವಂತೆ ಶ್ಲೇಷೆಯಿಂದ ಈಶ್ವರನನ್ನು ವರ್ಣಿಸಿ ಪ್ರಾರ್ಥಿಸಿದೆ.

ಗಂಡುತುಂಬಿಯು ಹೆಣ್ಣುತುಂಬಿಯ ಅಪೇಕ್ಷೆಯಂತೆ ಕುಣಿದಾಡುವದು, ಆನೆಯ ಮದಜಲವನ್ನು ಕುಡಿಯುತ್ತಿರುವದು; ವಸಂತಋತುವು ಕಾಣಿಸಿಕೊಂಡಾಗ ಆನಂದವುಳ್ಳದ್ದಾಗಿರುವದು, ಝೇಂಕಾರದಿಂದೊಡಗೂಡಿರುವದು, ಬಹಳ ಕಪ್ಪಾದ ಮೈಯುಳ್ಳದ್ದಾಗಿರುವದು (ಶಿವನ ಪರವಾದಾಗ ಮಹಾ + ಸಿತ; ತುಂಬಿಯ ಪರವಾದಾಗ ಮಹಾ + ಅಸಿತ ಎಂದು ಪದಚ್ಛೇದ), ಮನ್ಮಥನಿಂದ ತನಗೆ ಸಹಾಯವೆಂದು ಆದರಿಸಲ್ಪಟ್ಟಿರುವದು. ಪುಷ್ಪೋದ್ಯಾನಗಳಲ್ಲಿ ಅಭಿಮಾನ ಉಳ್ಳದ್ದಾಗಿರುವದು (ಶಿವನ ಪರವಾದಾಗ ಸುಮನೋ + ಅವನೇಷು; ತುಂಬಿಯ ಪರವಾದಾಗ ಸುಮನೋ + ವನೇಷು ಎಂದು ಪದವಿಭಾಗ) ಇಂಥ ಭ್ರಮರವು- ತುಂಬಿಯು- ಕಮಲದಲ್ಲಿ ನೆಲೆಸಿರುವದು ಸ್ವಭಾವ; ಈಶ್ವರನು ನನ್ನ ಮನಸ್ಸಿನಲ್ಲಿ ನಿತ್ಯವೂ ವಿಹರಿಸುತ್ತಿರಲಿ ಎಂದು ಪ್ರಾರ್ಥನೆ.

ಕಾರುಣ್ಯಾಮೃತವರ್ಷಿಣಂ ಘನವಿಪದ್ಗ್ರೀಷ್ಮಚ್ಛಿದಾಕರ್ಮಠಂ
ವಿದ್ಯಾಸಸ್ಯಫಲೋದಯಾಯ ಸುಮನಸ್ಸಂಸೇವ್ಯಮಿಚ್ಛಾಕೃತಿಮ್ ।
ನೃತ್ಯದ್ಭಕ್ತಮಯೂರಮದ್ರಿನಿಲಯಂ ಚಞ್ಚಜ್ಜಟಾಮಣ್ಡಲಂ
ಶಮ್ಭೋ ವಾಞ್ಛತಿ ನೀಲಕನ್ಧರ, ಸದಾ ತ್ವಾಂ ಮೇ ಮನಶ್ಚಾತಕಃ ॥೫೨॥

೫೨. ಶಂಭುವೆ, ನೀಲಕಂಠನೆ, ಕಾರುಣ್ಯಾಮೃತವನ್ನು ಮಳೆಗರೆಯುವ ದೊಡ್ಡ ಆಪತ್ತಿನ ತಾಪವನ್ನು ಕತ್ತರಿಸುವದರಲ್ಲಿ ನಿರತನಾಗಿರುವ, ಜ್ಞಾನವೆಂಬ ಪೈರಿನ ಫಲವು ಉಂಟಾಗುವದಕ್ಕಾಗಿ ವಿವೇಕಿಗಳಿಂದ ಸೇವಿಸಲ್ಪಟ್ಟಿರುವ, ಇಚ್ಛೆಬಂದಂತೆ ಆಕಾರವನ್ನು ಧರಿಸಬಲ್ಲ ಪರ್ವತವಾಸಿಯಾದ ಪ್ರಕಾಶಿಸುವ ಜಟೆಗಳ ಸಮೂಹವುಳ್ಳ ನಿನ್ನನ್ನೇ ನನ್ನ ಮನಸ್ಸೆಂಬ ಚಾತಕವು ಬಯಸುತ್ತಿದೆ.

### ವಿವರಣೆ

ಚಾತಕಪಕ್ಷಿಯು ಮೇಘದ ಬರುವಿಕೆಯನ್ನೇ ಹಾರೈಸುವಂತೆ ಭಕ್ತನ ಮನಸ್ಸೂ ಈಶ್ವರನ ಸಾಕ್ಷಾತ್ಕಾರವನ್ನೇ ಕಾದುಕೊಂಡಿರುತ್ತದೆ ಎಂದು ಶ್ಲೇಷೆಯಿಂದ ಇಲ್ಲಿ ವರ್ಣಿಸಿದೆ. ತಾತ್ಪರ್ಯದಲ್ಲಿ ಈಶ್ವರನ ಪರವಾಗಿ ವಿಶೇಷಣಗಳ ಅರ್ಥವನ್ನು ಬರೆದಿರುತ್ತದೆ. ಈಗ ಕಂಧರ (=ಜಲಧರ) ಎಂಬ ಮಾತನ್ನು ಮೋಡವೆಂಬರ್ಥವುಳ್ಳದ್ದೆಂದು ಇಟ್ಟುಕೊಂಡು ವಿಶೇಷಣಗಳಿಗೆ ಅರ್ಥವನ್ನು ವರ್ಣಿಸಿ ತಿಳಿಸುತ್ತೇವೆ.

ಚಾತಕಪಕ್ಷಿಯು, (ಅಮೃತವರ್ಷಿಣಂ) ಜಲವನ್ನು ಮಳೆಗರೆಯುವ, ಬೇಸಗೆಯ ತಾಪವನ್ನು ಕಳೆಯುವದರಲ್ಲಿ ಸಮರ್ಥವಾಗಿರುವ, ಸಸ್ಯಗಳು ಫಲವತ್ತಾಗಲೆಂದು ವಿವೇಕಿಗಳಾದ ಬೇಸಾಯಗಾರರು ಆಶ್ರಯಿಸುವದಾದ, ಬೇರೆ ಬೇರೆಯ ಆಕಾರಗಳನ್ನು ತಳೆಯುತ್ತಿರುವ, ತನ್ನನ್ನು ನೋಡಿ ಕುಣಿಯುವ ನವಿಲುಗಳುಳ್ಳ, ಮೋಡಗಳಮೇಲೆ ಕುಳಿತಿರುವ, ಮಿಂಚುಗಳುಳ್ಳ ನೀಲಮೇಘವು ಬರುವದನ್ನೇ ಹಾರೈಸಿಕೊಂಡಿರುತ್ತದೆ.

ಆಕಾಶೇನ ಶಿಖೀ ಸಮಸ್ತಫಣಿನಾಂ ನೇತ್ರಾ ಕಲಾಪೀ ನತಾ-
ನುಗ್ರಾಹಿ ಪ್ರಣವೋಪದೇಶನಿನದೈಃ ಕೇಕೀತಿ ಯೋ ಗೀಯತೇ ।
ಶ್ಯಾಮಾಂ ಶೈಲಸಮುದ್ಭವಾಂ ಘನರುಚಿಂ ದೃಷ್ಟ್ವಾ ನಟನ್ತಂ ಮುದಾ
ವೇದಾನ್ತೋಪವನೇ ವಿಹಾರರಸಿಕಂ ತಂ ನೀಲಕಣ್ಠಂ ಭಜೇ ॥೫೩॥

ಯಾವನು ಆಕಾಶದಿಂದ ಶಿಖೆಯುಳ್ಳವನೋ (ವ್ಯೋಮಕೇಶನೋ)

ಸಮಸ್ತಸರ್ಪಗಳಿಗೂ ನಾಯಕನಾದ ಆದಿಶೇಷನೆಂಬ ಭೂಷಣವುಳ್ಳವನೋ, ನಮಿಸುವವರನ್ನು ಅನುಗ್ರಹಿಸುವವನೂ ಪ್ರಣವೋಪದೇಶಶಬ್ದಗಳಿಂದ ಕೇಕೀ (ಕೇಕಾ ಎಂಬ ಶಬ್ದವುಳ್ಳದ್ದಾದ ನವಿಲು) ಎಂದು ಕರೆಯಲ್ಪಡುತ್ತಿರುವನೋ ಯೌವನವತಿಯಾದ ಪರ್ವತನ ಮಗಳಾದ ಮೇಘವರ್ಣವುಳ್ಳ ಪಾರ್ವತಿಯನ್ನು ಕಂಡು ಸಂತೋಷದಿಂದ ಕುಣಿಯುತ್ತಿರುವ, ವೇದಾಂತೋದ್ಯಾನದಲ್ಲಿ ವಿಹರಿಸುವದರಲ್ಲಿ ಇಚ್ಛೆಯುಳ್ಳ ಆ ನೀಲಕಂಠನನ್ನು ಭಜಿಸುತ್ತೇನೆ.

### ವಿವರಣೆ

ಇಲ್ಲಿ ಪರಮೇಶ್ವರನನ್ನು ನವಿಲಿಗೆ ಹೋಲಿಸಿದೆ. ಅನೇಕ ವಿಶೇಷಣಗಳು ಶ್ಲೇಷೆಯಿಂದ ಗಂಡುನವಿಲಿಗೂ ಹೊಂದುತ್ತವೆ.

**ಸಂಧ್ಯಾ ಘರ್ಮದಿನಾತ್ಯಯೋ ಹರಿಕರಾಘಾತಪ್ರಭೂತಾನಕ**
**ಧ್ವಾನೋ ವಾರಿದಗರ್ಜಿತಂ ದಿವಿಷದಾಂ ದೃಷ್ಟಿಚ್ಛಟಾ ಚಞ್ಚಲಾ ।**
**ಭಕ್ತಾನಾಂ ಪರಿತೋಷಬಾಷ್ಪವಿತತಿರ್ವೃಷ್ಟಿರ್ಮಯೂರೀ ಶಿವಾ**
**ಯಸ್ಮಿನ್ನುಜ್ಜ್ವಲತಾಣ್ಡವಂ ವಿಜಯತೇ ತಂ ನೀಲಕಣ್ಠಂ ಭಜೇ ॥೫೪॥**

೫೪. ಯಾವನಲ್ಲಿ ಸಂಜೆಯೇ ಬೇಸಗೆಯ ಕೊನೆಯೋ (ಮಳೆಗಾಲವೋ), ವಿಷ್ಣುವಿನ ಕೈಯ ಹೊಡೆತದಿಂದುಂಟಾದ ಮೃದಂಗದ ಧ್ವನಿಯೇ ಮೋಡದ ಗುಡುಗೋ, ದೇವತೆಗಳ ಕಂಗಳ ಸಾಲೇ ಮಿಂಚೋ, ಭಕ್ತರ ಆನಂದಬಾಷ್ಪವೇ ಮಳೆಯೋ, ಪಾರ್ವತಿಯೇ ಹೆಣ್ಣುನವಿಲೋ, ಯಾವನಲ್ಲಿ ಪ್ರಕಾಶನಾದ ನರ್ತನವು ಒಪ್ಪುತ್ತಿರುವದೋ ಆ ನೀಲಕಂಠನನ್ನು ಭಜಿಸುತ್ತೇನೆ.

### ವಿವರಣೆ

ಇಲ್ಲಿ ಮತ್ತೊಂದು ಬಗೆಯಿಂದ ಶಿವನನ್ನು ನವಿಲೆಂದು ಭಾವಿಸಿ ವರ್ಣಿಸಿರುತ್ತದೆ. ನವಿಲಿನ ಕುಣಿತಕ್ಕೆ ಮಳೆಗಾಲವಿರಬೇಕು, ಮೋಡವು ಗುಡುಗುತ್ತಿರಬೇಕು; ಮಿಂಚಿರಬೇಕು, ಮಳೆಗರೆಯುತ್ತಿರಬೇಕು, ಹತ್ತಿರ ಹೆಣ್ಣು ನವಿಲಿರಬೇಕು. ಈ ಪರಮೇಶ್ವರನೆಂಬ ನೀಲಕಂಠನ (ನವಿಲಿನ) ನರ್ತನಕ್ಕೆ ಸಂಧ್ಯಾಕಾಲವೇ ಮಳೆಗಾಲ. ಏಕೆಂದರೆ ಸಂಧ್ಯಾಕಾಲದಲ್ಲಿಯೇ ಶಿವನು ನಾಟ್ಯವಾಡುತ್ತಿರುವನು. ವಿಷ್ಣುವು ಬಾರಿಸುತ್ತಿರುವ ಮದ್ದಳೆಯ ಶಬ್ದವೇ ಗುಡುಗು, ದೇವತೆಗಳ ಹೊಳೆಯುತ್ತಿರುವ ಕಂಗಳ

ನೋಟವೇ ಮಿಂಚು, ಭಕ್ತರು ಸುರಿಸುತ್ತಿರುವ ಆನಂದಬಾಷ್ಪವೇ ಮಳೆ, ಪಾರ್ವತಿಯೇ ಹೆಣ್ಣುನವಿಲು.

**ಆದ್ಯಾಯಾಮಿತತೇಜಸೇ ಶ್ರುತಿಪದೈರ್ವೇದ್ಯಾಯ ಸಾಧ್ಯಾಯ ತೇ**
**ವಿದ್ಯಾನನ್ದಮಯಾತ್ಮನೇ ತ್ರಿಜಗತಃ ಸಂರಕ್ಷಣೋದ್ಯೋಗಿನೇ ।**
**ಧ್ಯೇಯಾಯಾಖಿಲಯೋಗಿಭಿಃ ಸುರಗಣೈರ್ಗೇಯಾಯ ಮಾಯಾವಿನೇ**
**ಸಮ್ಯಕ್ತಾಣ್ಡವಸಂಭ್ರಮಾಯ ಜಟಿನೇ ಸೇಯಂ ನತಿಃ ಶಮ್ಭವೇ ॥೫೫॥**

೫೫. ಎಲ್ಲಕ್ಕೂ ಆದಿಯಾಗಿರುವ ವೇದಶಬ್ದಗಳಿಂದಲೇ ವೇದ್ಯನಾಗಿರುವ ದೇವನಾದ ನಿನಗೆ, ಜ್ಞಾನಾನಂದಸ್ವರೂಪನಾದ ಮೂರು ಲೋಕಗಳನ್ನೂ ಕಾಪಾಡುವದರಲ್ಲಿ ನಿರತನಾಗಿರುವ, ಸಮಸ್ತಯೋಗಿಗಳಿಂದಲೂ ಧ್ಯೇಯನಾಗಿರುವ ದೇವತೆಗಳ ಗುಂಪಿನಿಂದ ಗಾನಮಾಡಲ್ಪಡುತ್ತಿರುವ, ಮಾಯಾಶಕ್ತಿಸಮೇತನಾದ, ಉತ್ತಮವಾದ ನರ್ತನದಲ್ಲಿ ತೊಡಗುವ ಜಟಾಧಾರಿಯಾದ ಶಂಭುವಿಗೆ ಈ ನಮಸ್ಕಾರವು.

**ನಿತ್ಯಾಯ ತ್ರಿಗುಣಾತ್ಮನೇ ಪುರಜಿತೇ ಕಾತ್ಯಾಯನೀಶ್ರೇಯಸೇ**
**ಸತ್ಯಾಯಾದಿಕುಟುಮ್ಬಿನೇ ಮುನಿಮನಃಪ್ರತ್ಯಕ್ಷಚಿನ್ಮೂರ್ತಯೇ ।**
**ಮಾಯಾಸೃಷ್ಟಜಗತ್ತ್ರಯಾಯ ಸಕಲಾಮ್ನಾಯಾನ್ತಸಂಚಾರಿಣೇ**
**ಸಾಯಂತಾಣ್ಡವಸಂಭ್ರಮಾಯ ಜಟಿನೇ ಸೇಯಂ ನತಿಃ ಶಮ್ಭವೇ ॥೫೬॥**

೫೬. ನಿತ್ಯನಾಗಿರುವ, ಸತ್ತ್ವರಜಸ್ತಮಸ್ಸುಗಳೆಂಬ ಮೂರು ಗುಣಗಳ ಉಪಾಧಿಯುಳ್ಳ, ತ್ರಿಪುರನಾಶಕನಾದ, ಪಾರ್ವತಿಗೆ ಶ್ರೇಯಃ ಫಲವಾಗಿರುವ, ಸತ್ಯಸ್ವರೂಪನಾದ, ಜಗತ್ತಿಗೆಲ್ಲ ಆದಿಕುಟುಂಬಿಯಾಗಿರುವ, ಮುನಿಗಳ ಮನಸ್ಸಿಗೆ ಗೋಚರವಾಗುವ, ಚಿನ್ಮೂರ್ತಿಯಾಗಿರುವ ಮಾಯೆಯಿಂದ ಮೂರುಲೋಕಗಳನ್ನೂ ಸೃಷ್ಟಿಸಿರುವ, ಸಕಲವೇದಾಂತಗಳಲ್ಲಿಯೂ ಸಂಚರಿಸುವನಾಗಿರುವ, ಸಾಯಂಕಾಲದಲ್ಲಿ ನರ್ತನದಲ್ಲಿ ತೊಡಗಿರುವ ಜಟಾಧರನಾದ ಶಂಭುವಿಗೆ ಈ ನಮಸ್ಕಾರ.

### ವಿವರಣೆ

ಈ ಶ್ಲೋಕಗಳಲ್ಲಿರುವ ವಿಶೇಷಣಗಳ ಅಭಿಪ್ರಾಯವನ್ನು ಮನಸ್ಸಿನಲ್ಲಿ

ಹೊರಳಾಡಿಸಬೇಕು. ಈ ಎರಡು ಪದ್ಯಗಳಲ್ಲಿಯೂ ಕೊನೆಯ ಪಾದವು ಒಂದೇ ಆಗಿರುತ್ತದೆ. ಆ ಪಾದಪನ್ನು ಹೇಳುವಾಗ ತನ್ನ ಮುಂದೆಯೇ ಪರಮೇಶ್ವರನು ಇರುವಂತೆ ಮನಸ್ಸಿನಲ್ಲಿ ಕಲ್ಪಿಸಿಕೊಂಡು ಪರಮೇಶ್ವರನ ಮಹಿಮೆಯನ್ನು ಮನದಂದುಕೊಳ್ಳಬೇಕು. ಅದರಿಂದ ಮನಸ್ಸಿನಲ್ಲಿ ಹರ್ಷವಾಗುವದು; ಪಾಪವಾಸನೆಯು ಬಿಟ್ಟು ಹೋಗುವದು. ಈಶ್ವರನು ಶಾಸ್ತ್ರಗಮ್ಯನಾಗಿದ್ದರೂ ಭಕ್ತರಿಗೆ ಪ್ರತ್ಯಕ್ಷನಾಗಿ ಅವರ ಇಷ್ಟಾರ್ಥಗಳನ್ನು ಕೊಡಲು ಈಗಲೂ ಸಿದ್ಧನಾಗಿದಾನೆಂಬ ಧೈರ್ಯವು ಮನಸ್ಸಿನಲ್ಲಿ ಬೇರೂರುವದು. ಪ್ರತಿಯೊಂದು ಸಾಯಂಕಾಲವೂ ಈ ಶ್ಲೋಕಗಳನ್ನು ಭಾವಪೂರ್ವಕವಾಗಿ ಹೇಳಿಕೊಳ್ಳಬೇಕು.

**ನಿತ್ಯಂ ಸ್ವೋದರಪೂರಣಾಯ ಸಕಲಾನುದ್ದಿಶ್ಯ ವಿತ್ತಾಶಯಾ**
**ವ್ಯರ್ಥಂ ಪರ್ಯಟನಂ ಕರೋಮಿ ಭವತಃ ಸೇವಾಂ ನ ಜಾನೇ ವಿಭೋ ।**
**ಮಜ್ಜನ್ಮಾನ್ತರಪುಣ್ಯಪಾಕಬಲತಸ್ತ್ವಂ ಶರ್ವ ಸರ್ವಾಂತರ-**
**ಸ್ತಿಷ್ಠಸ್ಯೇವ ಹಿ ತೇನ ವಾ ಪಶುಪತೇ ತೇ ರಕ್ಷಣೀಯೋಽಸ್ಮ್ಯಹಮ್ ।೫೭।**

೫೭. ವ್ಯಾಪಕನಾದ ಶಿವನೆ, ನಿತ್ಯವೂ ನನ್ನ ಹೊಟ್ಟೆಯನ್ನು ತುಂಬಿಕೊಳ್ಳುವದಕ್ಕಾಗಿ ಧನದ ಆಶೆಯಿಂದ ಎಲ್ಲರನ್ನೂ ಕುರಿತು ಸುಮ್ಮನೆ ಸುತ್ತಾಡುತ್ತಿರುವೆನು. ನಿನ್ನ ಸೇವೆಯನ್ನು ತಿಳಿಯದೆ ಇರುವೆನು. ನನ್ನ ಜನ್ಮಾಂತರದ ಪುಣ್ಯವು ಪರಿಪಕ್ವವಾದದ್ದರ ಬಲದಿಂದ ಎಲ್ಲಕ್ಕೂ ಒಳಗಿರುವವನಾಗಿ ಎಲೈ ಶರ್ವನೆ, ನೀನು ಇದ್ದೇ ಇರುತ್ತೀಯೆ! ಇದರಿಂದಲಾದರೂ, ಪಶುಪತಿಯೆ, ನಿನಗೆ ನಾನು ರಕ್ಷಣೀಯನಾಗಿರುತ್ತೇನೆ.

### ವಿವರಣೆ

ಹೊಟ್ಟೆಯ ಪಾಡಿಗಾಗಿ ನಾನು ಧನವಂತರನ್ನು ಕುರಿತು ಮನೆಮನೆಗೂ ಅಲೆದಾಡುತ್ತಾ ಸುತ್ತುತ್ತಿರುವೆನೇ ಹೊರತು ಪರಮೇಶ್ವರನ ಸೇವೆಗೆ ಮನಸ್ಸನ್ನು ಹಾಕಿರುವದಿಲ್ಲ. ಹೀಗಿರುವದರಿಂದ ಈ ಜನ್ಮದಲ್ಲಿ ಮಾಡಿರುವ ಯಾವ ಪುಣ್ಯ ಫಲವೂ ನನ್ನನ್ನು ಕಾಪಾಡುವಂತಿಲ್ಲ. ಆದರೆ ಈಶ್ವರನು ಸರ್ವಾಂತರ್ಯಾಮಿಯಾದ್ದರಿಂದ ನನ್ನೊಳಗೂ ಇದ್ದೇ ಇರುತ್ತಾನೆ; ಪಶುಪತಿಯಾಗಿರುವದರಿಂದ ಪಶುಗಳಾದ ಜೀವರನ್ನೆಲ್ಲ ಕಾಪಾಡುತ್ತಾ ಅವರಿಗೆ ಹಿತವನ್ನು ಕೋರುವದೇ ಅವನ ಸ್ವಭಾವವಾಗಿರುತ್ತದೆ. ನಾನು ಹಿಂದೆ ಯಾವ ಜನ್ಮದಲ್ಲಿಯಾದರೂ ಏನಾದರೂ ಪುಣ್ಯವನ್ನು ಮಾಡಿದ್ದರೆ, ಅದು ಪಕ್ವವಾಗಿರುವದಾದರೆ ಸರ್ವಜ್ಞನೂ ಕರುಣಾನಿಧಿಯೂ ಆಗಿರುವ ಅವನೇ ನನ್ನನ್ನು ಕಾಪಾಡಬೇಕಾಗಿದೆ- ಎಂದು ಕವಿಯು ಇಲ್ಲಿ ಹೇಳಿಕೊಂಡಿರುತ್ತಾನೆ.

ಎಂಥ ಪಾಪಿಗಳಾದರೂ ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯಲೇಶವಿದ್ದರೂ ಅದನ್ನು ನೆಪಮಾಡಿಕೊಂಡು ಶಿವನು ನಮ್ಮನ್ನು ಕಾಪಾಡುತ್ತಾನೆ. ಇನ್ನು ಮನಃಪೂರ್ವಕವಾಗಿ ಆತನನ್ನೇ ಸೇವಿಸುವದಕ್ಕೆ ಹೊರಟಿರುವ ಪುಣ್ಯವಂತರಾದ ಭಕ್ತರನ್ನು ಅವನು ರಕ್ಷಿಸುವನೆಂಬುದರಲ್ಲಿ ಸಂಶಯವೇನು?- ಎಂಬುದು ಭಾವವು.

**ಏಕೋ ವಾರಿಜಬಾನ್ಧವಃ ಕ್ಷಿತಿನಭೋವ್ಯಾಪ್ತಂ ತಮೋಮಣ್ಡಲಂ**
**ಭಿತ್ತ್ವಾ ಲೋಚನಗೋಚರೋಽಪಿ ಭವತಿ ತ್ವಂ ಕೋಟಿಸೂರ್ಯಪ್ರಭಃ ।**
**ವೇದ್ಯಃ ಕಿಂ ನ ಭವಸ್ಯಹೋ ಘನತರಂ ಕೀದೃಗ್ಭವೇನ್ಮತ್ತಮ-**
**ಸ್ತತ್ಸರ್ವಂ ವ್ಯಪನೀಯ ಮೇ ಪಶುಪತೇ, ಸಾಕ್ಷಾತ್ ಪ್ರಸನ್ನೋ ಭವ ।೫೮।**

೫೮. ಪಶುಪತಿಯೆ, ಒಬ್ಬ ಸೂರ್ಯನೇ ಭೂಮ್ಯಾಕಾಶಗಳನ್ನು ವ್ಯಾಪಿಸಿಕೊಂಡಿರುವ ಕತ್ತಲೆಯ ರಾಶಿಯನ್ನು ಭೇದಿಸಿ ಕಂಗಳಿಗೆ ಪ್ರತ್ಯಕ್ಷನೂ ಆಗುತ್ತಿದಾನೆ. ಕೋಟಿಸೂರ್ಯಪ್ರಕಾಶನಾದ ನೀನು ಏತಕ್ಕೆ ನನಗೆ ವೇದ್ಯನಾಗಿರುವದಿಲ್ಲ? ಆಹಾ! ನನ್ನ ತಮಸ್ಸು ಎಷ್ಟು ನಿಬಿಡತರವಾಗಿರಬಹುದು! ಅದೆಲ್ಲವನ್ನೂ ತೊಲಗಿಸಿ, ನನಗೆ ನೇರಾಗಿ ಪ್ರಸನ್ನನಾಗು!

### ವಿವರಣೆ

ಪರಮಾತ್ಮನನ್ನು ಕೋಟಿಸೂರ್ಯಪ್ರಕಾಶನೆನ್ನುವರು. ಆದ್ದರಿಂದ ಅಂಥವನೂ ನನಗೆ ಕಾಣಿಸದೆ ಇರಬೇಕಾದರೆ, ನನ್ನ ಪಾಪರಾಶಿಯು ಬಹಳವಾಗಿ ಹೆಚ್ಚಾಗಿರಬೇಕು. ಆದ್ದರಿಂದ ಬರಿಯ ನನ್ನ ಪ್ರಯತ್ನವೇ ಸಾಲದು. ಆತನೇ ಕರುಣೆಯಿಂದ ಪಾಪವನ್ನೆಲ್ಲ ಹೋಗಲಾಡಿಸಿ ನನ್ನನ್ನು ಅನುಗ್ರಹಿಸಬೇಕು ಎಂದು ನಮ್ರನಾಗಿ ಆತನಿಗೆ ಶರಣುಹೋಗಬೇಕು.

**ಹಂಸಃ ಪದ್ಮವನಂ ಸಮಿಚ್ಛತಿ ಯಥಾ ನೀಲಾಮ್ಬುದಂ ಚಾತಕಃ**
**ಕೋಕಃ ಕೋಕನದಪ್ರಿಯಂ ಪ್ರತಿದಿನಂ ಚನ್ದ್ರಂ ಚಕೋರಸ್ತಥಾ ।**
**ಚೇತೋ ವಾಞ್ಛತಿ ಮಾಮಕಂ ಪಶುಪತೇ ಚಿನ್ಮಾರ್ಗಮೃಗ್ಯಂ**
**ವಿಭೋಗೌರೀನಾಥ ಭವತ್ಪದಾಬ್ಜಯುಗಲಂ ಕೈವಲ್ಯಸೌಖ್ಯಪ್ರದಮ್ ॥೫೯॥**

೫೯. ಪಶುಪತಿಯೆ, ವಿಭುವೆ, ಪಾರ್ವತೀಪತಿಯೆ, ಹಂಸವು ಕಮಲವನ್ನು ಹೇಗೆ ಬಯಸುತ್ತಿರುವದೋ, ಚಾತಕವು ನೀಲಮೇಘನನ್ನು ಹೇಗೆ ಬಯಸುತ್ತಿರುವದೋ, ಚಕ್ರವಾಕವು ಹೇಗೆ ಸೂರ್ಯನನ್ನು ಬಯಸುತ್ತಿರುವದೋ,

ಚಕೋರವು ಪ್ರತಿದಿನವೂ ಹೇಗೆ ಚಂದ್ರನನ್ನೇ ಬಯಸುತ್ತಿರುವದೋ, ಹಾಗೆ ನನ್ನ ಚಿತ್ತವು ಮೋಕ್ಷಾನಂದವನ್ನು ಕೊಡುವದಾದ ಜ್ಞಾನಮಾರ್ಗದಿಂದ ಹುಡುಕಿ ಕಂಡುಕೊಳ್ಳಬೇಕಾಗಿರುವ ನಿನ್ನ ಪಾದಕಮಲಯುಗ್ಮವನ್ನು ಇಚ್ಛಿಸುತ್ತಿದೆ.

### ವಿವರಣೆ

ಹಂಸವೇ ಮೊದಲಾದವು ಕಮಲವನವೇ ಮುಂತಾದವುಗಳನ್ನು ಎಡೆಬಿಡದೆ ಹೇಗೆ ಬಯಸುತ್ತಿರುವವೋ ಹಾಗೆಯೇ ಯಾವನ ಮನಸ್ಸು ಪರಮೇಶ್ವರಪ್ರಾಪ್ತಿಗಾಗಿಯೇ ಹಂಬಲಿಸುತ್ತಿರುವದೋ ಅಂಥವನಿಗೆ ಮಾತ್ರ ಭಗವತ್ಪ್ರಾಪ್ತಿಯಾಗುತ್ತದೆ. 'ಯಮೇವೈಷ ವೃಣುತೇ ತೇನ ಲಭ್ಯಃ'- ಯಾವನನ್ನೇ ಈ ಸಾಧಕನು ಬಯಸುತ್ತಿರುವನೋ ಆ ಸಾಧನದಿಂದಲೇ ಅವನು ಸಿಕ್ಕುತ್ತಾನೆ - ಎಂಬ ಶ್ರುತಿಯು ಆ ಅಭಿಪ್ರಾಯವನ್ನು ಹೇಳುತ್ತಿರುವದು.

**ರೋಧಸ್ತೋಯಹೃತಃ ಶ್ರಮೇಣ ಪಥಿಕಶ್ಛಾಯಾ ತರೋರ್ವೃಷ್ಟಿತಃ**
**ಭೀತಃ ಸ್ವಸ್ಥಗೃಹಂ ಗೃಹಸ್ಥಮತಿಥಿರ್ದೀನಃ ಪ್ರಭುಂ ಧಾರ್ಮಿಕಮ್ ।**
**ದೀಪಂ ಸಂತಮಸಾಕುಲಶ್ಚ ಶಿಖಿನಂ ಶೀತಾವೃತಸ್ತ್ವಂ ತಥಾ**
**ಚೇತಃ ಸರ್ವಭಯಾಪಹಂ ವ್ರಜ ಸುಖಂ ಶಮ್ಭೋಃ ಪದಾಮ್ಭೋರುಹಮ್ ॥**

೬೦. ಚಿತ್ತವೇ, ನೀರಡಿಕೆಯುಳ್ಳವನು ನದಿಯ ದಂಡೆಯನ್ನು ಹೇಗೆ ಆಶ್ರಯಿಸುವನೋ, ದಾರಿಹೋಕನು ಶ್ರಮದಿಂದ ಮರದ ನೆರಳನ್ನು ಹೇಗೆ ಆಶ್ರಯಿಸುವನೋ, ಮಳೆಯಿಂದ ಅಂಜಿದವನು ಸರಿಯಾಗಿರುವ ಮನೆಯನ್ನು ಹೇಗೆ ಬಯಸುವನೋ, ಅತಿಥಿಯು ಗೃಹಸ್ಥನನ್ನೂ, ದೀನನಾದವನು ಧಾರ್ಮಿಕನಾದ ರಾಜನನ್ನೂ ಹೇಗೆ ಬಯಸುವರೋ, ಕತ್ತಲೆಯಿಂದ ಸಂಕಟಪಡುತ್ತಿರುವಾತನು ದೀಪವನ್ನು ಹೇಗೆ ಬಯಸುವನೋ, ಚಳಿಯಿಂದ ಸುತ್ತುವರಿಯಲ್ಪಟ್ಟಿರುವವನು ಬೆಂಕಿಯನ್ನು ಹೇಗೆ ಬಯಸುವನೋ, ಹಾಗೆ ಸರ್ವಭಯವನ್ನೂ ನೀಗುವ ಶಂಭುವಿನ ಕರಕಮಲವನ್ನು ಸೇರಿಕೊ, ಸುಖವನ್ನು ಹೊಂದು.

### ವಿವರಣೆ

ಸಕಲಕಷ್ಟಗಳಿಗೂ ನಿವಾರಕವಾದದ್ದು ಶಿವಪ್ರಾಪ್ತಿ.

**ಅಙ್ಕೋಲಂ ನಿಜಬೀಜಸನ್ತತಿರಯಸ್ಕಾನ್ತೋಪಲಂ ಸೂಚಿಕಾ**
**ಸಾಧ್ವೀ ನೈಜವಿಭುಂ ಲತಾ ಕ್ಷಿತಿರುಹಂ ಸಿನ್ಧುಃ ಸರಿದ್ವಲ್ಲಭಮ್ ।**
**ಪ್ರಾಪ್ನೋತೀಹ ಯಥಾ ತಥಾ ಪಶುಪತೇಃ ಪಾದಾರವಿನ್ದದ್ವಯಂ**
**ಚೇತೋವೃತ್ತಿರುಪೇತ್ಯ ತಿಷ್ಠತಿ ಸದಾ ಸಾ ಭಕ್ತಿರಿತ್ಯುಚ್ಯತೇ ॥೬೧॥**

೬೧. ಅಂಕೋಲವೃಕ್ಷವನ್ನು ಅದರ ಬೀಜಗಳ ಸಮೂಹವೂ, ಅಯಸ್ಕಾಂತಶಿಲೆಯನ್ನು ಸೂಜಿಯೂ, ತನ್ನ ಪತಿಯನ್ನು ಪತಿವ್ರತೆಯೂ, ಮರವನ್ನು ಬಳ್ಳಿಯೂ, ಸಮುದ್ರವನ್ನು ನದಿಯೂ ಹೇಗೆ ಸೇರುವರೋ ಹಾಗೆ ಪಶುಪತಿಯ ಪಾದಾರವಿಂದಯುಗಲವನ್ನು ಚಿತ್ತವೃತ್ತಿಯು ಸಮೀಪಿಸಿ ಯಾವಾಗಲೂ ನಿಲ್ಲುವದಾದರೆ ಅಂಥ ವೃತ್ತಿಯು ಭಕ್ತಿ ಎನಿಸುತ್ತದೆ.

### ವಿವರಣೆ

ಸಂತತವಾಗಿ ಶಿವನ ಧ್ಯಾನದಲ್ಲಿಯೇ ನಿರತವಾಗಿರುವ ಪ್ರೇಮಯುಕ್ತ ಚಿತ್ತವೃತ್ತಿಯೇ ಭಕ್ತಿ ಎಂದರ್ಥ.

**ಆನನ್ದಾಶ್ರುಭಿರಾತನೋತಿ ಪುಲಕಂ ನೈರ್ಮಲ್ಯತಶ್ಛಾದನಂ**
**ವಾಚಾಶಙ್ಖಮುಖೇ ಸ್ಥಿತೈಶ್ಚ ಜಠರಾಪೂರ್ತಿಂ ಚರಿತ್ರಾಮೃತೈಃ ।**
**ರುದ್ರಾಕ್ಷೈರ್ಭಸಿತೇನ ದೇವ, ವಪುಷೋ ರಕ್ಷಾಂ ಭವದ್ಭಾವನಾ-**
**ಪರ್ಯಙ್ಕೇ ವಿನಿವೇಶ್ಯ ಭಕ್ತಿಜನನೀ ಭಕ್ತಾರ್ಭಕಂ ರಕ್ಷತಿ ॥೬೨॥**

೬೨. ದೇವನೆ, ಭಕ್ತಿ ಎಂಬ ತಾಯಿಯು ಭಕ್ತನೆಂಬ ಮಗುವನ್ನು ರಕ್ಷಿಸುವ ಪರಿಯಿದು. ಆನಂದಬಾಷ್ಪಗಳಿಂದ ರೋಮಾಂಚವನ್ನುಂಟುಮಾಡುತ್ತದೆ. ವಾಕ್ಕೆಂಬ ಶಂಖದ ಬಾಯಿಯಲ್ಲಿರುವ ಚರಿತ್ರಾಮೃತಗಳಿಂದ- ಎಂದರೆ ನಿನ್ನ ಚಾರಿತ್ರ್ಯಕಥನದ ಹಾಲುಗಳಿಂದ- ಹೊಟ್ಟೆಯನ್ನು ತುಂಬಿಸುತ್ತದೆ; ರುದ್ರಾಕ್ಷಗಳಿಂದಲೂ ಭಸ್ಮದಿಂದಲೂ ದೇಹರಕ್ಷಣೆಯನ್ನು ಮಾಡುತ್ತದೆ; ನಿನ್ನ ಧ್ಯಾನವೆಂಬ ಮಂಚದಲ್ಲಿಟ್ಟು ಕಾಪಾಡುತ್ತದೆ.

### ವಿವರಣೆ

ತಾಯಿ ಹೇಗೆ ಮಗುವಿನ ಯೋಗಕ್ಷೇಮವನ್ನು ಎಲ್ಲ ಬಗೆಯಿಂದಲೂ ನೋಡಿಕೊಳ್ಳುವಳೋ ಹಾಗೆ ಈಶ್ವರಭಕ್ತಿಯು ಭಕ್ತನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತದೆ.

**ಮಾರ್ಗಾವರ್ತಿತಪಾದುಕಾ ಪಶುಪತೇರಙ್ಗಸ್ಯ ಕೂರ್ಚಾಯತೇ**
**ಗಣ್ಡೂಷಾಮ್ಬುನಿಷೇಚನಂ ಪುರರಿಪೋರ್ದಿವ್ಯಾಭಿಷೇಕಾಯತೇ ।**
**ಕಿಞ್ಚಿದ್ಭಕ್ಷಿತಮಾಂಸಶೇಷಕಬಳಂ ನವ್ಯೋಪಹಾರಾಯತೇ**
**ಭಕ್ತಿಃ ಕಿಂ ನ ಕರೋತ್ಯಹೋ ವನಚರೋ ಭಕ್ತಾವತಂಸಾಯತೇ ॥೬೩॥**

೬೩. ದಾರಿಯಲ್ಲಿ ಸುತ್ತಾಡಿದ ಪಾದರಕ್ಷೆಯು ಪಶುಪತಿಯ ಶರೀರಕ್ಕೆ ಕೂರ್ಚವಾಗುತ್ತದೆ. ಬಾಯಲ್ಲಿ ತುಂಬಿದ ನೀರಿನ ಉಗುಳುವಿಕೆಯೇ ದಿವ್ಯಾಭಿಷೇಕವಾಗುತ್ತದೆ; ಸ್ವಲ್ಪ ತಿಂದು ಉಳಿದ ಮಾಂಸದ ತುತ್ತು ಶಿವನ ನೈವೇದ್ಯವಾಗುತ್ತದೆ. ಆಹಾ! ಭಕ್ತಿಯು ಏನನ್ನು ಮಾಡಲಾರದು? ಬೇಡರವನು ಭಕ್ತನಾಗುತ್ತಾನೆ!

### ವಿವರಣೆ

ಒಬ್ಬ ಬೇಡರವನು ಅರಣ್ಯದಲ್ಲಿದ್ದ ಒಂದು ಈಶ್ವರವಿಗ್ರಹವನ್ನು ಕಂಡು ನದಿಯ ನೀರನ್ನು ಬಾಯಲ್ಲಿ ತುಂಬಿಕೊಂಡು ಬಂದು ಅದನ್ನು ಉಗುಳಿ ಅಭಿಷೇಕ ಮಾಡಿಸುತ್ತಿದ್ದನು. ತಾನು ತಿಂದು ಮಿಕ್ಕಿದ್ದ ಮಾಂಸವನ್ನು ದೇವರಿಗೆ ನೈವೇದ್ಯವಾಗಿ ಕೊಡುತ್ತಿದ್ದನು. ಒಮ್ಮೆ ಅವನು ಪೂಜೆಗೆ ಬಂದಾಗ ದೇವರ ಕಣ್ಣಿನಿಂದ ನೀರು ಸುರಿಯುತ್ತಿದ್ದದ್ದನ್ನು ಕಂಡು ಬಹಳ ದುಃಖದಿಂದ ತನ್ನ ಕಣ್ಣನ್ನು ಕುಡುಗೋಲಿನಿಂದ ಕಿತ್ತು ದೇವರ ಕಣ್ಣಿಗೆ ಜೋಡಿಸಲು ಅದು ಅಲ್ಲಿಯೇ ನಿಂತುಕೊಂಡಿತು; ಮಾರನೆಯ ದಿನ ಬಂದು ನೋಡಲು ದೇವರ ಇನ್ನೊಂದು ಕಣ್ಣೂ ಒಡೆದು ನೀರು ಸುರಿಯುತ್ತಿರುವದನ್ನು ಕಂಡು, ಕಣ್ಣನ್ನು ಗುರ್ತಿಸುವದಕ್ಕಾಗಿ ತನ್ನ ಎಕ್ಕಡವನ್ನು ದೇವರ ಭ್ರೂಮಧ್ಯದಲ್ಲಿಟ್ಟು ಕೊಂಡು ತನ್ನ ಇನ್ನೊಂದು ಕಣ್ಣನ್ನೂ ಕಿತ್ತು ದೇವರಿಗೆ ಅರ್ಪಿಸುವೆನೆಂದು ಪ್ರಯತ್ನಿಸುತ್ತಿರುವಲ್ಲಿ ಈಶ್ವರನು ಅವನ ದೃಢನಿಶ್ಚಯಕ್ಕೆ ಮೆಚ್ಚಿ ಪ್ರತ್ಯಕ್ಷನಾಗಿ, ನಿನ್ನನ್ನು ಪ್ರಮಥಗಣಗಳಲ್ಲಿ ಸೇರಿಸಿರುತ್ತೇನೆ ಎಂದು ವರವನ್ನು ಕೊಟ್ಟನಂತೆ. ಈ ಬೇಡರ ಕಣ್ಣಪ್ಪನ ಕಥೆಯು ಕಾಳಹಸ್ತಿಕ್ಷೇತ್ರದ ಮಾಹಾತ್ಮ್ಯೆಯಲ್ಲಿದೆಯಂತೆ.

ಈ ಸಂದರ್ಭದಲ್ಲಿ ಉಗುಳಿದ ನೀರು, ಉಚ್ಛಿಷ್ಟಮಾಂಸ - ಇವುಗಳ ಅಶುಚಿತ್ವವನ್ನು

ಮರೆತು ಭಕ್ತಿಯ ಹೃದಯವನ್ನು ಮಾತ್ರ ಲಕ್ಷ್ಯದಲ್ಲಿಟ್ಟು ಈಶ್ವರನು ಬೇಡರವನಿಗೆ ಸಾಲೋಕ್ಯವನ್ನು ಇತ್ತನಲ್ಲವೆ? ಭಕ್ತಿಯಿಂದ ಎಂಥವನೂ ಪರಮೇಶ್ವರನ ಮೆಚ್ಚಿಕೆಗೆ ಪಾತ್ರನಾಗುವನೆಂದು ಇದರಿಂದ ಸಿದ್ಧವಾಗುತ್ತದೆ. ಶಾಸ್ತ್ರವಿಧಿಯನ್ನು ತಿಳಿದವರೂ ಹೀಗೆ ಅಮಾರ್ಗದಿಂದ ಪೂಜಿಸಬೇಕೆಂಬುದು ಇಲ್ಲಿ ವಿವಕ್ಷಿತವಲ್ಲ; ಹೇಗಾದರೂ ಭಕ್ತಿಯನ್ನು ಸಂಪಾದಿಸಿಕೊಳ್ಳಬೇಕೆಂಬುದೇ ಅಭಿಪ್ರಾಯ.

**ವಕ್ಷಸ್ತಾಡನಮನ್ತಕಸ್ಯ ಕಠಿನಾಪಸ್ಮಾರಸಂಮರ್ದನಂ**
**ಭೂಭೃತ್ಪರ್ಯಟನಂ ನಮತ್ಸುರಶಿರಃಕೋಟೀರಸಂಘರ್ಷಣಮ್ ।**
**ಕರ್ಮೇದಂ ಮೃದುಲಸ್ಯ ತಾವಕಪದದ್ವಂದ್ವಸ್ಯ ಗೌರೀಪತೇ**
**ಮಚ್ಚೇತೋಮಣಿಪಾದುಕಾವಿಹರಣಂ ಶಮ್ಭೋ ಸದಾಙ್ಗೀಕುರು ॥೬೪॥**

೬೪. ಗೌರೀಪತಿಯಾದ ಪರಮೇಶ್ವರನೆ, ಶಂಭುವೆ, ಯಮನ ಎದೆಯನ್ನು ಒದೆಯುವದು, ಕಠಿನವಾದ ಅಪಸ್ಮಾರಾಸುರನನ್ನು ಕಾಲಿನಲ್ಲಿ ಹೊಸಕುವಿಕೆ, ಬೆಟ್ಟದಲ್ಲಿ ಸಂಚಾರ, ನಮಸ್ಕರಿಸುವ ದೇವತೆಗಳ ತಲೆಯಮೇಲಿರುವ ಕಿರೀಟಗಳ ತಿಕ್ಕಾಟ - ಈ ಕರ್ಮವು ಮೃದುವಾದ ನಿನ್ನ ಪಾದದ್ವಂದ್ವಕ್ಕೆ ತಕ್ಕದ್ದೆ? ಆದ್ದರಿಂದ ನನ್ನ ಚಿತ್ತವೆಂಬ ರತ್ನಮಯವಾದ ಪಾದುಕೆಯಲ್ಲಿ ಸಂಚರಿಸುತ್ತಿರುವದನ್ನು ಯಾವಾಗಲೂ ಅಂಗೀಕರಿಸು.

### ವಿವರಣೆ

ಈ ಶ್ಲೋಕದಲ್ಲಿ ಪರಮೇಶ್ವರನ ಲೀಲೆಗಳನ್ನು ವರ್ಣಿಸಿದೆ. ಇಂಥ ಕಾರ್ಯಗಳಿಂದ ಪರಮೇಶ್ವರನ ಕೋಮಲಪಾದಕ್ಕೆ ಬಹಳ ನೋವಾಗುತ್ತದೆ; ಆದ್ದರಿಂದ ಭಕ್ತರ ಮೃದುವಾದ ಚಿತ್ತವನ್ನು ಪಾದರಕ್ಷೆಯಾಗಿ ಉಪಯೋಗಿಸಿಕೊಳ್ಳುತ್ತಿರುವನು ಎಂದು ಕಲ್ಪಿಸಿದೆ. ಇಲ್ಲಿ 'ಮಣಿಪಾದುಕಾ' ಎಂಬ ಮಾತನ್ನು ಶ್ರೇಷ್ಠವಾದ ಪಾದರಕ್ಷೆ ಎಂಬರ್ಥದಲ್ಲಿ ಮಾತ್ರ ತೆಗೆದುಕೊಳ್ಳಬೇಕು.

**ವಕ್ಷಸ್ತಾಡನಶಙ್ಕಯಾ ವಿಚಲಿತೋ ವೈವಸ್ವತೋ ನಿರ್ಜರಾಃ**
**ಕೋಟೀರೋಜ್ಜ್ವಲರತ್ನದೀಪಕಲಿಕಾನೀರಾಜನಂ ಕುರ್ವತೇ ।**
**ದೃಷ್ಟ್ವಾ ಮುಕ್ತಿವಧೂಸ್ತನೋತಿ ನಿಭೃತಾಶ್ಲೇಷಂ ಭವಾನೀಪತೇ**
**ಯಚ್ಚೇತಸ್ತವ ಪಾದಪದ್ಮಭಜನಂ ತಸ್ಯೇಹ ಕಿಂ ದುರ್ಲಭಮ್ ॥೬೫॥**

೬೫. ಪಾರ್ವತೀಪತಿಯೆ, ಯಾವನ ಚಿತ್ತವು ನಿನ್ನ ಪಾದಕಮಲವನ್ನು

ಭಜಿಸುತ್ತಿರುವದೋ ಅವನನ್ನು ಕಂಡು ಯಮನು ತನ್ನ ಎದೆಯ ಮೇಲೆ ಒದೆಯುವನೆಂಬ ಶಂಕೆಯಿಂದ ಓಡಿಹೋಗುತ್ತಾನೆ; ದೇವತೆಗಳು ಕಿರೀಟಗಳಲ್ಲಿ ಹೊಳೆಯುತ್ತಿರುವ ರತ್ನಗಳೆಂಬ ದೀಪಗಳ ಕುಡಿಗಳಿಂದ ಆರತಿಯನ್ನು ಮಾಡುವರು; ಮುಕ್ತಿಸ್ತ್ರೀಯು ಗಾಢಾಲಿಂಗನವನ್ನು ಮಾಡುತ್ತಾಳೆ. ಆವನಿಗೆ ಈ ಲೋಕದಲ್ಲಿ ದುರ್ಲಭವಾದದ್ದು ಯಾವದಿರುವದು?

## ವಿವರಣೆ

ಶಿವಪಾದಭಕ್ತನಿಗೆ ಯಾವ ಭೀತಿಯೂ ಇರುವದಿಲ್ಲ. ಸ್ವರ್ಗವೂ ಮುಕ್ತಿಯೂ ವಶವಾಗಿರುತ್ತವೆ.

**ಕ್ರೀಡಾರ್ಥಂ ಸೃಜಸಿ ಪ್ರಪಞ್ಚಮಖಿಲಂ ಕ್ರೀಡಾಮೃಗಾಸ್ತೇ ಜನಾಃ**
**ಯತ್ಕರ್ಮಾಚರಿತಂ ಮಯಾ ಚ ಭವತಃ ಪ್ರೀತ್ಯೈ ಭವತ್ಯೇವ ತತ್ ।**
**ಶಮ್ಭೋ ಸ್ವಸ್ಯ ಕುತೂಹಲಸ್ಯ ಕರಣಂ ಮಚ್ಚೇಷ್ಟಿತಂ ನಿಶ್ಚಿತಂ**
**ತಸ್ಮಾನ್ಮಾಮಕರಕ್ಷಣಂ ಪಶುಪತೇ ಕರ್ತವ್ಯಮೇವ ತ್ವಯಾ ॥೬೬॥**

೬೬. ಶಂಭುವೆ, ಪ್ರಪಂಚವನ್ನೆಲ್ಲ ಕ್ರೀಡೆಗಾಗಿ ಸೃಷ್ಟಿಸುತ್ತಿರುವೆ. ಜನರು ನಿನ್ನ ಕ್ರೀಡಾಮೃಗಗಳು; ಆದ್ದರಿಂದ ನಾನು ಮಾಡಿರುವ ಕರ್ಮವೂ ನಿನ್ನ ಪ್ರೀತಿಯನ್ನುಂಟುಮಾಡುವದಾಗಿಯೇ ತೀರುವದು. ಆದ್ದರಿಂದ ಪಶುಪತಿಯೆ, ನೀನು ನನ್ನ ರಕ್ಷಣೆಯನ್ನೂ ಅವಶ್ಯವಾಗಿ ಮಾಡತಕ್ಕದ್ದಾಗಿದೆ.

## ವಿವರಣೆ

ಪರಮೇಶ್ವರನಿಗೆ ಈ ವಿಚಿತ್ರಪ್ರಪಂಚವನ್ನು ಸೃಷ್ಟಿಮಾಡುವದರಿಂದ ಆಗಬೇಕಾದ ಪ್ರಯೋಜನವು ಯಾವದೂ ಇರುವದಿಲ್ಲ. ಆದ್ದರಿಂದ ಆತನು ಕೇವಲ ತನ್ನ ಲೀಲೆಗೆಂದೇ ಇದನ್ನು ಸೃಷ್ಟಿಸಿರುವನು. ಇಲ್ಲಿ ಹುಟ್ಟಿರುವ ಜೀವರುಗಳು ತಮ್ಮತಮ್ಮ ವಿವಿಧ ಸ್ವಭಾವಕ್ಕನು ಸಾರವಾಗಿ ಏನೇನು ಮಾಡಿದರೂ ಅದರಿಂದ ಆತನಿಗೆ ವಿನೋದವೇ ಆಗುವದೆನ್ನುವದು ಯುಕ್ತ. ಆದ್ದರಿಂದ ನಾವು ಮಾಡುವ ಯಾವ ಕರ್ಮದಿಂದ ಆತನಿಗೆ ಏನು ಅಸಮಾಧಾನ ವಾಗುವದೋ- ಎಂದು ಅಂಜಬಾರದು. ಸರ್ಕಸ್ ಮುಂತಾದ ಆಟಗಳಲ್ಲಿರುವ ಸಿಂಹ, ಹುಲಿ, ಕರಡಿ. ಕಪಿಗಳು- ಮುಂತಾದ ಬಗೆಬಗೆಯ ಮೃಗಗಳನ್ನು ಆಟಕ್ಕಾಗಿ ಜನರು ಉಪಯೋಗಿಸಿಕೊಂಡು ಸಂತೋಷಪಡುವಂತೆ, ಆತನೂ ಅವಶ್ಯವಾಗಿ ನಮ್ಮ ಕರ್ಮಗಳಿಂದ ವಿನೋದ

ಗೊಳ್ಳುವನು. ನಮಗೆ ನಿಜವಾಗಿ ಯಾವ ಸ್ವಾತಂತ್ರ್ಯವೂ ಇಲ್ಲ, ಆತನೇ ಸರ್ವಸ್ವತಂತ್ರನಾಗಿ ನಮ್ಮನ್ನು ಹೀಗೆ ಆಡಿಸುತ್ತಿರುವನು- ಎಂದು ಶುದ್ಧ ಹೃದಯದಿಂದ ಭಾವಿಸಿಕೊಳ್ಳಬೇಕು. ಆಗ ಇದುವರೆಗೆ ಮಾಡಿದ ಪುಣ್ಯಪಾಪಗಳ ಹೊಣೆಗಾರಿಕೆಯು ನಮಗೆ ತಪ್ಪುವದು. 'ಇನ್ನುಮೇಲೆ ಯಾವ ಕರ್ಮದಲ್ಲಿಯೂ ನಾನು ಸ್ವತಂತ್ರನಾಗಿಲ್ಲ, ಆತನ ಕ್ರೀಡಾಮೃಗವಾಗಿ ಆತನು ಪ್ರೇರಿಸಿದಂತೆ ನಡೆಯುವೆನು' ಎಂಬ ಸದ್ಭಾವನೆಯಿಂದ ಪಾಪವಾಸನೆಯೂ ನಾಶವಾಗುವದು.

**ಬಹುವಿಧಪರಿತೋಷಬಾಷ್ಪಪೂರ-**
**ಸ್ಫುಟಪುಲಕಾಙ್ಕಿತಚಾರುಭೋಗಭೂಮಿಮ್ ।**
**ಚಿರಪದಫಲಕಾಙ್ಕ್ಷಿಸೇವ್ಯಮಾನಾಂ**
**ಪರಮಸದಾಶಿವಭಾವನಾಂ ಪ್ರಪದ್ಯೇ ॥೬೭॥**

೬೭. ಬಲುಬಗೆಯ ಆನಂದಬಾಷ್ಪದ ಕೋಡಿಯು ಎದ್ದು ಕೊಂಡ ಮೈನವಿರುಗಳ ಮನೋಹರವಾದ ಭೋಗಕ್ಕೆ ಸ್ಥಾನವಾಗಿರುವ, ಶಾಶ್ವತವಾದ, ಪುರುಷಾರ್ಥಸ್ಥಾನವನ್ನು ಬಯಸುವವರು ಸೇವಿಸುವದಾಗಿರುವ ಪರಮ ಸದಾಶಿವಭಾವನೆಯನ್ನು ಶರಣುಹೊಂದಿರುತ್ತೇನೆ.

ವಿವರಣೆ

ಪರಶಿವನ ಭಾವನೆಯಲ್ಲಿಯೇ ಮುಳುಗಿರುವಾತನ ಸಾತ್ತ್ವಿಕಹೃದಯದಲ್ಲಿ ಪರಮಾನಂದವೂ ಕಂಗಳಲ್ಲಿ ಆನಂದಬಾಷ್ಪದ ಕೋಡಿಯೂ ಸಂತೋಷದ ಭರದಲ್ಲಿ ಎದ್ದುಕೊಂಡು ತೋರುವ ರೋಮಾಂಚವೂ ಅಡಿಗಡಿಗೆ ತೋರಿಕೊಳ್ಳುತ್ತಿರುವವು. ಇಂಥ ಭಾವಸಮಾಧಿಯಲ್ಲಿಯೇ ಇರುವಾತನಿಗೆ ಪುನರಾವೃತ್ತಿರಹಿತವಾದ ಮೋಕ್ಷವು ಅವಶ್ಯವಾಗಿ ಲಭಿಸುವದು.

**ಅಮಿತಮುದಮೃತಂ ಮುಹುರ್ದುಹನ್ತೀಂ-**
**ವಿಮಲಭವತ್ಪದಗೋಷ್ಠಮಾವಸನ್ತೀಮ್ ।**
**ಸದಯ ಪಶುಪತೇ ಸುಪುಣ್ಯಪಾಕಾಂ**
**ಮಮ ಪರಿಪಾಲಯ ಭಕ್ತಿಧೇನುಮೇಕಾಮ್ ॥೬೮॥**

೬೮. ದಯಾಳುವಾದ ಪಶುಪತಿಯೆ, ಅಮಿತವಾದ ಆನಂದಾಮೃತವನ್ನು ಮತ್ತೆಮತ್ತೆ ಕರೆಯುತ್ತಿರುವ, ನಿರ್ಮಲವಾದ ನಿನ್ನ ಪಾದಗಳೆಂಬ ಕೊಟ್ಟಿಗೆಯಲ್ಲಿ

ವಾಸಮಾಡುತ್ತಿರುವ, ಹೆಚ್ಚಿನ ಪುಣ್ಯದ ಪರಿಪಾಕವಾಗಿರುವ ನನ್ನ ಭಕ್ತಿ ಎಂಬ ಈ ಒಂದು ಗೋವನ್ನು ಕಾಪಾಡು!

### ವಿವರಣೆ

ಒಂಟಿಯಾಗಿರುವ ಹಸುವನ್ನು ನೋಡಿಕೊಳ್ಳಲಾರದೆ ಇರುವಾತನು ಅದನ್ನು ರಕ್ಷಣೆಗೆಂದು ದನಕಾಯುವವನ ಕೊಟ್ಟಿಗೆಯಲ್ಲಿಟ್ಟು ಕಾಲದಲ್ಲಿ ಅದರ ಹಾಲನ್ನು ತಾನೂ ಅನುಭವಿಸುವಂತೆ, ನಮ್ಮ ಭಕ್ತಿಯನ್ನು ನಾವೇ ಕಾಪಾಡಿಕೊಳ್ಳಲಾರವಾದ್ದರಿಂದ ಪರಮೇಶ್ವರನ ರಕ್ಷಣೆಗೇ ಅದನ್ನು ಒಪ್ಪಿಸಿ ಅದರಿಂದಾಗುವ ಸತ್ಫಲವನ್ನು ಅನುಭವಿಸಬಹುದು- ಎಂದು ಕವಿಯು ಇಲ್ಲಿ ತಿಳಿಸಿಕೊಟ್ಟಿರುತ್ತಾನೆ.

**ಜಡತಾ ಪಶುತಾ ಕಲಙ್ಕಿತಾ**
**ಕುಟಿಲಚರತ್ವಂ ಚ ನಾಸ್ತಿ ಮಯಿ ದೇವ ।**
**ಅಸ್ತಿ ಯದಿ ರಾಜಮೌಲೇ**
**ಭವದಾಭರಣಸ್ಯ ನಾಸ್ಮಿ ಕಿಂ ಪಾತ್ರಮ್ ॥೬೯॥**

೬೯. ದೇವನೆ, ಜಡತ್ವವೂ ಪಶುತ್ವವೂ ಕಲಂಕವತ್ತ್ವವೂ ವಕ್ರಗಾಮಿತ್ವವೂ ನನ್ನಲ್ಲಿಲ್ಲ. ಇರುವದಾದರೆ, ಎಲೈ ಚಂದ್ರಶೇಖರನೆ, ನಿನ್ನ ಆಭರಣವಾಗುವದಕ್ಕೆ ನಾನು ಯೋಗ್ಯನಾಗಲಾರೆನೇನು?

### ವಿವರಣೆ

ಜಡತೆ ಎಂದರೆ ಮೌಢ್ಯವು ಮತ್ತು ಜಲಮಯನಾಗಿರುವಿಕೆಯು. ಚಂದ್ರನು ನೀರಿನಲ್ಲಿ ಹುಟ್ಟಿ ಶೀತಕಿರಣನಾಗಿರುತ್ತಾನಾದರೂ ಶಿವನು ಅವನನ್ನು ತಲೆಯ ಮೇಲೆ ಭೂಷಣವಾಗಿಟ್ಟುಕೊಂಡಿರುತ್ತಾನೆ. ಪಶುತ್ವವೆಂದರೆ ಏನೂ ತಿಳಿಯದ ದನವು; ನಂದಿಯು ಪಶುವಿನ ಜಾತಿಯವನಾದರೂ ಈಶ್ವರನು ಅವನನ್ನು ವಾಹನವಾಗಿ ಆರಿಸಿಕೊಂಡಿರುತ್ತಾನೆ. ಕಲಂಕವೆಂದರೆ ದೋಷವು ಮತ್ತು ಚಿಹ್ನವು. ಚಂದ್ರನು ಕಲಂಕಯುಕ್ತನಾಗಿದ್ದರೂ ಈಶ್ವರನಿಗೆ ಆಭರಣವಾಗಿರುತ್ತಾನೆ. ಕುಟಿಲಚರತ್ವವೆಂದರೆ ಋಜುಮಾರ್ಗವಿಲ್ಲದಿರುವದು, ಮತ್ತು ಡೊಂಕು ಡೊಂಕಾಗಿ ಹೋಗುವದು, ಹಾವುಗಳು ಕುಟಿಲಚರಗಳಾದರೂ ಈಶ್ವರನು ಅವನ್ನು ಆಭರಣವಾಗಿಟ್ಟು ಕೊಂಡಿರುತ್ತಾನೆ.

ನನ್ನಲ್ಲಿ ಜಡತ್ವವಾಗಲಿ ಪಶುತ್ವವಾಗಲಿ ಕಲಂಕವಾಗಲಿ ವಕ್ರಗತಿತ್ವವಾಗಲಿ ಇಲ್ಲ.

ಒಂದು ವೇಳೆ ಇದ್ದರೂ ನೀನು ಚಂದ್ರಾದಿಗಳನ್ನು ಆಭರಣವಾಗಿಟ್ಟುಕೊಂಡಿರುವಂತೆ ನನ್ನನ್ನೂ ಸ್ವೀಕರಿಸಿ ಉದ್ಧರಿಸಬೇಕು- ಎಂದು ಶ್ಲೇಷೆಯಿಂದ ಕವಿಯು ಬೇಡಿಕೊಂಡಿರುತ್ತಾನೆ.

**ಅರಹಸಿ ರಹಸಿ ಸ್ವತಂತ್ರಬುದ್ಧ್ಯಾ**
**ಪರಿವಸಿತುಂ ಸುಲಭಃ ಪ್ರಸನ್ನಮೂರ್ತಿಃ ।**
**ಅಗಣಿತಫಲದಾಯಕಃ ಪ್ರಭುರ್ಮೇ**
**ಜಗದಧಿಕೋ ಹೃದಿ ರಾಜಶೇಖರೋಽಸ್ತಿ ॥೭೦॥**

೭೦. ಬಹಿರಂಗವಾಗಿ ಅಥವಾ ರಹಸ್ಯವಾಗಿ ಸ್ವತಂತ್ರವಾದ ಬುದ್ಧಿಯಿಂದ ಸೇವಿಸುವದಕ್ಕೆ ಅನಾಯಾಸವಾಗಿ ದೊರೆಯುತ್ತಿರುವ ಪ್ರಸನ್ನಮೂರ್ತಿಯಾದ, ಲೆಕ್ಕವಿಲ್ಲದಷ್ಟು ಫಲವನ್ನು ಕೊಡುವ ಲೋಕಕ್ಕೆಲ್ಲ ಹೆಚ್ಚಿನ ಪ್ರಭುವಾದ ರಾಜಶೇಖರನು ನನ್ನ ಹೃದಯದಲ್ಲಿರುತ್ತಾನೆ.

### ವಿವರಣೆ

ಲೋಕದಲ್ಲಿ ರಾಜರ ಸೇವೆಯನ್ನು ಮಾಡುವದು ಕಷ್ಟ. ಕೆಲವರು ಹೊರಗೆ ಸೇವೆಮಾಡುವದಕ್ಕೆ ಅವಕಾಶವನ್ನು ಕೊಡುವದಿಲ್ಲ, ಇನ್ನು ಕೆಲವರು ಹೊರಗಿನ ಸೇವೆಯನ್ನು ಕೊಟ್ಟರೂ ಅಂತರಂಗದ ಸೇವೆಗೆ ಸ್ವಾತಂತ್ರ್ಯವನ್ನು ಕೊಡುವುದಿಲ್ಲ. ಇನ್ನು ಕೆಲವರು ಯಾವಾಗಲೂ ಸಿಡುಮೋರೆಯವರಾಗಿರುತ್ತಾರೆ. ಮತ್ತೆ ಕೆಲವರಲ್ಲಿ ಇಂಥ ದುರ್ಗುಣಗಳು ಯಾವವೂ ಇಲ್ಲದಿದ್ದರೂ ಅವರು ಕೊಡುವ ಪ್ರತಿಫಲ ಅತ್ಯಲ್ಪ. ಆದರೆ ಎಲ್ಲರಿಗಿಂತಲೂ ಹೆಚ್ಚಿನವನಾದ ರಾಜಶೇಖರನು, ಚಂದ್ರಶೇಖರನಾದ ಶಿವನು, ತನ್ನ ಸೇವೆಗೆ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾನೆ; ಅವನ ಸೇವೆಯಿಂದ ಅನಂತಫಲವಾದ ಮೋಕ್ಷವೂ ದೊರಕುತ್ತದೆ. ಇಂಥ ರಾಜಶೇಖರನನ್ನು ಎಲ್ಲಿಗೂ ಹುಡುಕಿಕೊಂಡು ಹೋಗಬೇಕಾದದ್ದು ಇಲ್ಲ; ಏಕೆಂದರೆ ಅವನು ನಮ್ಮ ಹೃದಯದೊಳಗೇ ಇದ್ದುಕೊಂಡಿರುತ್ತಾನೆ.

**ಆರೂಢಭಕ್ತಿಗುಣಕುಞ್ಚಿತಭಾವಚಾಪ-**
**ಯುಕ್ತೈಃ ಶಿವಸ್ಮರಣಬಾಣಗಣೈರಮೋಘೈಃ ।**
**ನಿರ್ಜಿತ್ಯ ಕಿಲ್ಬಿಷರಿಪೂನ್ ವಿಜಯೀ ಸುಧೀನ್ದ್ರಃ**
**ಸಾನನ್ದಮಾವಹತಿ ಸುಸ್ಥಿರರಾಜಲಕ್ಷ್ಮೀಮ್ ॥೭೧॥**

೭೧. ವಿವೇಕಿಶ್ರೇಷ್ಠನಾದವನು ಏರಿಸಿದ ಭಕ್ತಿಯೆಂಬ ಬಿಲ್ಲು ಹುರಿಯಿಂದ ಬಗ್ಗಿಸಿದ ಭಾವವೆಂಬ ಬಿಲ್ಲಿಗೆ ಸೇರಿಸಿರುವ ಸಫಲವಾಗುವ ಶಿವಸ್ಮರಣೆಗಳೆಂಬ ಬಾಣಗಳ ಸಮೂಹದಿಂದ ಪಾಪಗಳೆಂಬ ಶತ್ರುಗಳನ್ನು ಜಯಿಸಿ ವಿಜಯವನ್ನು ಹೊಂದಿದವನಾಗಿ ಆನಂದದಿಂದ ಸ್ಥಿರವಾದ ರಾಜಲಕ್ಷ್ಮೀಯನ್ನು ವಹಿಸುತ್ತಾನೆ.

## ವಿವರಣೆ

ಹೇಗೆ ಧೀರನಾದ ರಾಜನು ಉತ್ತಮವಾದ ಚಾಪದ ಹೆದೆಗೇರಿಸಿದ ಬಾಣಗಳಿಂದ ಗುರಿಯಿಟ್ಟು ಹೊಡೆದು ಶತ್ರುಗಳನ್ನೆಲ್ಲ ಜಯಿಸಿ ರಾಜ್ಯಲಕ್ಷ್ಮೀಯನ್ನು ಪಡೆದುಕೊಂಡು ಆನಂದದಿಂದಿರುವನೋ, ಹಾಗೆಯೇ, ವಿವೇಕಿಯಾದ ಭಕ್ತನು ಭಕ್ತಿಯಿಂದ ಭಾವವನ್ನು ವಶಕ್ಕೆ ತೆಗೆದುಕೊಂಡು ಶಿವಸ್ಮರಣೆಯಿಂದ ಪಾಪಗಳನ್ನೆಲ್ಲ ಪರಿಹರಿಸಿಕೊಂಡು ಶಿವಸಾಯುಜ್ಯವೆಂಬ ಉತ್ತಮಫಲವನ್ನು ಪಡೆದು ಪರಮಾನಂದಭರಿತನಾಗುತ್ತಾನೆ.

**ಧ್ಯಾನಾಞ್ಜನೇನ ಸಮವೇಕ್ಷ್ಯ ತಮಃಪ್ರದೇಶಂ**
**ಭಿತ್ತ್ವಾ ಮಹಾಬಲಿಭಿರೀಶ್ವರನಾಮಮನ್ತ್ರೈಃ ।**
**ದಿವ್ಯಾಶ್ರಿತಂ ಭುಜಗಭೂಷಣಮುದ್ವಹನ್ತಿ**
**ಯೇ ಪಾದಪದ್ಮಮಿಹ ತೇ ಶಿವ ತೇ ಕೃತಾರ್ಥಾಃ ॥೭೨॥**

೭೨. ಶಿವನೆ, ಧ್ಯಾನವೆಂಬ ಅಂಜನದಿಂದ ಚೆನ್ನಾಗಿ ನಿಟ್ಟಿಸಿ ನೋಡಿ, ಈಶ್ವರನ ನಾಮಗಳೆಂಬ ಮಹಾಬಲಶಾಲಿಗಳಾದ ಮಂತ್ರಗಳಿಂದ ತಮಸ್ಸಿನ ಪ್ರದೇಶವನ್ನು ಭೇದಿಸಿ, ದೇವತೆಗಳು ಆಶ್ರಯಿಸಿಕೊಂಡಿರುವ, ಸರ್ಪಭೂಷಣ ನಾಗಿರುವ ನಿನ್ನ ಪಾದಪದ್ಮವನ್ನು ಯಾರು ತೆಗೆದುಕೊಂಡು ಸ್ವೀಕರಿಸುವರೋ ಅವರು ಈ ಲೋಕದಲ್ಲಿ ಕೃತಾರ್ಥರು.

## ವಿವರಣೆ

ನಿಧಿಶಾಸ್ತ್ರವನ್ನು ಬಲ್ಲವರಿಗಲ್ಲದೆ ನಿಧಿಯು ದೊರಕುವದಿಲ್ಲ. ಅದು ಕತ್ತಲೆಯ ಪ್ರದೇಶದಲ್ಲಿರುವದು. ಅಂಜನವನ್ನು ಹಾಕಿಕೊಂಡು ಅದನ್ನು ಹುಡುಕಿ ನೋಡಿಕೊಳ್ಳಬೇಕು. ಆಮೇಲೆ ಆ ಪ್ರದೇಶವನ್ನು ಅಗೆಯಬೇಕು. ಮಂತ್ರ ಜಪವನ್ನು ಮಾಡಿರಬೇಕು. ನಿಧಿಯನ್ನು ಯಕ್ಷರು ಆಶ್ರಯಿಸಿಕೊಂಡಿರುತ್ತಾರೆ. ಹಾವು ಸುತ್ತಿಕೊಂಡು ಕಾವಲಿರುತ್ತದೆ. ಇದನ್ನು ಮಂತ್ರಪ್ರಭಾವದಿಂದ ಯಾರು ಎತ್ತಿ ತೆಗೆದುಕೊಳ್ಳುವರೋ ಅವರಿಗೇ ಅದು ದೊರಕುತ್ತದೆ.

ಇದರಂತೆ ಈಶ್ವರನ ಪಾದಪದ್ಮವು ಸಿಕ್ಕುವದೂ ಕಡುಕಷ್ಟ. ಅದನ್ನು ಅನೇಕ ದೇವತೆ ಗಳು ಆಶ್ರಯಿಸಿರುತ್ತಾರೆ; ಹಾವುಗಳು ಶಿವನಿಗೆ ಆಭರಣವಾಗಿರುವದರಿಂದಲೂ ಆತನ ಪಾದವು ಸಿಕ್ಕುವುದು ಕಷ್ಟವೇ. ಆದರೆ ಧ್ಯಾನವೆಂಬ ಅಂಜನವನ್ನು ಹಾಕಿಕೊಂಡು ಸುಸಂಸ್ಕೃತವಾದ ಮನಸ್ಸೆಂಬ ಒಳಗಣ್ಣಿನಿಂದ ನೋಡಿ ಅವಿದ್ಯೆಯನ್ನೆಲ್ಲ ನಾಶಮಾಡಿ ಕೊಳ್ಳುವ ಅಮೋಘವಾದ ಈಶ್ವರನ ನಾಮಸ್ಮರಣನಿರತರಿಗೆ ಮಾತ್ರವೇ ಆ ಪಾದವು ದೊರಕುವದು.

**ಭೂದಾರತಾಮುದವಹದ್ ಯದಪೇಕ್ಷಯಾ ಶ್ರೀ-**
**ಭೂದಾರ ಏವ ಕಿಮತಃ ಸುಮತೇ ಲಭಸ್ವ ।**
**ಕೇದಾರಮಾಕಲಿತಮುಕ್ತಿಮಹೌಷಧೀನಾಂ**
**ಪಾದಾರವಿನ್ದಭಜನಂ ಪರಮೇಶ್ವರಸ್ಯ ॥೭೩॥**

೭೩. ಎಲೈ ಸುಮತಿಯೆ, ಯಾವದರ ಇಚ್ಛೆಯಿಂದ ಲಕ್ಷ್ಮೀ ಭೂಮಿದೇವಿ ಯರಿಗೆ ಪತಿಯಾದ ವಿಷ್ಣುವೇ ಭೂಮಿಯನ್ನು ಅಗೆಯುವ (ವರಾಹತ್ವವನ್ನು) ವಹಿಸಿದನೋ ಇಚ್ಛಿಸುವ ಮುಕ್ತಿಗಳೆಂಬ ಉತ್ತಮವಾದ ಗಿಡಗಳಿಗೆ ಗದ್ದೆಯಾಗಿ ರುವ ಪರಮೇಶ್ವರನ ಪಾದಪದ್ಮದ ಭಜನೆಯನ್ನು ಪಡೆದುಕೊ! ಇದಕ್ಕಿಂತ ಇನ್ನೇನು ಬೇಕು?

## ವಿವರಣೆ

ಶ್ರೀದೇವಿಭೂದೇವಿಯರು ಸರ್ವಸಂಪತ್ತುಗಳನ್ನೂ ಭಕ್ತರಿಗೆ ಅನುಗ್ರಹಿಸುವ ಶಕ್ತಿಯುಳ್ಳವರು. ಅಂಥವರಿಗೆ ಪತಿಯಾಗಿರುವ ವಿಷ್ಣುವಿಗೆ ಬೇಕಾದದ್ದೇನಿದ್ದೀತು? ಆದರೂ ಅವನುಕೂಡ ಶಿವನ ಪಾದಪದ್ಮವನ್ನು ಕಾಣಬೇಕೆಂಬ ಇಚ್ಛೆಯಿಂದ ವರಾಹರೂಪವನ್ನು ತಾಳಿ ಭೂಮಿಯನ್ನು ಅಗೆದುಕೊಂಡು ಹೋದನೆಂದು ಪುರಾಣಗಳಲ್ಲಿ ವರ್ಣಿತವಾಗಿದೆ. ಅಂಥ ಈಶ್ವರನ ಪಾದಕಮಲಕ್ಕಿಂತ ಹೆಚ್ಚಿನದು ಮತ್ತೆ ಯಾವದುತಾನೆ ಇದ್ದೀತು? ಅದರ ಸೇವೆಯಿಂದ ಸಾಲೋಕ್ಯಾದಿಸಾಯುಜ್ಯಾಂತವಾದ ಮುಕ್ತಿಗಳೆಲ್ಲವೂ ಸಿಕ್ಕುವವು.

**ಆಶಾಪಾಶಕ್ಲೇಶದುರ್ವಾಸನಾದೇಃ**
**ಭೇದೋದ್ಯುಕ್ತೈರ್ದಿವ್ಯಗನ್ಧೈರಮನ್ದೈಃ ।**
**ಆಶಾಶಾಟೀಕಸ್ಯ ಪಾದಾರವಿನ್ದಂ**
**ಚೇತಃಪೇಟೀಂ ವಾಸಿತಾಂ ಮೇ ತನೋತು ॥೭೪॥**

೭೪. ಆಶಾಪಾಶಗಳಿಂದಾದ ಕ್ಲೇಶಗಳ ದುರ್ವಾಸನೆಯೇ ಮುಂತಾದವುಗಳನ್ನು ನಾಶಮಾಡುವದರಲ್ಲಿಯೇ ನಿರತವಾಗಿರುವ ಹೆಚ್ಚಿನ ದಿವ್ಯ ಸುವಾಸನೆಗಳಿಂದ, ದಿಗಂಬರನ ಪಾದಕಮಲವು ನನ್ನ ಚಿತ್ತವೆಂಬ ಪೆಟ್ಟಿಗೆಯನ್ನು ಘಮಘಮಿಸುವಂತೆ ಮಾಡಲಿ!

ವಿವರಣೆ

ಸಾಮಾನ್ಯಜನರ ಚಿತ್ತದಲ್ಲಿ ಕಾಮದಿಂದುಂಟಾದ ಕ್ಲೇಶಗಳ ದುರ್ವಾಸನೆಯು ತುಂಬಿಕೊಂಡಿರುವದು. ಆದರೆ ಪರಮೇಶ್ವರಪಾದಾರವಿಂದಸ್ಮರಣೆಯಿಂದ ಆ ವಾಸನೆಗಳೆಲ್ಲವೂ ಹೋಗಿ ಈಶ್ವರನ ಸ್ಮರಣೆ ಎಂಬ ಸದ್ವಾಸನೆಯು ಅದರಲ್ಲಿ ತುಂಬಿಕೊಳ್ಳುವದು.

**ಕಲ್ಯಾಣಿನಂ ಸರಸಚಿತ್ರಗತಿಂ ಸವೇಗಂ**
**ಸರ್ವೇಙ್ಗಿತಜ್ಞಮನಘಂ ಧ್ರುವಲಕ್ಷಣಾಢ್ಯಮ್ ।**
**ಚೇತಸ್ತುರಙ್ಗಮಧಿರುಹ್ಯ ಚರ ಸ್ಮರಾರೇ**
**ನೇತಃ ಸಮಸ್ತಜಗತಾಂ ವೃಷಾಭಾಧಿರೂಢ ॥೭೫॥**

೭೫. ಎಲೈ ಮನ್ಮಥಶತ್ರುವೆ, ಸಮಸ್ತಜಗತ್ತುಗಳಿಗೂ ನಾಯಕನೆ, ವೃಷಭವಾಹನನೆ, ಮಂಗಲಕರವಾದ ಅನುರಾಗಯುಕ್ತವಾದ ವಿಚಿತ್ರಗತಿಯುಳ್ಳ, ವೇಗವುಳ್ಳ ಎಲ್ಲರ ಇಂಗಿತವನ್ನೂ ತಿಳಿಯಬಲ್ಲ ದೋಷರಹಿತವಾದ ಧ್ರುವವಾದ ಶುಭಲಕ್ಷಣಗಳಿಂದೊಡಗೂಡಿರುವ ಚಿತ್ತವೆಂಬ ಕುದುರೆಯನ್ನು ಹತ್ತಿ ಸಂಚರಿಸು.

ವಿವರಣೆ

ಈಶ್ವರನು ಎತ್ತಿನ ಮೇಲೇರಿ ತಿರುಗುತ್ತಿರುವನೆಂದು ಪುರಾಣಸ್ಮೃತಿಯಿದೆ. ಮಂದಗತಿಯಾದ ಎತ್ತಿಗಿಂತ ವೇಗವಾಗಿ ತಿರುಗುವ ಕುದುರೆಯು ಮೇಲಲ್ಲವೆ? ಆದ್ದರಿಂದ ನನ್ನ ಚಿತ್ತವೆಂಬ ಕುದುರೆಯನ್ನೇರಿಕೊಂಡು ಸಂಚರಿಸು ಎಂದು ಭಕ್ತನು ಪ್ರಾರ್ಥಿಸಿರುತ್ತಾನೆ. ಈ ಚಿತ್ತಾಶ್ವವು ಸ್ವೀಕರಿಸುವದಕ್ಕೆ ಏತರಿಂದ ಯೋಗ್ಯವಾಗಿದೆ? ಎಂದರೆ, ಕುದುರೆಯು ಜಾತಿಯದಾಗಿರಬೇಕು. ಈ ಚಿತ್ತವು ಉತ್ತಮಾಶ್ವವಾಗಿದೆಯಾದ್ದರಿಂದ ಸ್ವೀಕಾರಯೋಗ್ಯವಾಗಿದೆ. ನಾಗಾಲೋಟವೇ ಮುಂತಾದ ಬಗೆಬಗೆಯ ಗತಿಗಳನ್ನು ಬಲ್ಲದ್ದಾಗಿರಬೇಕು; ಈ ಚಿತ್ತಾಶ್ವವೂ ಕಂಡಕಡೆಗೆ ಹೋಗಬಲ್ಲದ್ದಾಗಿದೆ.

ಅದಕ್ಕೆ ಸವಾರನ ಇಂಗಿತವನ್ನು ತಿಳಿಯಬಲ್ಲ ಶಕ್ತಿಯಿರಬೇಕು; ಈ ಚಿತ್ತಕ್ಕೂ ಎಲ್ಲರ ಇಂಗಿತವನ್ನೂ ಊಹಿಸುವ ಶಕ್ತಿಯಿದೆ. ಕುದುರೆಯ ಸುಳಿಗಳು ಶಾಸ್ತ್ರೋಕ್ತವಾದವುಗಳಿರಬೇಕು. ಯಾವ ಕೆಟ್ಟ ಸುಳಿಯೂ ಇರಬಾರದು; ಈ ನನ್ನ ಚಿತ್ತವೂ ನಿನ್ನಲ್ಲಿಯೇ ನಿಂತಿರುವದಕ್ಕೆ ಬಯಸುವ ಶುಭಚಿಹ್ನೆಯುಳ್ಳದ್ದಾಗಿದೆ. ನೀನು ಲೋಕಕ್ಕೆಲ್ಲ ನಾಯಕನಾದ್ದರಿಂದ ನಿನಗೆ ಒಂದು ಇಂಥ ಕುದುರೆಯಿರುವದು ಯೋಗ್ಯವಾಗಿದೆ ಎಂದು ಚಿತ್ತಕ್ಕೆ ಅಶ್ವದ ರೂಪಕವನ್ನು ಕೊಟ್ಟು ಕವಿಯು 'ನನ್ನ ಚಿತ್ತವನ್ನೇರು', ಎಂದರೆ 'ನಿನ್ನನ್ನು ಸ್ಮರಣೆಮಾಡುತ್ತಲೇ ಇರುವಂತೆ ಮಾಡು!' ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

**ಭಕ್ತಿರ್ಮಹೇಶಪದಪುಷ್ಕರಮಾವಹನ್ತೀ**
**ಕಾದಮ್ಬಿನೀವ ಕುರುತೇ ಪರಿತೋಷವರ್ಷಮ್ ।**
**ಸಂಪೂರಿತೋ ಭವತಿ ಯಸ್ಯ ಮನಸ್ತಟಾಕ-**
**ಸ್ತಜ್ಜನ್ಮಸಸ್ಯಮಖಿಲಂ ಸಫಲಂ ಚ ನಾನ್ಯತ್ ॥೭೬॥**

೭೬. ಯಾವನ ಭಕ್ತಿಯು ಮಹೇಶ್ವರನ ಪಾದವೆಂಬ ಆಕಾಶವನ್ನು ಸೇರಿ ಮೇಘಮಾಲೆಯಂತೆ ಆನಂದದ ಮಳೆಯನ್ನು ಸುರಿಸುವದೋ, ಯಾವನ ಮನಸ್ಸೆಂಬ ಕೊಳವು ಅದರಿಂದ ತುಂಬಿಕೊಳ್ಳುವದೋ ಅವನ ಜನ್ಮವೆಂಬ ಸಸ್ಯವೆಲ್ಲವೂ ಸಫಲವಾದದ್ದು ಮಿಕ್ಕದ್ದಲ್ಲ.

## ವಿವರಣೆ

ಆಕಾಶದಲ್ಲಿ ಮೋಡಗಳ ಸಾಲು ತುಂಬಿಕೊಂಡು ಬಲವಾಗಿ ಮಳೆಗರೆದದ್ದು ಯಾವ ಕೆರೆಯನ್ನು ತುಂಬಿಕೊಳ್ಳುವದೋ ಅದರ ಆಸರೆಯಲ್ಲಿದ್ದ ಗದ್ದೆಯ ಪೈರು ಉತ್ತಮವಾಗಿ ಫಲಿಸುತ್ತದೆ. ಹಾಗೆ ಯಾವನ ಭಕ್ತಿಯು ಪರಮೇಶ್ವರನ ಪಾದತಲದಲ್ಲಿಯೇ ಇದ್ದುಕೊಂಡು ಆನಂದದ ಮಳೆಯನ್ನು ಕರೆಯುತ್ತಾ ಮನಸ್ಸೆಲ್ಲವನ್ನೂ ಆನಂದಭರಿತವಾಗಿ ಮಾಡುವದೋ, ಅವನ ಜನ್ಮವೇ ಸಫಲವು.

**ಬುದ್ಧಿಃ ಸ್ಥಿರಾ ಭವಿತುಮೀಶ್ವರಪಾದಪದ್ಮ**
**ಸಕ್ತಾ ವಧೂರ್ವಿರಹಿಣೀವ ಸದಾ ಸ್ಮರನ್ತೀ ।**
**ಸದ್ಭಾವನಾಸ್ಮರಣದರ್ಶನಕೀರ್ತನಾದಿ**
**ಸಂಮೋಹಿತೇವ ಶಿವಮನ್ತ್ರಜಪೇನ ವಿನ್ತೇ ॥೭೭॥**

೭೭. ಪ್ರಿಯನನ್ನಗಲಿದ ಸ್ತ್ರೀಯಂತೆ ಬುದ್ಧಿಯು ಈಶ್ವರನ ಪಾದಕಮಲದಲ್ಲಿ ಆಸಕ್ತಿಯುಳ್ಳದ್ದಾಗಿ ಯಾವಾಗಲೂ ಸ್ಮರಿಸುತ್ತಾ ಶಿವಮಂತ್ರಜಪದಿಂದ ಸದ್ಭಾವನೆ, ಸ್ಮರಣೆ, ದರ್ಶನ, ಕೀರ್ತನ- ಇವುಗಳಿಂದ ಮೋಹವನ್ನು ಪಡೆಯಿತೋ ಎಂಬಂತೆ ನೆಲೆನಿಲ್ಲುವದನ್ನು ಕಲಿತುಕೊಳ್ಳುತ್ತಿದೆ.

**ಸದುಪಚಾರವಿಧಿಷ್ವನುಬೋಧಿತಾಂ**
**ಸವಿನಯಾಂ ಸುಹೃದಂ ಸಮುಪಾಶ್ರಿತಾಮ್ ।**
**ಮಮ ಸಮುದ್ಧರ ಬುದ್ಧಿಮಿಮಾಂ ಪ್ರಭೋ**
**ವರಗುಣೇನ ನವೋಢವಧೂಮಿವ ॥೭೮॥**

೭೮. ಪ್ರಭುವೆ, ಉತ್ತಮವಾದ ಉಪಚಾರವನ್ನು ಮಾಡುವ ವಿಧಾನಗಳಲ್ಲಿ ಬೋಧನೆಯನ್ನು ಹೊಂದಿರುವ, ಉತ್ತಮವಾದ ಹೃದಯವುಳ್ಳವನನ್ನು ಆಶ್ರಯಿಸಿರುವ ನನ್ನ ಈ ಬುದ್ಧಿಯನ್ನು - ಹೊಸದಾಗಿ ದೊಡ್ಡವಳಾಗಿರುವ ಹುಡುಗಿಯನ್ನು ವರನ ಗುಣದಿಂದ ಹೇಗೋ ಹಾಗೆ (ನಿನ್ನ ಶ್ರೇಷ್ಠವಾದ ಗುಣದಿಂದ) ಉದ್ಧಾರಮಾಡು.

**ನಿತ್ಯಂ ಯೋಗಿಮನಸ್ಸರೋಜದಲಸಂಚಾರಕ್ಷಮಸ್ತ್ವತ್ಕ್ರಮಃ**
**ಶಮ್ಭೋ ತೇನ ಕಥಂ ಕಠೋರಯಮರಾಡ್ವಕ್ಷಃಕವಾಟಕ್ಷತಿಃ ।**
**ಅತ್ಯನ್ತಂ ಮೃದುಲಂ ತ್ವದಙ್ಘ್ರಿಯುಗಲಂ ಹಾ ಮೇ ಮನಶ್ಚಿನ್ತಯ-**
**ತ್ಯೇತಲ್ಲೋಚನಗೋಚರಂ ಕುರು ವಿಭೋ ಹಸ್ತೇನ ಸಂವಾಹಯೇ ॥೭೯॥**

೭೯. ಶಂಭುವೆ, ಯಾವಾಗಲೂ ಯೋಗಿಯ ಮನಸ್ಸೆಂಬ ಕಮಲದ ದಳದಲ್ಲಿ ಸಂಚರಿಸುವದಕ್ಕೆ ತಕ್ಕ ನಿನ್ನ ಪಾದದ್ವಂದ್ವವು ಮೃದುವಾದದ್ದು. ಆದರಿಂದ ಗಟ್ಟಿಯಾದ ಯಮರಾಯನ ಎದೆಯನ್ನು ಒದೆಯುವದು ಹೇಗೆ ಆಯಿತೊ! ಅಯ್ಯೋ! (ಹೇಗಾಯಿತೊ!) ಎಂದು ನನ್ನ ಮನಸ್ಸು ಚಿಂತಿಸುತ್ತಿದೆ. ಇದನ್ನು ಕಣ್ಣಿಗೆ ಕಾಣಿಸು, ಕೈಯಿಂದ ಒತ್ತುತ್ತೇನೆ.

**ಏಷ್ಯತ್ಯೇಷ ಜನಿಂ ಮನೋಽಸ್ಯ ಕಠಿನಂ ತಸ್ಮಿನ್ನಟಾನೀತಿ ಮ**
**ದ್ರಕ್ಷಾಯೈ ಗಿರಿಸೀಮ್ನಿ ಕೋಮಲಪದನ್ಯಾಸಃ ಪುರಾಭ್ಯಾಸಿತಃ ।**
**ನೋ ಚೇದ್ ದಿವ್ಯಗೃಹಾನ್ತರೇಷು ಸುಮನಸ್ತಲ್ಪೇಷು ವೇದ್ಯಾದಿಷು**
**ಪ್ರಾಯಃ ಸತ್ಸು ಶಿಲಾತಲೇಷು ನಟನಂ ಶಮ್ಭೋ ಕಿಮರ್ಥಂ ತವ ॥೮೦॥**

೮೦. ಶಂಭುವೆ, ಇವನು ಜನ್ಮವನ್ನು ಹೊಂದುವನು, ಇವನ ಮನಸ್ಸು ಗಟ್ಟಿ; ಆದರ ಮೇಲೆ ಸಂಚರಿಸೋಣ ಎಂದುಕೊಂಡು ನನ್ನ ರಕ್ಷಣೆಗಾಗಿಯೇ ಬೆಟ್ಟದ ಪ್ರದೇಶದಲ್ಲಿ ಮೃದುವಾದ ಪಾದವನ್ನು ಇಡುವದನ್ನು ಮೊದಲು (ನೀನು) ಅಭ್ಯಾಸಮಾಡಿಕೊಂಡೆ. ಹಾಗಲ್ಲದಿದ್ದರೆ, ದೇವಲೋಕದ ಗೃಹಗಳ ಮಧ್ಯಪ್ರದೇಶಗಳಲ್ಲಿ ಹೂವಿನ ಸುಪ್ಪತ್ತಿಗೆಯ ಹಾಸಿಗೆಗಳೂ ವೇದಿಕೆಗಳೇ ಮುಂತಾದವುಗಳೂ ಇರುವಲ್ಲಿ ಕಲ್ಲಿನ ಪ್ರದೇಶಗಳಲ್ಲಿ ನಟನಮಾಡುವದು ನಿನಗೇತಕ್ಕೆ?

### ವಿವರಣೆ

ಗಟ್ಟಿಯಾದ ಮನಸ್ಸಿನ ಪ್ರದೇಶದಲ್ಲಿ ಆಡ್ಡಾಡುವದಕ್ಕೆ ಬರಲಿ ಎಂದೇ ಗಟ್ಟಿಯಾದ ಕಲ್ಲುಗಳ ಪ್ರದೇಶದಲ್ಲಿ ನಿನ್ನ ಮೆತ್ತನೆಯ ಪಾದಗಳನ್ನಿಟ್ಟು ಅಭ್ಯಾಸ ಮಾಡಿಕೊಂಡಿರುವೆ-ಎಂದು ಉತ್ಪ್ರೇಕ್ಷೆಯಿಂದ ಕವಿಯು, ನನ್ನಂಥ ಗಟ್ಟಿಮನಸ್ಸಿನವನಿಗೂ ನೀನು ಭಕ್ತಿಯನ್ನು ಕೊಟ್ಟು ಕಾಪಾಡುವವನೇ -ಎಂದು ನಂಬಿದ್ದೇನೆ ಎಂಬ ಭಾವವನ್ನು ಪ್ರಕಟಿಸಿರುತ್ತಾನೆ.

**ಕಞ್ಚಿತ್ಕಾಲಮುಮಾಮಹೇಶ ಭವತಃ ಪಾದಾರವಿನ್ದಾರ್ಚನೈಃ**
**ಕಞ್ಚಿದ್ ಧ್ಯಾನಸಮಾಧಿಭಿಶ್ಚ ನತಿಭಿಃ ಕಞ್ಚಿತ್ ಕಥಾಕರ್ಣನೈಃ ।**
**ಕಞ್ಚಿತ್ಕಞ್ಚಿದವೇಕ್ಷಣೈಶ್ಚ ನುತಿಭಿಃ ಕಞ್ಚಿದ್ದಶಾಮೀದೃಶೀಂ**
**ಯಃ ಪ್ರಾಪ್ನೋತಿ ಮುದಾ ತ್ವದರ್ಪಿತಮನಾ ಜೀವನ್ ಸಮುಕ್ತಃ ಖಲು ।೮೧।**

೮೧. ಉಮಾಮಹೇಶ್ವರನೆ, ಸ್ವಲ್ಪಕಾಲ ನಿನ್ನ ಪಾದಾರವಿಂದದ ಅರ್ಚನೆಗಳಿಂದ, ಸ್ವಲ್ಪಕಾಲ ಧ್ಯಾನಸಮಾಧಿಗಳಿಂದ, ಸ್ವಲ್ಪಕಾಲ ನಮಸ್ಕಾರ ಗಳಿಂದ ಸ್ವಲ್ಪಕಾಲ ನಿನ್ನ ಲೀಲೆಯ ಕಥೆಗಳನ್ನು ಕೇಳುವದರಿಂದಲೂ ಸ್ವಲ್ಪಕಾಲವನ್ನು ನಿನ್ನ ಮೂರ್ತಿದರ್ಶನಗಳಿಂದಲೂ ಸ್ವಲ್ಪಕಾಲ ಸ್ತೋತ್ರ ಗಳಿಂದಲೂ ಸಂತೋಷದಿಂದ ಯಾವನು ನಿನಗೇ ಮನಸ್ಸನ್ನು ಅರ್ಪಿಸಿಕೊಂಡು ಇಂಥ ಅವಸ್ಥೆಯನ್ನು ಹೊಂದಿರುತ್ತಾನೋ ಅವನೇ ಜೀವನ್ಮುಕ್ತನಲ್ಲವೆ?

### ವಿವರಣೆ

ಪರಮೇಶ್ವರನ ಮೂರ್ತಿದರ್ಶನ, ಅರ್ಚನ, ಸ್ತುತಿ, ನಮಸ್ಕಾರ, ಕಥಾಕೀರ್ತನ, ಧ್ಯಾನ, ಸಮಾಧಿ- ಹೀಗೆ ಈಶ್ವರನಲ್ಲಿಯೇ ಮನಸ್ಸಿಟ್ಟುಕೊಂಡಿರುವಾತನಿಗೆ ಸಂಸಾರಬಂಧವು ಎಂದಿಗೂ ಇರುವದಿಲ್ಲ.

ಬಾಣತ್ವಂ ವೃಷಭತ್ವಮರ್ಧವಪುಷಾ ಭಾರ್ಯಾತ್ವಮಾರ್ಯಾಪತೇ
ಘೋಣಿತ್ವಂ ಸಖಿತಾಂ ಮೃದಙ್ಗವಹತಾಂ ಚೇತ್ಯಾದಿರೂಪಂ ದಧೌ ।
ತ್ವತ್ಪಾದೇ ನಯನಾರ್ಪಣಂ ಚ ಕೃತವಾನ್ ತ್ವದ್ದೇಹಭಾಗೋ ಹರಿಃ
ಪೂಜ್ಯಾತ್ಪೂಜ್ಯತರಃ ಸ ಏವ ಹಿ ನ ಚೇತ್ ಕೋ ವಾ ತದನ್ಯೋಽಧಿಕಃ ॥

೮೨. ಗೌರೀಪತಿಯೆ, ನಿನ್ನ ದೇಹಭಾಗವಾಗಿರುವ ವಿಷ್ಣುವು ಬಾಣವಾಗಿರುವಿಕೆ, ಎತ್ತಾಗುವಿಕೆ, ಅರ್ಧದೇಹದಿಂದ ಹೆಂಡತಿಯಾಗಿರುವದು, ವರಾಹವಾಗುವದು, ಸ್ನೇಹಿತನಾಗಿರುವದು, ಮೃದಂಗವನ್ನು ಧರಿಸಿರುವದು- ಈ ಎಲ್ಲಾ ರೂಪವನ್ನೂ ಧರಿಸಿದನು. ನಿನ್ನ ಪಾದತಲದಲ್ಲಿ ಕಣ್ಣಿನ ಅರ್ಪಣವನ್ನು ಮಾಡಿದನು. ಅವನೇ ಅಲ್ಲವೆ, ಪೂಜ್ಯನಿಗಿಂತಲೂ ಪೂಜ್ಯನು? ಹಾಗಿಲ್ಲದಿದ್ದರೆ ಅವನಿಗಿಂತ ಹೆಚ್ಚಿನವನು ಯಾವನಿದಾನೆ?

### ವಿವರಣೆ

ವಿಷ್ಣುವು ಸರ್ವಪೂಜ್ಯನೆನಿಸಿಕೊಂಡಿರುವದಕ್ಕೆ ಸರ್ವಭಾವದಿಂದಲೂ ನಿನ್ನ ಸೇವೆಯನ್ನು ಮಾಡಿರುವದೇ ಕಾರಣವು ಎಂದು ಅಭಿಪ್ರಾಯ.

ಜನನಮೃತಿಯುತಾನಾಂ ಸೇವಯಾ ದೇವತಾನಾಂ
ನ ಭವತಿ ಸುಖಲೇಶಃ ಸಂಶಯೋ ನಾಸ್ತಿ ತತ್ರ ।
ಅಜನಿಮಮೃತರೂಪಂ ಸಾಮ್ಬಮೀಶಂ ಭಜನ್ತೇ
ಯ ಇಹ ಪರಮಸೌಖ್ಯಂ ತೇ ಹಿ ಧನ್ಯಾ ಲಭನ್ತೇ ॥೮೩॥

೮೩. ಹುಟ್ಟುಹೊಂದುಗಳುಳ್ಳ ದೇವತೆಗಳ ಸೇವೆಯಿಂದ ಸ್ವಲ್ಪ ಸುಖವೂ ಆಗಲಾರದು, ಅದರಲ್ಲಿ ಸಂಶಯವಿಲ್ಲ. ಜನ್ಮರಹಿತನಾಗಿ ಅಮರನಾಗಿರುವ ಸಾಂಬನಾದ ಈಶ್ವರನನ್ನು ಯಾರು ಈ ಲೋಕದಲ್ಲಿ ಭಜಿಸುತ್ತಾರೋ ಅವರೇ ಪರಮಾನಂದವನ್ನು ಹೊಂದುತ್ತಾರೆ.

ಶಿವ ತವ ಪರಿಚರ್ಯಾಸಂನಿಧಾನಾಯ ಗೌರ್ಯಾ
ಭವ ಮಮ ಗುಣಧುರ್ಯಾಂ ಬುದ್ಧಿಕನ್ಯಾಂ ಪ್ರದಾಸ್ಯೇ ।
ಸಕಲಭುವನಬನ್ಧೋ ಸಚ್ಚಿದಾನನ್ದಸಿನ್ಧೋ
ಸದಯ ಹೃದಯಗೇಹೇ ಸರ್ವದಾ ಸಂವಸ ತ್ವಮ್ ॥೮೪॥

೮೪. ಶಿವನೆ, ಭವನೆ, ಸಕಲಲೋಕಗಳಿಗೂ ಬಂಧುವಾದವನೆ, ಸಚ್ಚಿದಾನಂದಸಾಗರನೆ, ಗೌರಿಯೊಡನೆ ನಿನ್ನ ಪರಿಚರ್ಯಕ್ಕಾಗಿ ಹತ್ತಿರವೇ ಇರುವದಕ್ಕಾಗಿ ಸದ್ಗುಣಗಳಿಂದ ಶ್ರೇಷ್ಠಳಾಗಿರುವ ನನ್ನ ಬುದ್ಧಿಕನ್ಯೆಯನ್ನು ಕೊಡುವೆನು. ದಯಾಳುವೆ, ನನ್ನ ಹೃದಯವೆಂಬ ಮಂದಿರದಲ್ಲಿ ನೀನು ಯಾವಾಗಲೂ ವಾಸವಾಗಿರು!

ವಿವರಣೆ

ಸರ್ವಗುಣಸಂಪನ್ನನಾದ ವರನಿಗೆ ಸೇವೆಮಾಡಿಕೊಂಡಿರುವದಕ್ಕೆ ಕನ್ಯಾದಾನಮಾಡುವರಂತೆ. ಭಕ್ತನು ಪಾರ್ವತೀಪರಮೇಶ್ವರರ ಸೇವೆಗೇ ತನ್ನ ಬುದ್ಧಿಯನ್ನು ಅರ್ಪಿಸಬೇಕೆಂದು ಕವಿಯು ಇಲ್ಲಿ ತಿಳಿಸಿದ್ದಾನೆ.

**ಜಲಧಿಮಥನದಕ್ಷೋ ನೈವ ಪಾತಾಳಭೇದೀ**
**ನ ಚ ವನಮೃಗಯಾಯಾಂ ನೈವ ಲುಬ್ಧಃ ಪ್ರವೀಣಃ ।**
**ಅಶನಕುಸುಮಭೂಷಾವಸ್ತ್ರಮುಖ್ಯಾಂ ಸಪರ್ಯಾಂ**
**ಕಥಯ ಕಥಮಹಂ ತೇ ಕಲ್ಪಯಾನೀನ್ದುಮೌಲೇ ॥೮೫॥**

೮೫. ಚಂದ್ರಶೇಖರನೆ, ನಾನು ಸಮುದ್ರವನ್ನು ಕಡೆಯುವದರಲ್ಲಿ ಸಮರ್ಥನಲ್ಲ. ಪಾತಾಳವನ್ನು ಭೇದಿಸಿಕೊಂಡು ಹೋಗುವವನಲ್ಲ. ಅರಣ್ಯದ ಬೇಟೆಯಲ್ಲಿ ಸಮರ್ಥನಾದ ಬೇಡನೂ ಅಲ್ಲ; ನಿನಗೆ ಆಹಾರ, ಹೂವು, ಅಲಂಕಾರ, ವಸ್ತ್ರ- ಮುಂತಾದ ಉಪಚಾರವನ್ನು ಹೇಗೆ ಮಾಡಲಿ? ಹೇಳು.

ವಿವರಣೆ

ಸಮುದ್ರವನ್ನು ಕಡೆದು ದೇವತೆಗಳು ವಿಷದ ಆಹಾರವನ್ನು ಕೊಟ್ಟರು. ಪಾತಾಳವನ್ನು ಹೊಕ್ಕು ವಿಷ್ಣುವು ಶಿವನ ಭಕ್ತನೆನಿಸಿದನು. ಕಣ್ಣಯ್ಯನೆಂಬ ಬೇಡನು ಕಾಡಿನಲ್ಲಿ ಬೆಳೆದ ಹೂಗಳನ್ನು ತಂದು ಉಗುಳಿದ ನೀರಿನಿಂದ ಮೈತೊಳೆದು ತನ್ನ ಕಣ್ಣನ್ನು ಕಿತ್ತುಕೊಟ್ಟನು. ಇನ್ನು ಕೆಲವರು ಸರ್ಪಾಭರಣವನ್ನೂ ದಿಗ್ವಸ್ತ್ರವನ್ನೂ ಕೊಟ್ಟರು. ಇಂಥ ಭಕ್ತರ ಯೋಗ್ಯತೆ ಯೇನೂ ನನಗಿಲ್ಲ. ಆದ್ದರಿಂದ ಮಾಡಿದಷ್ಟು ಸೇವೆಯಿಂದ ತೃಪ್ತನಾಗಿ ನನ್ನನ್ನು ಉದ್ಧರಿಸ ಬೇಕು- ಎಂದು ಕವಿಯು ಬೇಡಿಕೊಂಡಿದಾನೆ. ನೀನು ಭಕ್ತರ ಸೇವೆಯಿಂದ ತೃಪ್ತನಾಗಿ ಯೇನೂ ಅವರಿಗೆ ಒಲಿದಿಲ್ಲವಷ್ಟೆ? ನನಗೂ ಹಾಗೇ ಒಲಿಯಬೇಕು- ಎಂದು ಭಾವ.

**ಪೂಜಾದ್ರವ್ಯಸಮೃದ್ಧಯೋ ವಿರಚಿತಾಃ ಪೂಜಾಂ ಕಥಂ ಕುರ್ಮಹೇ**
**ಪಕ್ಷಿತ್ವಂ ನ ಚ ವಾ ಕಿಟಿತ್ವಮಪಿ ನ ಪ್ರಾಪ್ತಂ ಮಯಾ ದುರ್ಲಭಮ್ ।**
**ಜಾನೇ ಮಸ್ತಕಮಙ್ಘ್ರಿಪಲ್ಲವಮುಮಾಜಾನೇ ನ ತೇಽಹಂ ವಿಭೋ**
**ನ ಜ್ಞಾತಂ ಹಿ ಪಿತಾಮಹೇನ ಹರಿಣಾ ತತ್ತ್ವೇನ ತದ್ರೂಪಿಣಾ ॥೮೬॥**

೮೬. ಎಲೈ ಉಮಾಪತಿಯೆ, ಪೂಜಾದ್ರವ್ಯಗಳ ಸಮೃದ್ಧಿಗಳು ಆದವು ಪೂಜೆಯನ್ನು ಹೇಗೆ ಮಾಡೋಣ? ದುರ್ಲಭವಾದ ಹಂಸಪಕ್ಷಿಯ ರೂಪವಾಗಲಿ, ವರಾಹದ ರೂಪವಾಗಲಿ ನನಗೆ ಸಿಕ್ಕಿರುವದಿಲ್ಲ. ವಿಭುವೆ, ನಿನ ತಲೆಯನ್ನು ಅಥವಾ ಮೃದುವಾದ ಪಾದಗಳನ್ನಾಗಲಿ ನಾನು ಅರಿಯೆನಲ್ಲ! ಅ (ರೂಪಗಳನ್ನು) ಪಡೆದ ಬ್ರಹ್ಮನಿಂದ, ಮತ್ತು ಹರಿಯಿಂದ (ಅವುಗಳನ್ನು) ಅರಿಯುವದಾಗಲಿಲ್ಲವಷ್ಟೆ?

### ವಿವರಣೆ

ಪೂಜೆಮಾಡುವವನಿಗೆ ಬರಿಯ ಪೂಜಾದ್ರವ್ಯಗಳಿದ್ದರೆ ಸಾಲದು. ಪರಮೇಶ್ವರನ ಪಾದಾದಿಯಾಗಿ ಶಿರಸ್ಸಿನವರೆಗಿನ ಆಕಾರವನ್ನು ಸಾಕ್ಷಾತ್ಕರಿಸಿಕೊಂಡಿರಬೇಕಲ್ಲವೆ? ಸರ್ವವ್ಯಾಪಿಯಾದ ಶಿವನ ತಲೆಯನ್ನು ನೋಡಬೇಕೆಂದು ಬ್ರಹ್ಮನು ಹಂಸರೂಪವನ್ನು ಧರಿಸಿ, ಪಾದವನ್ನು ಕಾಣಬೇಕೆಂದು ವಿಷ್ಣುವು ಹಂದಿಯ ರೂಪವನ್ನು ಧರಿಸಿ, ಎಷ್ಟೆಷ್ಟು ಮುಂದಕ್ಕೆ ಹೋದರೂ ಕಾಣುವದಾಗಲಿಲ್ಲ. ಇನ್ನು ಸಾಮಾನ್ಯರಿಗೆ ಅದು ಕಂಡುಬಂದಿತೆ? ಆ ಈಶ್ವರನೇ ಅನುಗ್ರಹದಿಂದ ತನ್ನ ರೂಪವನ್ನು ತೋರಿಸಿ ಕೊಟ್ಟು ಪೂಜೆಯನ್ನು ಕೈಕೊಳ್ಳಬೇಕು, ಅಷ್ಟೆ. ಆದ್ದರಿಂದ ಇಲ್ಲಿ ಭಕ್ತಿಯೊಂದೇ ಮುಖ್ಯವೆಂದು ಭಾವ.

**ಅಶನಂ ಗರಲಂ ಫಣೀ ಕಲಾಪೋ**
**ವಸನಂ ಚರ್ಮ ಚ ವಾಹನಂ ಮಹೋಕ್ಷಃ ।**
**ಮಮ ದಾಸ್ಯಸಿ ಕಿಂ ಕಿಮಸ್ತಿ ಶಮ್ಭೋ**
**ತವ ಪಾದಾಮ್ಬುಜ ಭಕ್ತಿಮೇವ ದೇಹಿ ॥೮೭॥**

೮೭. ಶಂಭುವೆ, ಅನ್ನವು ವಿಷ, ಆಭರಣವು ಹಾವು, ಬಟ್ಟೆಯು ಚರ್ಮ ವಾಹನವು ದೊಡ್ಡ ಎತ್ತು, ನನಗೆ ಏನನ್ನು ಕೊಡುವೆ, ನಿನ್ನಲ್ಲಿ ಏನಿದೆ? ನಿನ ಪಾದಕಮಲಗಳಲ್ಲಿ ಭಕ್ತಿಯೊಂದನ್ನೇ ಕೊಡು!

## ವಿವರಣೆ

ಈಶ್ವರನು ನಿರಪೇಕ್ಷನಾಗಿ ವಿರಕ್ತನಾಗಿದ್ದರೂ ಆತನ ಭಕ್ತಿಯಿಂದ ಸಕಲೈಶ್ವರ್ಯವೂ ದೊರೆಯುವದೆಂಬುದನ್ನು ಕವಿ ಇಲ್ಲಿ ಹೀಗೆ ವರ್ಣಿಸಿ ತಿಳಿಸಿರುತ್ತಾನೆ.

**ಯದಾ ಕೃತಾಮ್ಭೋನಿಧಿಸೇತುಬನ್ಧನಃ**
**ಕರಸ್ಥಲಾಧಃಕೃತಪರ್ವತಾಧಿಪಃ ।**
**ಭವಾನಿ ತೇ ಲಙ್ಘಿತಪದ್ಮ ಸಂಭವ -**
**ಸ್ತದಾ ಶಿವಾರ್ಚಾಸ್ತವಭಾವನ ಕ್ಷಮಃ ॥೮೮॥**

೮೮. ಶಿವನೆ, ಸಮುದ್ರಕ್ಕೆ ಸೇತುಬಂಧವನ್ನು ಮಾಡಿದಾಗ, ಕರತಲದಿಂದ ವಿಂಧ್ಯಪರ್ವತವನ್ನು ಕೆಳಕ್ಕೆ ಬಗ್ಗಿಸಿದಾಗ, ಬ್ರಹ್ಮನನ್ನು ದಾಟಿ ಹೋಗುತ್ತೇನೋ ಆಗ ನಿನ್ನ ಅರ್ಚನೆ, ಸ್ತುತಿ, ಭಾವನೆ- ಇವುಗಳಲ್ಲಿ ಸಮರ್ಥನಾದೇನು.

## ವಿವರಣೆ

ರಾಮನಂತೆ ಸಮುದ್ರಕ್ಕೆ ಸೇತುವನ್ನು ಕಟ್ಟುವ ಸಾಮರ್ಥ್ಯವುಳ್ಳವನೂ ಆಗಸ್ತ್ಯನಂತೆ ಪರ್ವತವನ್ನು ತನ್ನ ಆಜ್ಞೆಗೆ ಒಳಪಡಿಸಿಕೊಳ್ಳಬಲ್ಲವನೂ ಬ್ರಹ್ಮನಂತೆ ಇಚ್ಛೆ ಬಂದಂತೆ ಸೃಷ್ಟಿಮಾಡಬಲ್ಲವನೂ ಆದವನು ಮಾತ್ರ ಶಿವನನ್ನು ಪೂಜಾದಿಗಳಿಂದ ಒಲಿಸಿಕೊಳ್ಳ ಬಹುದು. ನಿಜವಾಗಿ ಈಶ್ವರನ ಪೂಜೆಗೆ ನಮ್ಮಂಥವರು ಎಂದಿಗೆ ಶಕ್ತರಾದಾರು? ಭಕ್ತಿಯೊಂದರಿಂದಲೇ ಆತನು ಪ್ರಸನ್ನನಾಗಬೇಕಾಗಿದೆ.

**ನತಿಭಿರ್ನುತಿಭಿಸ್ತ್ವಮೀಶ ಪೂಜಾ-**
**ವಿಧಿಭಿರ್ಧ್ಯಾನಸಮಾಧಿಭಿರ್ನ ತುಷ್ಟಃ ।**
**ಧನುಷಾ ಮುಸಲೇನ ಚಾಶ್ಮಭಿರ್ವಾ**
**ವದ ತೇ ಪ್ರೀತಿಕರಂ ತಥಾ ಕರೋಮಿ ॥೮೯॥**

೮೯. ಈಶ್ವರನೆ, ನೀನು ನಮಸ್ಕಾರಗಳಿಂದಲಾಗಲಿ ಸ್ತೋತ್ರಗಳಿಂದಲಾಗಲಿ ಪೂಜಾವಿಧಾನಗಳಿಂದಲಾಗಲಿ ಧ್ಯಾನಸಮಾಧಿಗಳಿಂದಲಾಗಲಿ ಸಂತುಷ್ಟ ನಾಗುವವನಲ್ಲ, ಬಿಲ್ಲಿನಿಂದಾಗಲಿ, ಒನಕೆಯಿಂದಲಾಗಲಿ, ಕಲ್ಲುಗಳಂದಲಾಗಲಿ ನಿನಗೆ ಪ್ರೀತಿಯನ್ನುಂಟುಮಾಡುವವನ್ನು ಹೇಳು; ಅದರಂತೆ ಮಾಡುತ್ತೇನೆ.

## ವಿವರಣೆ

ಇಲ್ಲಿ ಶಿವನನ್ನು ಧನುಸ್ಸಿನಿಂದ ಹೊಡೆದವನು ಅರ್ಜುನನೆಂದು ಪ್ರಸಿದ್ಧಿ. ಹೀಗೆಯೇ ಪುರಾಣಗಳಲ್ಲಿ ಒನಕೆಯಿಂದಲೂ ಕಲ್ಲುಗಳಿಂದಲೂ ಹೊಡೆದ ಭಕ್ತರ ಚರಿತ್ರೆಗಳಿವೆ. ಇಲ್ಲಿ ಪರಾಮರ್ಶಿಸಿರುವ ಭಕ್ತರುಗಳು ಶಿವನನ್ನು ಬೇಕೆಂತಲೇ ಹೊಡೆದು ಒಲಿಸಿಕೊಳ್ಳಲಿಲ್ಲ; ಭಕ್ತಿಯಿದ್ದರೆ ಸಾಕು. ಶಿವನು ಪೂಜಾದಿಗಳ ಆಕಾರಕ್ಕೇನೂ ಬೆಲೆಯನ್ನು ಕಟ್ಟುವದಿಲ್ಲ- ಎಂಬುದನ್ನು ಕವಿ ಹೀಗೆ ವರ್ಣಿಸಿರುತ್ತಾನೆಂದು ತಿಳಿಯಬೇಕು.

**ವಚಸಾ ಚರಿತಂ ವದಾಮಿ ಶಮ್ಭೋ-**
**ರಹಮುದ್ಯೋಗವಿಧಾಸು ತೇ ಪ್ರಸಕ್ತಃ ।**
**ಮನಸಾಕೃತಿಮೀಶ್ವರಸ್ಯ ಸೇವೇ**
**ಶಿರಸಾ ಚೈವ ಸದಾಶಿವಂ ನಮಾಮಿ ॥೯೦॥**

೯೦. ವಾಕ್ಕಿನಿಂದ ಶಂಭುವಾದ ನಿನ್ನ ಚರಿತ್ರವನ್ನು ಹೇಳುತ್ತಿರುತ್ತೇನೆ; ನಿನ್ನ ಸಂಬಂಧವಾದ ಕರ್ಮಗಳಲ್ಲಿಯೇ ಆಸಕ್ತನಾಗಿರುತ್ತೇನೆ; ಮನಸ್ಸಿನಿಂದ ಈಶ್ವರನಾದ ನಿನ್ನ ಆಕೃತಿಯನ್ನು ಧ್ಯಾನಿಸುತ್ತಿರುತ್ತೇನೆ; ಮತ್ತು ಶಿರಸ್ಸಿನಿಂದ ಸದಾಶಿವನಾದ ನಿನ್ನನ್ನು ನಮಸ್ಕರಿಸುತ್ತಿರುತ್ತೇನೆ.

## ವಿವರಣೆ

ಭಕ್ತನಾದವನು ತ್ರಿಕರಣದಿಂದಲೂ ಈಶ್ವರನ ಸೇವೆಯನ್ನು ಮಾಡುವದರಲ್ಲಿ ನಿರತನಾಗಿರಬೇಕು.

**ಆದ್ಯಾವಿದ್ಯಾ ಹೃದ್ಗತಾ ನಿರ್ಗತಾಸೀದ್**
**ವಿದ್ಯಾ ಹೃದ್ಯಾ ಹೃದ್ಗತಾ ತ್ವತ್ಪ್ರಸಾದಾತ್ ।**
**ಸೇವೇ ನಿತ್ಯಂ ಶ್ರೀಕರಂ ತ್ವತ್ಪದಾಬ್ಜಂ**
**ಬಾವೇ ಮುಕ್ತೇರ್ಭಾಜನಂ ರಾಜಮೌಲೇ ॥೯೧॥**

೯೧. ಚಂದ್ರಶೇಖರನೆ, ನಿನ್ನ ಅನುಗ್ರಹದಿಂದ ಹೃದಯದಲ್ಲಿದ್ದ ಸರ್ವಾನರ್ಥಕಾರಣವಾದ ಅವಿದ್ಯೆಯು ಹೋಯಿತು. ಮನೋಹರವಾದ ವಿದ್ಯೆಯು ಮನಸ್ಸಿನಲ್ಲಿ ಸೇರಿಕೊಂಡಿತು. ಮುಕ್ತಿಗೆ ಪಾತ್ರನಾಗಿ ಐಶ್ವರ್ಯ ಪ್ರದವಾಗಿರುವ ನಿನ್ನ ಪಾದಕಮಲವನ್ನು ನಿತ್ಯವೂ ಹೃದಯದಲ್ಲಿ ಸೇವಿಸುತ್ತೇನೆ.

## ವಿವರಣೆ

ಈಶ್ವರನ ಅನುಗ್ರಹವಾಯಿತೆಂದರೆ ತತ್ತ್ವಜ್ಞಾನವು ಉದಯಿಸುವದು, ಅನಾದಿಕಾಲದಿಂದಿದ್ದ ಅವಿದ್ಯೆಯು ತೊಲಗುವದು. ಹೃದಯದಲ್ಲಿ ಪರಮೇಶ್ವರನ ಧ್ಯಾನವೇ ಸಂತತವಾಗಿ ನಡೆದಿರುವದು, ಭಕ್ತನು ಮುಕ್ತನಾಗುವನು.

**ದೂರೀಕೃತಾನಿ ದುರಿತಾನಿ ದುರಕ್ಷರಾಣಿ**
**ದೌರ್ಭಾಗ್ಯದುಃಖದುರಹಙ್ಕೃತಿದುರ್ವಚಾಂಸಿ ।**
**ಸಾರಂ ತ್ವದೀಯಚರಿತಂ ನಿತರಾಂ ಪಿಬನ್ತಂ**
**ಗೌರೀಶ, ಮಾಮಿಹ ಸಮುದ್ಧರ ಸತ್ಕಟಾಕ್ಷೈಃ ॥೯೨॥**

೯೨. ಗೌರೀಪತಿಯೆ, ಪಾಪಗಳು, ಕೆಟ್ಟಹಣೆಬರಹಗಳು, ದೌರ್ಭಾಗ್ಯ, ದುಃಖ, ದುರಹಂಕಾರ, ದುರ್ವಾಕ್ಕು- ಇವೆಲ್ಲವೂ ದೂರವಾದವು. ಸಾರವಾದ ನಿನ್ನ ಚರಿತ್ರೆಯನ್ನು ಅತಿಶಯವಾಗಿ ಕುಡಿಯುತ್ತಿರುವ ನನ್ನನ್ನು ಇಲ್ಲಿಯೇ ಉತ್ತಮವಾದ ಕಟಾಕ್ಷಗಳಿಂದ ಉದ್ಧಾರಮಾಡು.

**ಸೋಮಕಲಾಧರಮೌಲೌ ಕೋಮಲಘನಕನ್ಧರೇ ಮಹಾಮಹಸಿ ।**
**ಸ್ವಾಮಿನಿ ಗಿರಿಜಾನಾಥೇ ಮಾಮಕಹೃದಯಂ ನಿರನ್ತರಂ ರಮತಾಮ್ ॥೯೩॥**

೯೩. ಚಂದ್ರನ ಕಲೆಯನ್ನು ಧರಿಸಿರುವ ತಲೆಯ, ಮನೋಹರವಾದ ಕಪ್ಪುಪುಮೋಡದ ಬಣ್ಣದ ಕತ್ತುಳ್ಳ, ಮಹಾತೇಜಸ್ವಿಯಾದ, ಸ್ವಾಮಿಯಾದ ಗಿರಿಜಾಪತಿಯಲ್ಲಿ ನನ್ನ ಹೃದಯವು ನಿರಂತರವೂ ರಮಿಸುತ್ತಿರಲಿ!

**ಸಾ ರಸನಾ ತೇ ನಯನೇ ತಾವೇವ ಕರೌ ಸ ಏವ ಕೃತಕೃತ್ಯಃ ।**
**ಯಾ ಯೇ ಯೌ ಯೋ ಭರ್ಗಂ ವದತೀಕ್ಷೇತೇ ಸದಾರ್ಚತಃ ಸ್ಮರತಿ॥೯೪॥**

೯೪. ಪರಮೇಶ್ವರನನ್ನು ಯಾವದು ಹೇಳುತ್ತಿರುವದೋ ಅದೇ ನಾಲಗೆ, ಯಾವವು ನೋಡುತ್ತಿರುವವೋ ಅವೇ ಕಣ್ಣುಗಳು, ಯಾವವು ಪೂಜಿಸುತ್ತಿರುವವೋ ಅವೇ ಕೈಗಳು, ಯಾವನು ಸ್ಮರಿಸುತ್ತಿರುವನೋ ಅವನೇ ಕೃತಕೃತ್ಯನು.

**ಅತಿಮೃದುಲೌ ಮಮ ಚರಣಾವತಿಕಠಿನಂ ತೇ ಮನೋ ಭವಾನೀಶ ।**
**ಇತಿ ವಿಚಿಕಿತ್ಸಾಂ ಸಂತ್ಯಜ ಶಿವ ಕಥಮಾಸೀದ್ ಗಿರೌ ತಥಾ ವೇಶಃ ॥೯೫॥**

೯೫. ಪಾರ್ವತಿಪತಿಯೆ, ನನ್ನ ಪಾದಗಳು ಅತಿಮೃದುವಾಗಿವೆ, ನಿನ್ನ ಮನಸ್ಸು 'ಬಹಳ ಕಠಿನ' ಎಂಬ ಸಂಶಯವನ್ನು ಬಿಡು. (ಹಾಗಿದ್ದರೆ) ಶಿವನೆ, ಬೆಟ್ಟದಮೇಲೆ ಹಾಗೆ ಮನೆಮಾಡಿಕೊಂಡಿದ್ದು ಹೇಗಾಯಿತು?

**ಧೈರ್ಯಾಙ್ಕುಶೇನ ನಿಭೃತಂ ರಭಸಾದಾಕೃಷ್ಯ ಭಕ್ತಿಶೃಙ್ಖಲಯಾ ।**
**ಪುರಹರ ಚರಣಾಲಾನೇ ಹೃದಯಮದೇಭಂ ಬಧಾನ ಚಿದ್ಯನ್ತ್ರೈಃ ॥೯೬॥**

೯೬. ಎಲೈ ಪುರಹರನೆ, ಧೈರ್ಯವೆಂಬ ಅಂಕುಶದಿಂದ ನಿಶ್ಚಲವನ್ನಾಗಿ ಮಾಡಿ ಭಕ್ತಿಯೆಂಬ ಸರಪಳಿಯಿಂದ ಬಲವಾಗಿ ಎಳೆದು ಈ ಮನಸ್ಸೆಂಬ ಕೊಬ್ಬಿದ ಆನೆಯನ್ನು ಚಿದ್ಯಂತ್ರಗಳಿಂದ (ನಿನ್ನ) ಪಾದವೆಂಬ ಕಂಬದಲ್ಲಿ ಕಟ್ಟುವವನಾಗು.

**ಪ್ರಚರತ್ಯಭಿತಃ ಪ್ರಗಲ್ಭವೃತ್ತ್ಯಾ ಮದವಾನೇಷ ಮನಃಕರೀ ಗರೀಯಾನ್ ।**
**ಪರಿಗೃಹ್ಯ ನಯೇನ ಭಕ್ತಿರಜ್ಜ್ವಾ ಪರಮ ಸ್ಥಾಣುಪದಂ ದೃಢಂ ನಯಾಮುಮ್॥**

೯೭. ಪರಮಾತ್ಮನೆ, ಮದಿಸಿದ ಮನಸ್ಸೆಂಬ ಈ ದೊಡ್ಡ ಆನೆಯು ದಿಟ್ಟತನದಿಂದ ಎಲ್ಲಾ ಕಡೆಯಲ್ಲಿಯೂ ಸುತ್ತಾಡುತ್ತಿದೆ. ಭಕ್ತಿಯೆಂಬ ಹಗ್ಗದಿಂದ ಬಿಗಿದು ಹಿಡಿದುಕೊಂಡು ಉಪಾಯದಿಂದ ಇದನ್ನು ಸ್ಥಾಣುಪದಕ್ಕೆ (ಕಂಬವಿರುವಲ್ಲಿಗೆ) ಒಯ್ಯುವನಾಗು.

## ವಿವರಣೆ

ಸ್ಥಾಣು ಎಂದರೆ ಕಟ್ಟುವ ಗೂಟ ಮತ್ತು ಶಿವ. ಭಕ್ತಿಯನ್ನು ಕೊಟ್ಟು ನಿನ್ನ ಬಳಿಗೆ ಕರೆದುಕೊ- ಎಂದರ್ಥ.

**ಸರ್ವಾಲಙ್ಕಾರಯುಕ್ತಾಂ ಸರಲಪದಯುತಾಂ ಸಾಧುವೃತ್ತಾಂ ಸುವರ್ಣಾಂ**
**ಸದ್ಭಿಃ ಸಂಸ್ತೂಯಮಾನಾಂ ಸರಸಗುಣಯುತಾಂ ಲಕ್ಷಿತಾಂ ಲಕ್ಷಣಾಢ್ಯಾಮ್।**
**ಉದ್ಯದ್ಭೂಷಾವಿಶೇಷಾಮುಪಗತವಿನಯಾಂ ದ್ಯೋತಮಾನಾರ್ಥರೇಖಾಂ**
**ಕಲ್ಯಾಣೀಂ ದೇವ, ಗೌರೀಪ್ರಿಯ, ಮಮ ಕವಿತಾಕನ್ಯಕಾಂ ತ್ವಂ ಗೃಹಾಣ ॥**

೯೮. ಗೌರೀಪ್ರಿಯನೆ, ದೇವನೆ, ಸರ್ವಾಲಂಕಾರಗಳಿಂದೊಡಗೂಡಿ ಮೃದುವಾದ ಪಾದ(ಪದ)ಗಳುಳ್ಳವಳಾಗಿ, ಉತ್ತಮವಾದ ನಡತೆಯುಳ್ಳ (ಒಳ್ಳೆಯ ವೃತ್ತಗಳಿಂದೊಡಗೂಡಿರುವ), ಒಳ್ಳೆಯ ಬಣ್ಣದವಳಾದ (ಇಂಪಾದ ಅಕ್ಷರಗಳುಳ್ಳ), ಸತ್ಪುರುಷರು ಹೊಗಳುತ್ತಿರುವಳಾದ, ಸರಸವಾದ ಗುಣಗಳಿಂದೊಡಗೂಡಿದ (ಕಾವ್ಯಗುಣಗಳುಳ್ಳ), ಕನ್ಯಾರ್ಥಿಗಳು ಬಯಸುವ (ಪ್ರಶಸ್ತವಿಷಯವುಳ್ಳ), ಸುಲಕ್ಷಗಳಿಂದೊಡಗೂಡಿದ (ಕಾವ್ಯಲಕ್ಷಣವುಳ್ಳ), ಉತ್ತಮವಾದ ಭೂಷಣಗಳಿಂದೊಪ್ಪುವ, ವಿನಯವುಳ್ಳ (ನಿಯಮಕ್ಕೆ ತಕ್ಕಂತಿರುವ), ಹೊಳೆಯುವ ಅರ್ಥಯುಕ್ತರೇಖೆಯುಳ್ಳ (ಅಕ್ಷರಲಿಖಿತವಾದ), ಮಂಗಲಕರಳಾದ ನನ್ನ ಕವಿತಾಕನ್ಯೆಯನ್ನು ನೀನು ಸ್ವೀಕರಿಸು!

ವಿವರಣೆ

ಕನ್ಯೆಗೂ ಕವಿತೆಗೂ ಹೊಂದುವಂತೆ ಶ್ಲೇಷೆಯಿರುವ ವಿಶೇಷಣಗಳನ್ನು ಇಲ್ಲಿ ಜೋಡಿಸಿದೆ.

**ಇದಂ ತೇ ಯುಕ್ತಂ ವಾ ಪರಮಶಿವ ಕಾರುಣ್ಯಜಲಧೇ**
**ಗತೌ ತಿರ್ಯಗ್ರೂಪಂ ತವ ಪದಶಿರೋದರ್ಶನಧಿಯಾ ।**
**ಹರಿಬ್ರಹ್ಮಾಣೌ ತೌ ದಿವಿ ಭುವಿ ಚರಸ್ತೌ ಶ್ರಮಯುತೌ**
**ಕಥಂ ಶಮ್ಭೋ, ಸ್ವಾಮಿನ್, ಕಥಯ ಮಮ ವೇದ್ಯೋಽಸಿ ಪುರತಃ ॥೯೯॥**

೯೯. ಪರಮಶಿವನೆ, ದಯಾಸಾಗರನೆ, ನಿನ್ನ ಪಾದ, ತಲೆ-ಇವುಗಳನ್ನು ಕಾಣೋಣವೆಂಬ ಬುದ್ಧಿಯಿಂದ ಕೀಳುಪ್ರಾಣಿಗಳ ರೂಪವನ್ನು ಹೊಂದಿದ ಹರಿಬ್ರಹ್ಮರುಗಳು ಆಕಾಶದಲ್ಲಿಯೂ ಭೂಮಿಯಲ್ಲಿಯೂ ಸಂಚರಿಸಿ ಆಯಾಸಪಟ್ಟರು. ಶಂಭುವೆ, ಸ್ವಾಮಿಯೆ, ನನ್ನ ಎದುರಿಗೆ ಹೇಗೆ ಗೋಚರನಾಗಿರುವೆ? ಇದು ನಿನಗೆ ಯುಕ್ತವೆ? ಹೇಳು.

ವಿವರಣೆ

ಎಂಥ ದೊಡ್ಡವರಿಗೂ ಅಗೋಚರನಾದ ಶಿವನು, ಭಕ್ತರಿಗೆ ಗೋಚರನಾಗುವನು.

ಸ್ತೋತ್ರೇಣಾಲಮಹಂ ಪ್ರವಚ್ಮಿ ನ ಮೃಷಾ ದೇವಾ ವಿರಿಞ್ಚಾದಯಃ
ಸ್ತುತ್ಯಾನಾಂ ಗಣನಾಪ್ರಸಙ್ಗಸಮಯೇ ತ್ವಾಮಗ್ರಗಣ್ಯಂ ವಿದುಃ ।
ಮಹಾತ್ಮ್ಯಾಗ್ರವಿಚಾರಣಪ್ರಕರಣೇ ಧಾನಾತುಷಸ್ತೋಮವ-
ದ್ಧೂತಾಸ್ತ್ವಾಂ ವಿದುರುತ್ತಮೋತ್ತಮಫಲಂ ಶಮ್ಭೋ ಭವತ್ಸೇವಕಾಃ ॥೧೦೦॥

೧೦೦. ಶಂಭುವೆ, ಸ್ತೋತ್ರವು ಸಾಕು; ನಾನು ಸುಳ್ಳು ಹೇಳುತ್ತಿಲ್ಲ. ಬ್ರಹ್ಮನೇ ಮೊದಲಾದ ದೇವತೆಗಳು ಸ್ತುತಿಗೆ ತಕ್ಕವರ ಗಣನೆಯ ಪ್ರಸಕ್ತಿಯು ಬಂದಾಗ ನಿನ್ನನ್ನು ಮೊದಲನೆಯವನೆಂದು ಎಣಿಸತಕ್ಕದ್ದೆಂದು ಭಾವಿಸುತ್ತಾರೆ. ಮಹಿಮೆಯ ಕೊನೆಯನ್ನು ವಿಚಾರಿಸುವ ಸಂದರ್ಭದಲ್ಲಿ ನಿನ್ನ ಸೇವಕರಾದ ಭಕ್ತರು ದೇವತೆಗಳನ್ನು ಹೊಟ್ಟಿನ ಸಮೂಹಗಳಂತೆ ಹಾರಿಹೋಗುವವರನ್ನಾಗಿಯೂ ನಿನ್ನನ್ನು ಉತ್ತಮೋತ್ತಮವಾದ ಕಾಳನ್ನಾಗಿಯೂ ತಿಳಿಯುವರು.

### ವಿವರಣೆ

ಶಿವನಿಗಿಂತ ಸ್ತೋತ್ರಪಾತ್ರರಾದ, ಅವನಿಗಿಂತ ಹೆಚ್ಚಿನ ಮಹಿಮೆಯುಳ್ಳ ದೇವತೆಗಳೇ ಇಲ್ಲ.

ಇತಿ ಶಿವಾನಂದಲಹರೀ ಸಮಾಪ್ತಾ

-----

8. ಶ್ರೀರಾಮಹೃದಯ: ಅಧ್ಯಾತ್ಮ ರಾಮಾಯಣದ ಮೊದಲನೆಯ ಸರ್ಗದ ಭಾಗವು ಮೂಲ ಸಮೇತ ಇದರಲ್ಲಿದೆ. ಸೀತಾದೇವಿಯೂ, ಶ್ರೀರಾಮನೂ ಹನುಮಂತನಿಗೆ ಮಾಡಿದ ತತ್ತ್ವೋಪದೇಶವಿದು. ರಾಮಭಕ್ತರಿಗೆ ಅನುಸಂಧಾನಕ್ಕೆ ತಕ್ಕ ಗ್ರಂಥ. ಪಾಠಾಂತರ ಸಹಿತ ಮೂಲ. ಟೀಕೆ, ಟಿಪ್ಪಣಿ, ಸಾರಾಂಶ ಇಷ್ಟೂ ಇವೆ. (ಮೂರನೆಯ ಮುದ್ರಣ: 1980 (ಪ್ರ. ಕ್ರೌನ್ 22)

9. ಭಗವಚ್ಛರಣ ಸ್ತೋತ್ರ: ಶ್ರೀ ಬ್ರಹ್ಮಾನಂದ ಸ್ವಾಮಿಗಳವರ ಕೃತಿ. ಅಧ್ಯಾತ್ಮ ತತ್ತ್ವವನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬೇಕೆನ್ನುವವರು ಯಾವ ಯಾವ ಸಾಧನಗಳನ್ನು ಅಳವಡಿಸಿಕೊಡಬೇಕೆಂಬುವನ್ನು ಪ್ರತ್ಯೇಕಿಸುವ ಸಣ್ಣ ಪ್ರಕರಣವಿದು. ಸಾಧಕರಿಗೆ ಅಮೂಲ್ಯವಾದದ್ದು. ಮೂಲಶ್ಲೋಕಗಳು, ಭಾವಾರ್ಥ ವಿವರಣೆ- ಇಷ್ಟೂ ಇವೆ. (ನಾಲ್ಕನೆಯ ಮುದ್ರಣ: 1989 ಪ್ರ. ಕ್ರೌನ್ 4+60)

10. ಗಣೇಶಾಷ್ಟಕ: ಗಣೇಶ್ ಪುರಾಣದಿಂದ ಆರಿಸಿದ ಸ್ತೋತ್ರ ಪ್ರಪಂಚವೆಲ್ಲವೂ ಬ್ರಹ್ಮವೇ ಎಂಬ ಸಿದ್ಧಾಂತವನ್ನು ಮನೋಹರ ರೀತಿಯಿಂದ ವಿವರಿಸಿರುವ ಈ ಸ್ತೋತ್ರಕ್ಕೆ ತಿಳಿಗನ್ನಡದ ಭಾವಾರ್ಥವನ್ನೂ ವಿವರಣೆಯನ್ನೂ ಜೋಡಿಸಿದೆ. (ಮೂರನೆಯ ಮುದ್ರಣ: 1998. ಕ್ರೌನ್ 4+25)

11. ಶ್ರೀರಾಮಗೀತೆ ಮತ್ತು ವಾಗ್ದೇವೀ ಸ್ತೋತ್ರ: ಅಧ್ಯಾತ್ಮರಾಮಾಯಣದಿಂದ ಆರಿಸಿದ ಭಾಗವಿದ್ದು ಶ್ರೀರಾಮನು ಲಕ್ಷ್ಮಣನಿಗೆ ಮಾಡಿದ ಅಮೋಘವಾದ ಉಪದೇಶವು ಇದರಲ್ಲಿದೆ. ಇದರಲ್ಲಿ ಮಹಾವಾಕ್ಯ ವಿಚಾರವೂ, ಪರಮಾತ್ಮನಲ್ಲಿ ಪ್ರಪಂಚವನ್ನೆಲ್ಲ ಲಯಗೊಳಿಸಿಕೊಳ್ಳುವ ಸಾಧನಕ್ರಮವೂ ಉಕ್ತವಾಗಿದೆ. ಜ್ಞಾನಕ್ಕೆ ಭಕ್ತಿಯೇ ಸಾಧನವೆಂದೂ ಪ್ರತಿಪಾದಿಸಿದೆ. ವಾಗ್ದೇವಿ ಸ್ತೋತ್ರವನ್ನು ಪ್ರತಿದಿನವೂ ಕೀರ್ತನೆ ಮಾಡುವದರಿಂದ ಮನಸ್ಸಿನಲ್ಲಿ ಹರ್ಷವೂ, ಭಗವಂತನಲ್ಲಿ ಅನುರಾಗವೂ ಉಂಟಾಗುವದು. ಪರಮ ಪುರುಷಾರ್ಥಕ್ಕೆ ಇದೇ ನಿಚ್ಚಣಿಕೆಯು.

(ಮೂರನೆಯ ಮುದ್ರಣ 1999 ಪ್ರ. ಕ್ರೌನ್ 10+44)

12. ದಕ್ಷಿಣಾಮೂರ್ತಿಸ್ತೋತ್ರ: ಸಿದ್ಧಾಂತ ಪ್ರಧಾನವಾದ ಈ ಸ್ತೋತ್ರದಲ್ಲಿ ಗುರುಮೂರ್ತಿಯಾದ ಪರಮೇಶ್ವರನ ತತ್ತ್ವವನ್ನು ಹತ್ತು ಶ್ಲೋಕಗಳಲ್ಲಿ ವರ್ಣಿಸಿರುವದನ್ನು ಶ್ರೀಶ್ರೀಗಳವರು ತಮ್ಮ ವಿಸ್ತಾರವಾದ ಕನ್ನಡ ವಿವರಣೆಯಲ್ಲಿ ಅಂಗೈನಲ್ಲಿರುವ ನೆಲ್ಲಿಯಕಾಯಿಯಂತೆ ಸುಸ್ಪಷ್ಟವಾಗಿ ಪ್ರತಿಪಾದಿಸಿರುತ್ತಾರೆ. ಆತ್ಮತತ್ತ್ವ ಜಿಜ್ಞಾಸುಗಳಿಗೆ ಇದೊಂದು ಕಾಮಧೇನುವಂತಿದೆ

(ನಾಲ್ಕನೆಯ ಮುದ್ರಣ: 1992 ಡೆಮ್ಮಿ 4+72)

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

ಅ.ಪ್ರ.ಕಾ. ಹೊಳೇನರಸೀಪುರ
ಹಾಸನ ಜಿಲ್ಲಾ 573211
ದೂರವಾಣಿ: 08175-273820

ಅ.ಪ್ರ.ಕಾ. 68, 2ನೇ ಬ್ಲಾಕ್
ತ್ಯಾಗರಾಜನಗರ, ಬೆಂಗಳೂರು-28
ದೂರವಾಣಿ: 080-26765548



## ಸಂಸ್ಥಾಪಕರ ಸ್ಮರಣೆ

ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯ ಸರ್ವದಾ ಸ್ಮರಣೀಯರಾದ ಶ್ರೀ ಶಂಕರಭಗವತ್ಪಾದರದು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮರು - ವೈ. ಸುಬ್ಬರಾಯರು, ಜನನ 5-1-1880), ಶ್ರೀ ಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ ಮಂಥನಗಳಿಂದ, ತಮ್ಮ ವಿಶಿಷ್ಟಸಂಶೋಧನಾ ಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯ ಭಾಷ್ಯಗಳಿಗೆ ಹತ್ತಿದ್ದ ಕಳೆಯನ್ನು, ಮುತ್ತಿದ್ದ ಧೂಳನ್ನು ತೊಡೆದು ಶಾಂಕರವೇಂದಾಂತದ ನೈಜ ತಿರುಳನ್ನು ಕಂಡುಕೊಂಡರು. ಶಾಂಕರ ವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಪ್ರತಿಪಾದಕರಾದರು, **ಅಭಿನವ ಶಂಕರ ರಾದರು.**

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತ ಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **ಪುರುಷ ಸರಸ್ವತಿ** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರ ಸಂಪರ್ಕ, ಅಧ್ಯಾತ್ಮ ಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀ ಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳು ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹ ಭಾರತೀಮಹಾಸ್ವಾಮಿಗಳವರಿಂದ ಭಾಷ್ಯಶಾಂತಿಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರುಗನ್ನು ನೀಡಿದವು.

1937 ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರ ವೇದಾಂತಕ್ಕೆ ಅರ್ಪಿಸಿಕೊಂಡರು. 1948 ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀ ಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) **ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ.**

ಪೂಜ್ಯರು 1975ನೇ ಆಗಸ್ಟ್ 5 ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥